ಬೆಂಗಳೂರು
ಗುರುವಾರ, 30 ಏಪ್ರಿಲ್ 2026
ಸಂಪುಟ 33, ಸಂಚಿಕೆ 179, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬಿಜೆಪಿಗೆ ಬಂಗಾಳ?
ಮತದಾನೋತ್ತರ ಸಮೀಕ್ಷೆ
• ಪುಟ 2

ರಾಜ್ಯದಲ್ಲಿ ₹653 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ

ಬೆಂಗಳೂರು: ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಬಹುದೊಡ್ಡ ಸವಾಲಾಗಿ ಪರಿಣಮಿಸಿರುವ ನಿಷೇಧಿತ ಮಾದಕ ವಸ್ತು ಜಾಲದ ವಿರುದ್ಧದ ಕಾರ್ಯಾಚರಣೆ ತೀವ್ರಗೊಂಡಿದ್ದರು, ಕಳೆದ ಮೂರು ವರ್ಷ ನಾಲ್ಕು ತಿಂಗಳ ಅವಧಿಯಲ್ಲಿ ರಾಜ್ಯಾದ್ಯಂತ ಪೊಲೀಸರು ಬರೋಬ್ಬರಿ 653 ಕೋಟಿ ರೂ. ಮೌಲ್ಯದ ಡ್ರಗ್ಸ್ ಪತ್ತೆಹಚ್ಚಿದ್ದು, ಒಟ್ಟು 18,593 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ರಾಜಧಾನಿ ಬೆಂಗಳೂರು ಮಾದಕ ವಸ್ತು ಮಾರಾಟದ ಕೇಂದ್ರಬಿಂದುವಾಗಿ ಗುರುತಿಸಿಕೊಳ್ಳುತ್ತಿದೆ. 2026ರ ಕೇವಲ ನಾಲ್ಕು ತಿಂಗಳಲ್ಲಿ ಬೆಂಗಳೂರಿನಲ್ಲಿ 130.18 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. 2024 ರಿಂದ 2026ರ ಏಪ್ರಿಲ್ ಅಂತ್ಯದ ವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 25,500 ಕೆ.ಜಿ.ಗೂ ಅಧಿಕ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

2025ರಲ್ಲಿ ಸಿಸಿಬಿ ಪೊಲೀಸರ ಕ್ರಮ: ಪ್ರಸಕ್ತ ವರ್ಷದಲ್ಲಿ ಸಿಸಿಬಿ ಪೊಲೀಸರು ನಡೆಸಿದ ಕಾರ್ಯಾಚರಣೆಗಳಲ್ಲಿ ಗಮನಾರ್ಹ ಯಶಸ್ಸು ಲಭಿಸಿದೆ. ಈ ಅವಧಿಯಲ್ಲಿ ಒಟ್ಟು 71 ಪ್ರಮುಖ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದ್ದು, ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ 112 ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಲ್ಲಿ 85 ಮಂದಿ ಭಾರತೀಯ ಪ್ರಜೆಗಳಾಗಿದ್ದರೆ, 27 ಮಂದಿ ವಿದೇಶಿ ಪ್ರಜೆಗಳಾಗಿದ್ದಾರೆ. ಈ ಕಾರ್ಯಾಚರಣೆಗಳ ವೇಳೆ ಒಟ್ಟು 170.64 ಕೆ.ಜಿ. ವಿವಿಧ ಮಾದರಿಯ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಜಪ್ತಿ ಮಾಡಲಾದ ಈ ಮಾದಕ ದ್ರವ್ಯಗಳ ಒಟ್ಟು ಅಂದಾಜು ಮೌಲ್ಯ ಬರೋಬ್ಬರಿ 115.49 ಕೋಟಿ ರೂ.ಎಂದು ಅಂದಾಜಿಸಲಾಗಿದೆ.



> ರಾಜ್ಯದಲ್ಲಿ ಒಂದು ದಿನವಾದರೂ ಡ್ರಗ್ಸ್ ಸಿಗದ ರೀತಿಯಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸಬೇಕು. ಬೆಂಗಳೂರು ಸೇರಿದಂತೆ ಇಡೀ ರಾಜ್ಯವನ್ನು ಡ್ರಗ್ಸ್ ಮುಕ್ತಗೊಳಿಸುವುದೇ ನಮ್ಮ ಸರ್ಕಾರದ ಗುರಿ. ಡ್ರಗ್ಸ್ ಸಾಗಾಟ, ಉತ್ಪಾದನೆ ಮತ್ತು ಉಪಯೋಗ ಈ ಮೂರೂ ವಿಷಯಗಳ ಬಗ್ಗೆ ಪೊಲೀಸರು ತೀವ್ರ ನಿಗಾ ವಹಿಸಬೇಕು.
> ■ ಡಾ.ಜಿ.ಪರಮೇಶ್ವರ, ಗೃಹ ಸಚಿವ

ಎರಡುವರೆ ವರ್ಷದಲ್ಲಿ 1,167 ಜನ ಗಡೀಪಾರು: ರಾಜ್ಯದಲ್ಲಿ ಕಾನೂನು ಬಾಹಿರ ಚಟುವಟಿಕೆ ಹಾಗೂ ಮಾದಕ ವಸ್ತುಗಳನ್ನು ಮಾರಾಟ ಮಾಡಲು ಮುಂದಾಗಿದ್ದ 1,167 ಜನ ವಿದೇಶಿಗರನ್ನು ಗಡೀಪಾರು ಮಾಡಲಾಗಿದೆ. 2024ರಲ್ಲಿ 339 ವಿದೇಶಿಗರು, 2025ರಲ್ಲಿ 401 ಹಾಗೂ 2026ರ ಏಪ್ರಿಲ್ ಅಂತ್ಯದ ವೇಳೆಗೆ 427 ಜನರನ್ನು ಗಡೀಪಾರು ಮಾಡಲಾಗಿದೆ. ಇದರಲ್ಲಿ 286 ಜನ ಬಾಂಗ್ಲಾದೇಶದವರನ್ನು ಭಾರತದ ಗಡಿ ಪ್ರದೇಶದ ಹತ್ತಿರಕ್ಕೆ ಕರೆದುಕೊಂಡು ಹೋಗಿ ಬಿಡಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.

ವರ್ಷವಾರು ಅಂಕಿ ಅಂಶಗಳ ವಿವರ

- **2023:** 6,767 ಪ್ರಕರಣಗಳು ದಾಖಲಾಗಿದ್ದು, 133.95 ಕೋಟಿ ರೂ. ಮೌಲ್ಯದ 11,257 ಕೆ.ಜಿ ಡ್ರಗ್ಸ್ ಜಪ್ತಿ.
- **2024:** 4,188 ಪ್ರಕರಣಗಳಡಿ 196 ಕೋಟಿ ರೂ. ಮೌಲ್ಯದ 6,066 ಕೆ.ಜಿ ಮಾದಕ ವಸ್ತು ವಶ.
- **2025:** 6,827 ಪ್ರಕರಣಗಳಲ್ಲಿ 287 ಕೋಟಿ ರೂ.ಮೌಲ್ಯದ 7,421 ಕೆ.ಜಿ ಡ್ರಗ್ಸ್ ಪತ್ತೆ.
- **2026 (ಏಪ್ರಿಲ್ ವರೆಗೆ):** 811 ಪ್ರಕರಣ ದಾಖಲಾಗಿದ್ದು, 166.18 ಕೋಟಿ ರೂ. ಮೌಲ್ಯದ 756 ಕೆ.ಜಿ. ಡ್ರಗ್ಸ್ ಜಪ್ತಿ ಮಾಡಲಾಗಿದೆ.

ಪರಿಶೀಲನೆ...



ಬೆಂಗಳೂರಿನಲ್ಲಿ ಬುಧವಾರ ಸಂಜೆ ಬಿರುಗಾಳಿ ಮಳೆಗೆ ಶಿವಾಜಿನಗರ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದ ಪ್ರದೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಿರುಸುದ್ದಿ

ವಿದ್ಯಾರ್ಥಿ ಆತ್ಮಹತ್ಯೆ: ಮೂವರು ಪೊಲೀಸರ ಅಮಾನತು

ಧಾರವಾಡ: ಪೊಲೀಸರ ಕಿರುಕುಳದಿಂದ ಬಿಎಸ್ಸಿ ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾಗಿರಿ ಪೊಲೀಸ್ ಠಾಣೆಯ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಡ್ರಗ್ಸ್ ಡ್ರೈವ್ ವೇಳೆ ಸಿಕ್ಕಿಬಿದ್ದವರಿಂದ ಪೊಲೀಸರು ಹಣ ಪಡೆಯುವುದು ಸಾಬೀತಾಗಿದೆ. ಹೆಡ್ ಕಾನ್ಸ್‌ಟೇಬಲ್ ಚಂದ್ರು ನಡುವಿನಮನಿ, ಕಾನ್ಸ್‌ಟೇಬಲ್‌ಗಳಾದ ಕಿರಣ್ ದೊಡ್ಡನವರ್ ಹಾಗೂ ಸೈಯದ್ ತಹಶೀಲ್ದಾರ್ ಅಮಾನತುಗೊಂಡ ಠಾಣೆಯ ಸಿಬ್ಬಂದಿ. ಇಲ್ಲಿಯ ಗಿರಿನಗರದ, ಮೂಲತಃ ಬಾಗಲಕೋಟ ಜಿಲ್ಲೆಯ ಆದಿತ್ಯಾ ಮ್ಯಾಗೇರಿ ಆತ್ಮಹತ್ಯೆ ಪ್ರಕರಣದಲ್ಲಿ ಈ ಮೂವರನ್ನು ಅಮಾನತು ಮಾಡಲಾಗಿದೆ. ಗಾಂಜಾ ಸೇವನೆಯ ಆರೋಪದಡಿ ಆದಿತ್ಯಾ ಮ್ಯಾಗೇರಿ ಸೇರಿದಂತೆ ಹತ್ತು ಜನ ವಿದ್ಯಾರ್ಥಿಗಳನ್ನು ವಿದ್ಯಾಗಿರಿ ಠಾಣೆ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದರು. ಆದರೆ, ಗಾಂಜಾ ಸೇವನೆಯ ವರದಿಯಲ್ಲಿ ಗಾಂಜಾ ಸೇವನೆ ಮಾಡಿರಲಿಲ್ಲ ಎಂಬ ವರದಿ ಬಂದಿತ್ತು. ಇಷ್ಟಾಗಿಯೂ ಈ ಪ್ರಕರಣದಿಂದ ಹೊರ ಬರಲು ಪೊಲೀಸರು ಹಣ ಕೇಳಿದ್ದರು. ತಂದೆ ಇಲ್ಲದ ತಾಯಿ ಆಶ್ರಯದಲ್ಲಿದ್ದ ಆದಿತ್ಯಾ ಈ ವಿಚಾರವಾಗಿ ಸೋಮವಾರ ಮನನೊಂದು ಆದಿತ್ಯಾ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದನು. ಪ್ರಕರಣ ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಇಲಾಖೆ ಇದೀಗ ಮೂವರನ್ನು ಅಮಾನತು ಮಾಡಿದೆ.

ಭೀಕರ ಅಪಘಾತ: ಮೂವರ ಮರಣ

ಕುಂದಾಪುರ: ಕಾಲೇಜು ವಿದ್ಯಾರ್ಥಿಗಳಿದ್ದ ಬಸ್ಸೊಂದು ರಸ್ತೆ ಬದಿ ನಿಂತಿದ್ದ ಟ್ಯಾಂಕರ್ ಮತ್ತು ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಬಸ್ಸಿನಲ್ಲಿದ್ದ ಮೂವರ ಮೃತಪಟ್ಟಿರುವ ದಾರುಣ ಘಟನೆ ತ್ರಾಸಿ ಸಮೀಪದ ಮರವಂತೆ ಬೀಚ್ ಬಳಿ ಬುಧವಾರ ಮಧ್ಯಾಹ್ನ ವೇಳೆ ನಡೆದಿದೆ. ರಘು ಯಾನೆ ಉಮೇಶ, ರಂಗನಾಥ ಮತ್ತು ಹೇಮಂತ್ ಮೃತಪಟ್ಟ ದುರ್ದೈವಿಗಳು. ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದ ಕುವೆಂಪು ಯೂನಿವರ್ಸಿಟಿಯ ರಂಬಾಪುರಿ ಕಾಲೇಜಿನ ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿಗಳು ಪ್ರವಾಸದ ನಿಮಿತ್ತ ಭಾನುವಾರ ಹೊರಟಿದ್ದು, ದಾಂಡೇಲಿ, ಹೊನ್ನಾವರ ಕಡೆಯಿಂದ ಪ್ರವಾಸ ಮುಗಿಸಿ, ತ್ರಾಸಿ ಮರವಂತೆ ಬೀಚ್ ಬಳಿ ರಾ.ಹೆ.66ರಲ್ಲಿ ಈ ದುರ್ಘಟನೆ ಸಂಭವಿಸಿದೆ.

ಎಸ್‌ಡಿಎ ಸಿಬ್ಬಂದಿ ಲೋಕಾ ಬಲೆಗೆ

ಕೊಪ್ಪಳ: ಪ್ರಾದೇಶಿಕ ಸಾರಿಗೆ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ರಂಜಿತ್ ಎಂಬುವವರು ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಶೋರೂಮ್ ಟ್ರೇಡ್ ಲೈಸೆನ್ಸ್ ನೀಡಲು ಹಣಕ್ಕೆ ಬೇಡಿಕೆಯಿಟ್ಟಿದ್ದ ಈ ಸಿಬ್ಬಂದಿಯನ್ನು ರೆಡ್ ಹ್ಯಾಂಡ್ ಆಗಿ ಹಿಡಿಯಲಾಗಿದೆ. ದೂರುದಾರರಾದ ನಯೀಮ್ ಎಂಬುವವರು ಕುಷ್ಟಗಿ, ಕಾರಟಗಿ ಹಾಗೂ ಹುಲಿಗಿಯಲ್ಲಿ ಹೊಸ ಶೋರೂಮ್‌ಗಳನ್ನು ತೆರೆಯಲು ಪರವಾನಿಗೆ ಕೋರಿ ಮೂರು ತಿಂಗಳ ಹಿಂದೆ ಅರ್ಜಿ ಸಲ್ಲಿಸಿದ್ದರು. ಈ ಪರವಾನಿಗೆ ನೀಡಲು ಎಸ್‌ಡಿಎ ರಂಜಿತ್ ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎನ್ನಲಾಗಿದೆ. ನಯೀಮ್ ಅವರು ನೀಡಿದ ದೂರಿನನ್ವಯ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದರು. ರಂಜಿತ್ ಅವರು 21 ಸಾವಿರ ರೂಪಾಯಿ ಲಂಚದ ಹಣವನ್ನು ವಿನಯ್ ಎಂಬಾತನ ಕೈಗೆ ನೀಡುವಂತೆ ಸೂಚಿಸಿದಾಗ, ರಾಯಚೂರು ಲೋಕಾಯುಕ್ತ ಡಿವೈಎಸ್‌ಪಿ ಲೋಕೇಶ್ ನೇತೃತ್ವದ ತಂಡ ದಾಳಿ ನಡೆಸಿ ಇಬ್ಬರನ್ನೂ ವಶಕ್ಕೆ ಪಡೆದಿದೆ.

₹136 ಕೋಟಿ ಟೆಂಡರ್ ನಿತ್ಯ 12.5 ಟನ್ ತುಪ್ಪ: ಡಿ.ಕೆ.ಸುರೇಶ್

ತಿರುಪತಿಗೆ ನಂದಿನಿ ತುಪ್ಪ

ಬೆಂಗಳೂರು: ತಿರುಪತಿಗೆ ನಂದಿನಿ ತುಪ್ಪ ಪೂರೈಕೆಗೆ 136 ಕೋಟಿ ರೂ. ಮೊತ್ತದಲ್ಲಿ ಬಮೂಲ್ ಟೆಂಡರ್ ಪಡೆದಿದ್ದು, ಪ್ರತಿನಿತ್ಯ 12.5 ಟನ್‌ನಂತೆ ಮುಂದಿನ 6 ತಿಂಗಳು ತುಪ್ಪ ಸರಬರಾಜಾಗಲಿದೆ. ಬಮುಲ್ ಒಕ್ಕೂಟ ಟಿಟಿಡಿ ಜೊತೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಂಡಿದೆ ಎಂದು ಬಮುಲ್ ಅಧ್ಯಕ್ಷ ಸಂಸದ ಡಿ.ಕೆ. ಸುರೇಶ್ ತಿಳಿಸಿದರು.

ತಿರುಪತಿಗೆ ತುಪ್ಪ ಪೂರೈಕೆ ವಾಹನಗಳಿಗೆ ಹಸಿರು ಬಾವುಟ ತೋರಿ ಬೀಳ್ಕೊಟ್ಟ ನಂತರ ಬಮೂಲ್ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಂದಿನ 6 ತಿಂಗಳ ಕಾಲ ತಿರುಮಲ ಸನ್ನಿಧಾನಕ್ಕೆ ಬಮುಲ್‌ನಿಂದ 20 ಲಕ್ಷ ಕೆ.ಜಿ ತುಪ್ಪವನ್ನು ಸರಬರಾಜು ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸಾಗಾಣಿಕೆಗೆ ಡಿಜಿಟಲ್ ಲಾಕ್ ತಂತ್ರಜ್ಞಾನ ಬಳಸಿಕೊಳ್ಳಲಾಗಿದೆ. ನಾವು ಕೊಟ್ಟ ಪಾಸ್‌ವರ್ಡ್ ಅಲ್ಲಿ ನಮೂದಿಸಿದರೆ ಮಾತ್ರ ತೆರೆಯಬಹುದು. ಗ್ರಾಹಕರಿಗೂ ಸಹ ಇದೆ ರೀತಿ ಗುಣಮಟ್ಟದ ಪದಾರ್ಥ ನೀಡುತ್ತಿದ್ದೇವೆ. ನಂದಿನಿ ಹೆಸರನ್ನು ದುರ್ಬಳಕೆ ಮಾಡಿಕೊಂಡು ಮಾರುಕಟ್ಟೆಯಲ್ಲಿ ಅಕ್ರಮ ಎಸಗುತ್ತಿರುವವರ ವಿರುದ್ಧ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ ಅಂತಹವರ ವಿರುದ್ಧ ಒಕ್ಕೂಟದಿಂದ ದೂರುಗಳನ್ನು ನೀಡಲಾಗಿದೆ ಎಂದರು.

ನಾವು ಈಗ 1 ಕೋಟಿ ಲೀಟರ್ ಹಾಲಿನ ಸಂಗ್ರಹಣೆ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ವಿಶೇಷ ಹಾಲಿನ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುವ ಬಗ್ಗೆ ಆಲೋಚನೆಯಿದೆ. ದೇಸಿ ತಳಿ ಹಾಲು, ಕೊಬ್ಬು ರಹಿತ, ಲ್ಯಾಕ್ಟೋಸ್ ಫ್ರೀ, ಪ್ರೋಬಯಾಟಿಕ್ ಮೊಸರು ಹೀಗೆ ಅನೇಕ ಉತ್ಪನ್ನಗಳ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ಮಾರುಕಟ್ಟೆಗೆ ಅನುಗುಣವಾಗಿ ನಾವು ನೀಡಬೇಕಿದೆ. ಇದರ ಬಗ್ಗೆ ಒಂದಷ್ಟು ಸಂಶೋಧನೆ ಕೂಡ ನಡೆಸುತ್ತಿದ್ದೇವೆ ಎಂದರು.



ದರ ಏರಿಕೆ ಪ್ರಸ್ತಾವನೆ ಸದ್ಯಕ್ಕಿಲ್ಲ

ಸದ್ಯಕ್ಕೆ ಹಾಲಿನ ದರ ಏರಿಕೆ ಪ್ರಸ್ತಾವನೆ ಇಲ್ಲ. ಹಾಲಿನ ದರ ಮಾರುಕಟ್ಟೆಯಲ್ಲಿ ಎಷ್ಟಿದೆ ಎಂದು ಅಧ್ಯಯನ ಮಾಡಲಾಗುವುದು. ನಮ್ಮಲ್ಲೇ ಒಂದಷ್ಟು ಲೋಪದೋಷಗಳಿವೆ. ಅದನ್ನು ಸರಿಪಡಿಸಲು ಸರ್ಕಾರದ ಮುಂದೆ ಅನುಮತಿ ಕೇಳುತ್ತೇವೆ. ಉತ್ಪನ್ನಗಳ ಪ್ಯಾಕಿಂಗ್ ಸಲಕರಣೆಗಳ ಖರೀದಿ ವೆಚ್ಚ ಹೆಚ್ಚಳವಾಗುತ್ತಿದೆ. ಈ ಬಗ್ಗೆ ಕೆಎಂಎಫ್ ಜೊತೆ ಮಾತನಾಡಿ ಚಿಂತನೆ ಮಾಡುತ್ತೇವೆ. ಖಾಸಗಿಯವರು ಹಾಲಿನ ದರವನ್ನು 2 ರೂಪಾಯಿ ಹೆಚ್ಚಳ ಮಾಡಿದ್ದಾರೆ. ನಾವು ಸರ್ಕಾರದ ಅಧೀನದಲ್ಲಿ ಇರುವ ಕಾರಣಕ್ಕೆ ಇದನ್ನು ಸರ್ಕಾರದ ಗಮನಕ್ಕೆ ತರುತ್ತೇವೆ. ನಾವು ಗುಣಮಟ್ಟದ ಪದಾರ್ಥ ನೀಡಬೇಕು ಎನ್ನುವ ಗುರಿ ಹೊಂದಿದ್ದೇವೆ ಎಂದರು.

ದಿನಕ್ಕೆ 20 ಲಕ್ಷ ಲೀಟರ್ ಹಾಲು ಸಂಗ್ರಹ ಗುರಿ

ಬಮುಲ್‌ನಲ್ಲಿ ಪ್ರತಿನಿತ್ಯ 17.5 ಲಕ್ಷ ಲೀಟರ್ ಹಾಲನ್ನು ಪ್ರತಿನಿತ್ಯ ಶೇಖರಣೆ ಮಾಡಲಾಗುತ್ತಿದೆ. ಈ ವರ್ಷದ ನಮ್ಮ ಗುರಿ 20-21 ಲಕ್ಷ ಲೀಟರ್ ಇದೆ. ಹಾಲಿನ ಹೆಚ್ಚಳಕ್ಕೆ ಉತ್ಪಾದನಾ ಸಂಘಗಳಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿದೆ. ಹೆಚ್ಚಿನ ಹೆಣ್ಣು ಕರುಗಳೇ ಆಗಬೇಕು ಎಂದು ಕಳೆದ ಜನವರಿಯಿಂದ ಕಾರ್ಯಕ್ರಮ ರೂಪಿಸಿ ಪ್ರತಿಹಂತದಲ್ಲಿಯೂ ಮೂರು ಲಕ್ಷ ಸೀಮನ್ಸ್ ಖರೀದಿ ಮಾಡಿ ರಾಸುಗಳಿಗೆ ಹಾಕಲಾಗುತ್ತಿದೆ. ಹಸುಗಳ ಬೆಳವಣಿಗೆ, ಆರೋಗ್ಯದ ಬಗ್ಗೆ ತರಬೇತಿ ನೀಡಲಾಗುತ್ತಿದೆ ಎಂದರು.

ತಂತ್ರಜ್ಞಾನಕ್ಕೆ ಸಚಿವ ಪರಮೇಶ್ವರ ಚಾಲನೆ

112 ಸೇವೆಯಲ್ಲಿ ಎಐ

ಬೆಂಗಳೂರು: ಸಿಲಿಕಾನ್ ಸಿಟಿಯ ರಕ್ಷಣಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ನಗರ ಪೊಲೀಸ್ ಇಲಾಖೆಯು ನಮ್ಮ 112 ಸೇವೆ ಬಹುಭಾಷಾ ಎಐ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

ಬುಧವಾರ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಈ ಹೊಸ ತಂತ್ರಜ್ಞಾನಕ್ಕೆ ಚಾಲನೆ ನೀಡಿದರು.

ದೇಶದಲ್ಲೇ ಮೊದಲು: 10ಕ್ಕೂ ಹೆಚ್ಚು ಭಾಷೆಗಳಲ್ಲಿ ಲಭ್ಯ: ದೇಶದಲ್ಲಿ ಮೊದಲ ಬಾರಿಗೆ ಇಂತಹ ಸುಧಾರಿತ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಜಾರಿಗೆ ತರಲಾಗಿದೆ. ಕೃತಕ ಬುದ್ಧಿಮತ್ತೆ (ಎಐ) ಆಧರಿತ ಈ ಸೇವೆಯು ಕನ್ನಡ, ಹಿಂದಿ, ತಮಿಳು, ಮಲೆಯಾಳ, ಮರಾಠಿ, ಅಸ್ಸಾಮಿ ಸೇರಿದಂತೆ ಪ್ರಮುಖ ಭಾರತೀಯ ಭಾಷೆಗಳು ಮಾತ್ರವಲ್ಲದೆ ವಿದೇಶಿ ಭಾಷೆಗಳಾದ ಸ್ಪ್ಯಾನಿಷ್, ಫ್ರೆಂಚ್ ಹಾಗೂ ಅರೇಬಿಕ್‌ನಂತಹ ಭಾಷೆಗಳನ್ನೂ ಒಳಗೊಂಡಿದೆ. ನಗರದಲ್ಲಿ ನೆಲೆಸಿರುವ ಹೊರರಾಜ್ಯದ ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ವಿದೇಶಿ ಪ್ರವಾಸಿಗರಿಗೆ ತುರ್ತು ಸಂದರ್ಭದಲ್ಲಿ ಭಾಷೆಯ ಸಮಸ್ಯೆ ಎದುರಾಗಬಾರದು ಎಂಬ ಉದ್ದೇಶದಿಂದ ಈ ಸ್ವಯಂ ಚಾಲಿತ ಭಾಷಾಂತರ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ ಎಂದರು. ಈ ವ್ಯವಸ್ಥೆಯಿಂದಾಗಿ ಕರೆ ಮಾಡುವವರ ಮಾಹಿತಿಯನ್ನು ಎಐ ತಂತ್ರಜ್ಞಾನವು ತಕ್ಷಣವೇ ಅರ್ಥೈಸಿ ದಾಖಲಿಸಿ ಕೊಳ್ಳುವುದರಿಂದ, ಪೊಲೀಸರು ಸ್ಥಳಕ್ಕೆ ತಲುಪುವ ಸಮಯ ಗಣನೀಯವಾಗಿ ಕಡಿಮೆಯಾಗಲಿದೆ.



ಐಪಿಎಲ್ ಪಂದ್ಯಗಳ ಯಶಸ್ವಿ ಭದ್ರತೆ

ಇದೇ ವೇಳೆ ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯಾವಳಿಯ ನಿರ್ವಹಣೆಯ ಬಗ್ಗೆಯೂ ಗೃಹ ಸಚಿವರು ಮಾಹಿತಿ ನೀಡಿದರು. ಪಂದ್ಯಗಳ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ 500ಕ್ಕೂ ಹೆಚ್ಚು ಸಿಸಿಟಿವಿ ಮತ್ತು ಡ್ರೋನ್ ಕ್ಯಾಮೆರಾಗಳ ಮೂಲಕ ಎಐ ಆಧಾರಿತ ನಿಗಾ ವಹಿಸಲಾಗಿತ್ತು. ಕ್ಯೂಆರ್ ಕೋಡ್ ಆಧಾರಿತ ಡಿಜಿಟಲ್ ಟಿಕೆಟ್ ಜಾರಿಯಿಂದ ಅಕ್ರಮ ಟಿಕೆಟ್ ಮಾರಾಟಕ್ಕೆ ಕಡಿವಾಣ ಬಿದ್ದಿದೆ. ವಿಶೇಷವಾಗಿ, ಮೆಟ್ರೊ ಸಂಚಾರಕ್ಕೆ ಐಪಿಎಲ್ ಟಿಕೆಟ್ ಬಳಸುವ ಅವಕಾಶದಿಂದಾಗಿ ಪ್ರತಿ ಪಂದ್ಯದಲ್ಲಿ ಸುಮಾರು 19ರಿಂದ 20 ಸಾವಿರ ಪ್ರೇಕ್ಷಕರು ಮೆಟ್ರೊ ಸೇವೆಯ ಲಾಭ ಪಡೆದಿದ್ದಾರೆ ಎಂದು ಅವರು ತಿಳಿಸಿದರು.

ಕೊಪ್ಪ ಗ್ರಾಮದಲ್ಲಿ ಸಾಮಾಜಿಕ ಬಹಿಷ್ಕಾರ

ಬೆಳಗಾವಿ: ತಾಲೂಕಿನ ಕೊಂಡಸಕೊಪ್ಪ ಗ್ರಾಮದ ಕುರುಬ ಸಮಾಜದ ಕುಟುಂಬವೊಂದರ ಮೇಲೆ ಅದೇ ಸಮಾಜದವರು ಸಾಮಾಜಿಕ ಬಹಿಷ್ಕಾರ ಹಾಕಿದ ಘಟನೆ ನಡೆದಿದ್ದು, ಅಲ್ಲದೇ ಆ ಕುಟುಂಬದ ಜೊತೆ ಮಾತನಾಡಿದವರಿಗೆ 5000 ರೂ. ದಂಡ ಹಾಗೂ ಮಾತನಾಡಿದವರ ಬಗ್ಗೆ ಮಾಹಿತಿ ಕೊಟ್ಟವರಿಗೆ 1000 ರೂಪಾಯಿ ಬಹುಮಾನ ಘೋಷಣೆ ಮಾಡಲಾಗಿದೆ.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತವರು ಕ್ಷೇತ್ರದಲ್ಲಿಯೇ ನಡೆದಿರುವ ಘಟನೆ ಭಾರಿ ಚರ್ಚೆಗೆ ಕಾರಣವಾಗಿದೆ. ಕೊಂಡುಸಕೊಪ್ಪ ಗ್ರಾಮದ ಕೆಲ ಪಂಚರು ದೇವಸ್ಥಾನ ಪೂಜೆ ಹಾಗೂ ಪ್ರೀತಿ ವಿಚಾರಕ್ಕೆ ಸಂಬಂಧಿಸಿದಂತೆ ಈ ಕ್ರಮ ಕೈಗೊಂಡಿದ್ದಾರೆ. ಈ ಬಗ್ಗೆ ಮಾತನಾಡಿದ ಆಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

ಗ್ರಾಮದ ಬೀರದೇವರ ಪೂಜಾರಿ ಆಗಿದ್ದ ಈ ಕುಟುಂಬಕ್ಕೆ ಸಹೋದರ ಸಂಬಂಧಿಗಳೇ ಬಹಿಷ್ಕಾರ ಹಾಕಿದ್ದಾರೆ ಎನ್ನಲಾಗುತ್ತಿದೆ. ಜತೆಗೆ ದೇವಾಲಯದ ಪೂಜೆ ವಿಚಾರದಲ್ಲಿ ಪಂಚ ಕಮಿಟಿ ಜೊತೆಗೆ ಭಿನ್ನಾಭಿಪ್ರಾಯ ಮೂಡಿತ್ತು. ದೇವಾಲಯದ ಪೂಜಾರಿ ಹೇಳುವ ಭವಿಷ್ಯಕ್ಕೆ ವಿರೋಧ ವ್ಯಕ್ತಪಡಿಸಿದ್ದರಂತೆ ಈ ಎರಡು ಕಾರಣ ಮುಂದಿಟ್ಟುಕೊಂಡು ಪಂಚ ಕಮಿಟಿಯಿಂದ ಕುಟುಂಬಕ್ಕೆ ಬಹಿಷ್ಕಾರದ ಶಿಕ್ಷೆ ಕೊಟ್ಟಿದ್ದಾರೆ ಎನ್ನುವ ಆರೋಪವಿದೆ.

ಬಹಿಷ್ಕಾರ ಮಾಡಿದ ಕುಟಂಬದ ಮನೆ ಮೇಲೆ ರಾತ್ರಿಯಾದರೆ ಕಲ್ಲುಗಳು ಬೀಳುತ್ತಿವೆಯಂತೆ. ಊರಲ್ಲಿ ಯಾರೂ ಮಾತನಾಡುತ್ತಿಲ್ಲ, ಮದುವೆ, ಕಾರ್ಯಕ್ರಮಗಳಿಗೆ ಆಹ್ವಾನ ನೀಡುತ್ತಿಲ್ಲ, ಐದು ವರ್ಷದ ಮಗುವನ್ನೂ ಜನರು ದೂರ ಇಟ್ಟಿದ್ದಾರೆ. ಈ ಸಂಬಂಧ ಪೊಲೀಸರಿಗೆ ದೂರು ನೀಡಲಾಗಿದೆ.

ಈ ಬಗ್ಗೆ ಖುದ್ದಾಗಿ ಕುಟುಂಬದವರು ಹಿರೇಬಾಗೇವಾಡಿ ಠಾಣೆಗೆ 10 ಮಂದಿಯ ವಿರುದ್ಧ ಲಿಖಿತ ದೂರು ನೀಡಿದ್ದಾರೆ. ಆದರೆ, ಇದುವರೆಗೆ ಎಫ್‌ಐಆರ್ ದಾಖಲಾಗಿಲ್ಲ ಎಂದು ಬಹಿಷ್ಕಾರಕ್ಕೆ ಒಳಗಾದ ರೇಣುಕಾ ನರಸೋಬಾ ಸಾಂಬ್ರೇಕರ್ ತಿಳಿಸಿದ್ದಾರೆ.



ಸತ್ಯಕ್ಕೆ ದೂರ

ವಿಠಲ ಕರೆಪ್ಪ ಸಾಂಬ್ರೇಕರ ಅವರನ್ನು ಊರಿನಿಂದ ಹೊರ ಹಾಕಿದ್ದೇವೆಂಬುದು ಸತ್ಯಕ್ಕೆ ದೂರ. ಸುಮಾರು ಗಂಟೆಗಳ ಕಾಲ ಸಭೆ ನಡೆಸಿ ಎಲ್ಲವರನ್ನು ಬಗೆಹರಿಸಲು ಪ್ರಯತ್ನಿಸಿದರೂ ಒಪ್ಪದೇ, ಕಾನೂನು ಹೋರಾಟಕ್ಕೆ ಹೋಗುವುದಾಗಿ ಹೇಳಿದ್ದಾರೆ. ದೇವರ ಕಾರ್ಣಿಕ ನಂಬುವುದಿಲ್ಲ ಎಂದ ಬಳಿಕ ಅಲ್ಲಿ ಹೋಗಬೇಡ ಎಂದಿದ್ದು, ನಿಜ. ಆದರೆ, ಸಮಾಜದಿಂದ ದೂರವಾಗಿಸಿ ದಂಡ ಹಾಕಿರುವ ಮಾತು ಸುಳ್ಳು ಎಂದು ಮಾಜಿ ಮಹಾಪೌರ ಯಲ್ಲಪ್ಪ ಕುರುಬರ ಸ್ಪಷ್ಟಪಡಿಸಿದರು.

ಸಿಎಂ ಕುರ್ಚಿಗಾಗಿ ಅಹಿಂದ ಜಪ: ಬಿ. ಶ್ರೀರಾಮುಲು

ವಿಜಯನಗರ: ಕಾಂಗ್ರೆಸ್ ಸರ್ಕಾರದಲ್ಲಿ ದಿನದಿಂದ ದಿನಕ್ಕೆ ಭಿನ್ನಮತ ಸ್ಫೋಟಗೊಳ್ಳುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೇವಲ ತಮ್ಮ ಕುರ್ಚಿ ಉಳಿಸಿಕೊಳ್ಳಲು ಮತ್ತೆ 'ಅಹಿಂದ' ಸಮಾವೇಶದ ಕಾರ್ಡ್ ಬಳಸುತ್ತಿದ್ದಾರೆ ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಟೀಕಿಸಿದ್ದಾರೆ.



ಹೊಸಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಅಧಿಕಾರಕ್ಕೆ ಯಾವಾಗ ಕಂಟಕ ಬರುತ್ತದೆಯೋ, ಆಗ ಅವರಿಗೆ ಅಹಿಂದ ವರ್ಗ, ಸಮಾವೇಶ ನೆನಪಾಗುತ್ತದೆ. ದೆಹಲಿಯಲ್ಲಿ ಯಾವ ಪುರುಷಾರ್ಥಕ್ಕೆ ಅಹಿಂದ ಸಮಾವೇಶ ಮಾಡುತ್ತಾರೆ ಎಂದು ಪ್ರಶ್ನಿಸಿದರು. ಒಳಮೀಸಲಾತಿ ಸಕ್ಸಸ್ ಆಗಿದೆ ಎಂದು ಪ್ರಿಯಾಂಕ್ ಖರ್ಗೆ ಅವರು ಸಿಹಿ ಹಂಚುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಜನರಿಗೆ ಮೋಸವಾಗಿದೆ. ಮುಡಾ ಪ್ರಕರಣದಲ್ಲಿ ಸಿಎಂ ಪರ ವಾದಿಸಲು ವಕೀಲರು ದೆಹಲಿಯಿಂದ ಬಂದಿದ್ದರು. ಆದರೆ, ಒಳಮೀಸಲಾತಿ ಕುರಿತ ಹೈಕೋರ್ಟ್ ವಿಚಾರಣೆಗೆ ಸರ್ಕಾರದ ಪರ ವಕೀಲರೇ ಹಾಜರಾಗಿಲ್ಲ, ಪರಿಣಾಮ ಎಸ್ ಸಿ, ಎಸ್ ಟಿ ಜನಾಂಗಕ್ಕೆ ಅನ್ಯಾಯವಾಗಿದೆ. ಹಿರಿಯ ನ್ಯಾಯವಾದಿ ಹಾಗೂ ಕಾಂಗ್ರೆಸ್ ನಾಯಕರಾದ ವಿ.ಎಸ್. ಉಗ್ರಪ್ಪ ಅವರು ನನ್ನ ಮಾವ. ಅವರಾದರೂ ಸತ್ಯವನ್ನು ಹೇಳಬೇಕು ಎಂದು ತಾಕೀತು ಮಾಡಿದರು.

ಕಾರು ಹರಿದು ಇಬ್ಬರ ಸಾವು

ಲಕ್ಷ್ಮೇಶ್ವರ (ಗದಗ): ವಾಯು ವಿಹಾರ ಮಾಡುತ್ತಿದ್ದ ಮೂವರ ಮೇಲೆ ಕಾರು ಹರಿದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಭೀಕರ ಘಟನೆ ನಡೆದಿದೆ. ಅಕ್ಕಿಗುಂದ ತಾಂಡಾದಲ್ಲಿ ಶಿಕ್ಷಕ ಸೇವೆ ಸಲ್ಲಿಸುತ್ತಿದ್ದ ಈಶ್ವರ ನಗರದ ಅಶೋಕ ಸರವಿ (51) ಹಾಗೂ ಈಶ್ವರ ನಗರದ ರಿಕ್ಷಾ ಚಾಲಕ ಶಿವಾನಂದ ಹುಲಕೋಟಿ (54) ಮೃತ ದುರ್ದೈವಿಗಳು. ಘಟನೆಯಲ್ಲಿ ಗಾಯಗೊಂಡಿರುವ ಶಿಕ್ಷಕ ಮಂಜುನಾಥ ಚಾಕಲಬ್ಬಿಗೆ ಪಟ್ಟಣದ ಸರಕಾರಿ ಸಮುದಾಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪರಿಸರ ಪ್ರೇಮಿಗಳಿಂದ ಪ್ರಧಾನಿ ಮೋದಿಗೆ ಪತ್ರ

ಬೆಂಗಳೂರು: ಸಾರ್ವಜನಿಕ ಭೂಮಿ ಅಥವಾ ಅರಣ್ಯ ಪ್ರದೇಶದಲ್ಲಿ ಮರ ಕಡಿಯುವುದನ್ನು ಜಾಮೀನು ರಹಿತ ಅಪರಾಧವೆಂದು ಪರಿಗಣಿಸಿ ಕಠಿಣ ದಂಡ ವಿಧಿಸಬೇಕು.ಭಾರತವು ಪ್ರಸ್ತುತ ಹವಾಮಾನ ವೈಪರೀತ್ಯದ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ದೇಶದಲ್ಲಿ ತಕ್ಷಣವೇ ಹವಾಮಾನ ತುರ್ತು ಪರಿಸ್ಥಿತಿ ಘೋಷಿಸಿ ಕ್ರಮ ಕೈಗೊಳ್ಳಬೇಕೆಂದು ಪರಿಸರಕ್ಕಾಗಿ ನಾವು ಸಂಘಟನೆ ಮತ್ತು ಪರಿಸರ ಪ್ರೇಮಿಗಳು ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ದೇಶದ ರೈತರು, ಕರಾವಳಿ ನಿವಾಸಿಗಳು ಮತ್ತು ನಗರದ ಬಡವರು ಈಗಾಗಲೇ ಬಿಸಿಗಾಳಿ, ಅನಿಶ್ಚಿತ ಮಳೆ ಹಾಗೂ ಕುಸಿಯುತ್ತಿರುವ ಅಂತರ್ಜಲ ಮಟ್ಟದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ.ಅರಣ್ಯಗಳು ಕೇವಲ ಸಂರಕ್ಷಣೆಯ ವಸ್ತುವಲ್ಲ, ಅವು ದೇಶದ ಪ್ರಮುಖ ಮೂಲಸೌಕರ್ಯಗಳಾಗಿವೆ. ಅರಣ್ಯಗಳು ಯಾವುದೇ ವಿದ್ಯುತ್ ವ್ಯಯಿಸದೆ ಭೂಮಿಯನ್ನು ತಂಪಾಗಿಸುತ್ತವೆ ಮತ್ತು ಅಂತರ್ಜಲ ಮರುಪೂರಣಕ್ಕೆ ನೆರವಾಗುತ್ತವೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಕಠಿಣ ಕಾನೂನು: ಸಾರ್ವಜನಿಕ ಭೂಮಿ ಅಥವಾ ಅರಣ್ಯ ಪ್ರದೇಶದಲ್ಲಿ ಮರ ಕಡಿಯುವುದನ್ನು ಜಾಮೀನು ರಹಿತ ಅಪರಾಧವೆಂದು ಪರಿಗಣಿಸಿ ಕಠಿಣ ದಂಡ ವಿಧಿಸಬೇಕು.ಮೂಲಸೌಕರ್ಯ ಅಥವಾ ನಗರೀಕರಣ ಹೆಸರಿನಲ್ಲಿ ಅರಣ್ಯ ನಾಶ ಮಾಡುವುದಕ್ಕೆ ತಕ್ಷಣವೇ ನಿರ್ಬಂಧ ಹೇರಬೇಕು.ನೀಲಗಿರಿ, ಅಕೇಶಿಯಾದಂತಹ ಸಸ್ಯಗಳ ಬದಲಿಗೆ ಸ್ಥಳೀಯ ಜೀವವೈವಿಧ್ಯದ ಮರಗಳನ್ನು ಬೆಳೆಸುವ ಕಡೆಗೆ ಗಮನ ಹರಿಸಬೇಕೆಂದು ಪತ್ರದಲ್ಲಿ ಆಗ್ರಹಿಸಲಾಗಿದೆ.

ವಿದ್ಯಾರ್ಥಿಗಳು ಕುಲಪತಿ ಕಚೇರಿಗೆ ನುಗ್ಗಿ ನಾಮಫಲಕಕ್ಕೆ ಮಸಿ ಬಳಿದು ಆಕ್ರೋಶ

ಕುವೆಂಪು ವಿವಿಯಲ್ಲಿ ಎನ್‌ಎಸ್‌ಯುಐನಿಂದ ಗದ್ದಲ

ಶಂಕರಘಟ್ಟ: ಕುವೆಂಪು ವಿವಿಯಲ್ಲಿನ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ಎನ್‌ಎಸ್‌ಯುಐ ಕಾರ್ಯಕರ್ತರು ಬುಧವಾರ ಕುವೆಂಪು ವಿವಿ ಆಡಳಿತ ಕಚೇರಿ ಮುಂದೆ ನಡೆಸಿದ ಪ್ರತಿಭಟನೆಯಲ್ಲಿ ಹಲವು ವಸ್ತುಗಳು ಧ್ವಂಸಗೊಂಡಿವೆ.

ಪ್ರತಿಭಟನೆ ನಡೆಸುತ್ತಿದ್ದ ವೇಳೆ ರೊಚ್ಚಿಗೆದ್ದ ವಿದ್ಯಾರ್ಥಿಗಳು ಕುಲಪತಿ ಕಚೇರಿಗೆ ನುಗ್ಗಿ ನಾಮಫಲಕಕ್ಕೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಕುಲಪತಿ ಕಚೇರಿ ಆವರಣಕ್ಕೆ ಪ್ರವೇಶಿಸಿ ಹೂವಿನ ಕುಂಡಗಳು, ಕುರ್ಚಿಗಳನ್ನು ಎತ್ತಿ ಬಿಸಾಕಿ ಪುಡಿಗೈದಿದ್ದಾರೆ. ಈ ವೇಳೆ ಹಲವು ವಸ್ತುಗಳು ಪುಡಿಪುಡಿಯಾಗಿವೆ.

ಕೂಡಲೇ ಸ್ಥಳಕ್ಕೆ ಆಗಮಿಸಿದ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಅವರಿಗೆ ಘೇರಾವ್ ಹಾಕಿದರು. ವಿವಿ ಅವ್ಯವಸ್ಥೆಗೆ ಇವರೇ ಕಾರಣ ಎಂದು ಕಿಡಿಕಾರಿದರು. ಕುವೆಂಪು ವಿವಿ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿ ವಿರೋಧಿ ನಡೆ ಅನುಸರಿಸುತ್ತಿದೆ. ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಚೆಲ್ಲಾಟವಾಡುತ್ತಿದೆ. ಕುಲಪತಿಗಳು ಅಧಿಕಾರ ಸ್ವೀಕರಿಸಿದಾಗಿನಿಂದಲೂ ವಿವಿಯಲ್ಲಿ ಅಧಿಕಾರಿಗಳು ಆಂತರಿಕ ಕಚ್ಚಾಟದಲ್ಲೇ ತೊಡಗಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಕಾಳಜಿ ವಹಿಸುತ್ತಿಲ್ಲವೆಂದು ನಂತರ ನಡೆದ ಪ್ರತಿಭಟನೆ ವೇಳೆ ದೂರಿದರು. ಕಳೆದ 5 ತಿಂಗಳ ಹಿಂದೆ ಪರೀಕ್ಷೆ ಬರೆದಿದ್ದ 1, 3 ಮತ್ತು 5ನೇ ಸೆಮಿಸ್ಟರ್‌ಗಳ ಫಲಿತಾಂಶ ಪ್ರಕಟಿಸಿಲ್ಲ, ಇತ್ತೀಚೆಗೆ ನಡೆದ ಪರೀಕ್ಷೆಗಳ ಮೌಲ್ಯಮಾಪನ ಮಾಡಿದ ಉಪನ್ಯಾಸಕರಿಗೆ ಮೌಲ್ಯಮಾಪನದ ಗೌರವಧನ ನೀಡದೇ ಇರುವುದರಿಂದ ಉಪನ್ಯಾಸಕರು ಮೌಲ್ಯಮಾಪನ ಬಹಿಷ್ಕರಿಸಿದ್ದಾರೆ. 3 ವರ್ಷಗಳಿಂದ ಯಾವುದೇ ಪರೀಕ್ಷೆಗಳ ಅಂಕಪಟ್ಟಿ ವಿತರಿಸದೇ ಅಂಕಪಟ್ಟಿಗಳನ್ನು ಮುದ್ರಿಸಲು ಟೆಂಡರ್ ಕರೆಯುವುದಾಗಿ ಹೇಳುತ್ತಲೇ ಬರಲಾಗುತ್ತಿದೆ. ಇದರಿಂದಾಗಿ ಪದವಿ ಪೂರೈಸಿದ ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸಕ್ಕೆ ಹೋಗಲು, ಉದ್ಯೋಗ ಕಂಡುಕೊಳ್ಳಲು ಆಗುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ರಾಜ್ಯಪಾಲರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸುವಂತೆ ಆಗ್ರಹಿಸಿದ್ದಾರೆ. ಎನ್‌ಎಸ್‌ಯುಐನ ಜಿಲ್ಲಾಧ್ಯಕ್ಷ ವಿಜಯ್, ಕಾರ್ಯಾಧ್ಯಕ್ಷ ರವಿ ಕಟಿಕೆರೆ ನಗರಾಧ್ಯಕ್ಷರಾದ ರವಿ ಇದ್ದರು.



ದೂರು ದಾಖಲು: ಕುಲಪತಿ ಪ್ರೊ. ಶರತ್ ಅನಂತಮೂರ್ತಿ

ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಬುಧವಾರ ವಿದ್ಯಾರ್ಥಿ ಸಂಘಟನೆ ನಡೆಸಿದ ಪ್ರತಿಭಟನೆ ಹಿಂದೆ ಯಾರೋ ಇದ್ದಾರೆ ಎಂಬ ಶಂಕೆ ಇದೆ. ಇದರ ಬಗ್ಗೆ ದೂರು ದಾಖಲಿಸಲಾಗುವುದು ಎಂದು ಕುವೆಂಪು ವಿವಿ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ತಿಳಿಸಿದ್ದಾರೆ. ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾನು ಬೇರೊಂದು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾಗ ಕುವೆಂಪು ಶತಮಾನೋತ್ಸವದ ಭವನದಲ್ಲಿ ಇರುವ ನಮ್ಮ ಕಚೇರಿಗೆ ಯಾರೋ ವಿದ್ಯಾರ್ಥಿಗಳು ಅಲ್ಲದ ಕೆಲವರು ಬಂದು ಪಾಟ್‌ಗಳನ್ನು ಒಡೆದಿದ್ದಾರೆ ಎಂದು ಕರೆ ಬಂತು. ನಾನು ಕಚೇರಿಗೆ ಬಂದೆ. ಆಗ ನನಗೆ ಕೆಲವರು ಮುತ್ತಿಗೆ ಹಾಕಿದರು. ನನ್ನನ್ನು ಎಳೆದಾಡಲು ಯತ್ನಿಸಿ ನಂತರ ದಾರಿ ಬಿಟ್ಟರು ಎಂದರು. ಕುವೆಂಪು ವಿಶ್ವವಿದ್ಯಾಲಯದ ಪ್ರವೇಶ ದ್ವಾರದಲ್ಲಿ ಇರುವ ಕುವೆಂಪು ಅವರ ಪ್ರತಿಮೆ ಮುಂದೆ ಪಾಟ್‌ಗಳನ್ನು ಕುಟ್ಟಿ ಕುಟ್ಟಿ ಪುಡಿ ಮಾಡಿದ್ದಾರೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ

ಉಪಚುನಾವಣೆ: ನಮ್ದೇ ಗೆಲುವು

ವಿಜಯನಗರ: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ನಿಶ್ಚಿತವಾಗಿದೆ. ಈ ಬಾರಿ ಉಪಚುನಾವಣೆಯ ಫಲಿತಾಂಶದ ಪ್ರಕಟಗೊಂಡ ಬಳಿಕ ಕಾಂಗ್ರೆಸ್ ಪಕ್ಷದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಹೊಸಪೇಟೆಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರಿಂದ ದೆಹಲಿ ದಂಡಯಾತ್ರೆ ಶುರುವಾಗಿದೆ. ಸಿದ್ದರಾಮಯ್ಯ ಬಣ ದೆಹಲಿಗೆ ಭೇಟಿ ನೀಡುತ್ತಿದ್ದಂತೆ ಡಿ.ಕೆ.ಶಿವಕುಮಾರ್ ಅವ್ರರು ದೆಹಲಿಗೆ ಪ್ರಯಾಣ ಬೆಳೆಸುತ್ತಿದ್ದಾರೆ. ಇದು ಕಾಂಗ್ರೆಸ್‌ನಲ್ಲಿ ಉಂಟಾಗಿರುವ ಅಸ್ಥಿರ ವಾತಾವರಣಕ್ಕೆ ಸಾಕ್ಷಿಯಾಗಿದೆ.

ಮೇ 4 ರಂದು ಪ್ರಕಟಗೊಳ್ಳಲಿರುವ ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ನಿಶ್ಚಿತವಾಗಿದೆ. ಅದರಂತೆ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮೊದಲ ಬಾರಿಗೆ ಬಿಜೆಪಿ ಗೆಲುವು ಸಾಧಿಸಿ, ಇತಿಹಾಸದಲ್ಲೇ ಮೊದಲ ಬಾರಿಗೆ ಕಮಲ ಅರಳಲಿದೆ.



ಇದರಿಂದ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಲಿದೆ ಎಂಬ ಮಾತು ಆಡಳಿತಾರೂಢ ಪಕ್ಷದಿಂದಲೇ ಕೇಳಿ ಬರುತ್ತಿದೆ ಎಂದರು.

ರಾಜ್ಯದಲ್ಲಿ ಬಿಜೆಪಿಯನ್ನು ಬೇರು ಮಟ್ಟದಿಂದ ಸಂಘಟಿಸಿದ ಬಿ.ಎಸ್.ಯಡಿಯೂರಪ್ಪ ಅವರಿಗೆ ಪಕ್ಷ ಎಲ್ಲವನ್ನೂ ನೀಡಿ, ಗೌರವಿಸಿದೆ. ಅವರಿಗೆ ಈಗಲೂ ಅದೇ ಗೌರವವಿದೆ. ಅವರನ್ನು ಮೂಲೆ ಗುಂಪು ಮಾಡಲಾಗಿದೆ ಎಂಬುದು ಸತ್ಯಕ್ಕೆ ದೂರವಾದದ್ದು ಎಂದ ಅವರು, ರಾಜ್ಯದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಮ್ಮದು ರಾಷ್ಟ್ರೀಯ ಪಕ್ಷ, ವರಿಷ್ಠರು ಕೈಗೊಳ್ಳುವ ತೀರ್ಮಾನಕ್ಕೆ ಬದ್ಧರಿದ್ದೇವೆ ಎಂದಷ್ಟೇ ಹೇಳಿದರು.

ಬೆಂಗಳೂರು
ಗುರುವಾರ, 30 ಏಪ್ರಿಲ್ 2026
ಸಂಪುಟ 33, ಸಂಚಿಕೆ 179, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಅಭಿವೃದ್ಧಿಗೆ ಹೊಸ ಜೀವನಾಡಿ: ಮೋದಿ | ೧೦ · ತಿರುಪತಿಗೆ ನಂದಿನಿ ತುಪ್ಪ | ೦೨ · ಅಯೋಧ್ಯೆ ಶಿವದೇಗುಲ ಮೇಲೆ ಧ್ವಜಾರೋಹಣ | ೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಚಿತ್ರೆ

ದಿನದ ಮಾತು

ಚಿತ್ತಶುದ್ಧಿ ಇಲ್ಲದವರಿಗೆ ಹಿತೋಕ್ತಿ ಹೇಳಿದರೇನು ಪ್ರಯೋಜನ?
▲ ಲೋಕೋಕ್ತಿ

ಗೂಂಡಾ ರಾಜ್‌ಗೆ ಹೆದರದ ಬಂಗಾಳ ಮತದಾರ

ಗುರುತರ
• ಸೋಮಶೇಖರ ಸಿ.ಜಿ.

• ಪುಟ ೬

ಕಿರುಸುದ್ದಿ

ವಿದ್ಯಾರ್ಥಿ ಆತ್ಮಹತ್ಯೆ: 3 ಪೊಲೀಸರ ಅಮಾನತು

• **ಧಾರವಾಡ:** ಪೊಲೀಸರ ಕಿರುಕುಳದಿಂದ ಬಿಎಸ್ಸಿ ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾಗಿರಿ ಪೊಲೀಸ್ ಠಾಣೆಯ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಡ್ರಗ್ಸ್ ಡ್ರೈವ್ ವೇಳೆ ಸಿಕ್ಕಿಬಿದ್ದವರಿಂದ ಪೊಲೀಸರು ಹಣ ಪಡೆಯುವುದು ಸಾಬೀತಾಗಿದೆ.ಹೆಡ್ ಕಾನ್ಸ್‌ಟೇಬಲ್ ಚಂದ್ರು ನಡುವಿನಮನಿ, ಕಾನ್ಸ್‌ಟೇಬಲ್‌ಗಳಾದ ಕಿರಣ್ ದೊಡ್ಡನ್ನವರ್ ಹಾಗೂ ಸೈಯದ್ ತಹಸೀಲ್ದಾರ್ ಅಮಾನತುಗೊಂಡ ಠಾಣೆಯ ಸಿಬ್ಬಂದಿ. ಇಲ್ಲಿಯ ಗಿರಿನಗರದ, ಮೂಲತಃ ಬಾಗಲಕೋಟ ಜಿಲ್ಲೆಯ ಆದಿತ್ಯಾ ಮ್ಯಾಗೇರಿ ಆತ್ಮಹತ್ಯೆ ಪ್ರಕರಣದಲ್ಲಿ ಈ ಮೂವರನ್ನು ಅಮಾನತು ಮಾಡಲಾಗಿದೆ.

• ಪುಟ ೨

ನಿಷ್ಕ್ರಿಯ ಇಪಿಎಫ್ ಖಾತೆ ಸಕ್ರಿಯಕ್ಕಾಗಿ ಇ-ಪ್ರಾಪ್ತಿ

• ಪುಟ ೧೦

ಭಾರತಕ್ಕೆ ಇಂಧನ ರಫ್ತು ಹೆಚ್ಚಳಕ್ಕೆ ಹಾದಿ ಸುಗಮ

• ಪುಟ ೧೦

ಮಾಜಿ ಅಪರಾಧಿ ಈಗ ಹೈಕೋರ್ಟ್ ವಕೀಲ!

• ಪುಟ ೧೦

ಸುಧಾರಣೆ ಹೆಸರಿನಲ್ಲಿ ಧರ್ಮ ಕುಗ್ಗಿಸಲಾಗದು

• ಪುಟ ೧೦

ರಾಣಾ ಪೌರತ್ವ ವಾಪಸ್: ಪ್ರಕ್ರಿಯೆ ಆರಂಭಿಸಿದ ಕೆನಡಾ

• ಪುಟ ೧೦

653 ಕೋಟಿ ರೂ. ಮೌಲ್ಯದ ಡ್ರಗ್ಸ್ ಪತ್ತೆ

• ಪುಟ ೨

ಕುವೆಂಪು ವಿವಿಯಲ್ಲಿ ಎನ್‌ಎಸ್‌ಯುಐ ಗದ್ದಲ

• ಪುಟ ೨

ಕುಂದಾಪುರದಲ್ಲಿ ಅಪಘಾತ: ಮೂವರ ಸಾವು

• ಪುಟ ೨

ಮತದಾನೋತ್ತರ ಸಮೀಕ್ಷೆ | ಅಸ್ಸಾಂನಲ್ಲಿ ಮತ್ತೆ ಬಿಜೆಪಿ

ತ.ನಾಡಿನಲ್ಲಿ ಡಿಎಂಕೆ, ಕೇರಳದಲ್ಲಿ ಯುಡಿಎಫ್ ಆಡಳಿತ?

ಬಿಜೆಪಿಗೆ ಬಂಗಾಳ?

• **ಹೊಸದಿಲ್ಲಿ:** ಇತ್ತೀಚೆಗೆ ನಡೆದ ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ಮತದಾನೋತ್ತರ ಸಮೀಕ್ಷೆಗಳು ಹಲವು ಕುತೂಹಲಕರ ಅಂದಾಜುಗಳನ್ನು ನೀಡಿವೆ. ಬಹುತೇಕ ಸಮೀಕ್ಷೆಗಳು ಅಸ್ಸಾಂನಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸುವ ಸಾಧ್ಯತೆಯನ್ನು ಸೂಚಿಸುತ್ತಿದ್ದು, ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ಟಿಎಂಸಿಗೆ ಬಿಜೆಪಿ ಕಠಿಣ ಸ್ಪರ್ಧೆ ನೀಡಲಿದ್ದು, ಬಿಜೆಪಿ ಅಧಿಕಾರಕ್ಕೆ ಬರುವ ಸಾಧ್ಯತೆ ಇದೆ ಎಂದು ಹೇಳಿವೆ. ಅದೇ ವೇಳೆ ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬಹುದು ಎಂದು ಅಂದಾಜಿಸಲಾಗಿದೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ 10 ವರ್ಷಗಳ ನಂತರ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ನಿರೀಕ್ಷೆಯೂ ವ್ಯಕ್ತವಾಗಿದೆ.

ಅಸ್ಸಾಂನಲ್ಲಿ ಬಿಜೆಪಿ ಬಲಿಷ್ಠ

ಅಸ್ಸಾಂನಲ್ಲಿ ಬಿಜೆಪಿ ಮತ್ತು ಅದರ ಮೈತ್ರಿಕೂಟಕ್ಕೆ ಭಾರೀ ಗೆಲುವು ಸಿಗಲಿದೆ ಎಂದು ವಿವಿಧ ಸಮೀಕ್ಷೆಗಳು ಸೂಚಿಸಿವೆ.

- **ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆ ಬಿಜೆಪಿ ಮೈತ್ರಿಗೆ 88-100 ಸ್ಥಾನಗಳನ್ನು ನೀಡಿದರೆ, ಕಾಂಗ್ರೆಸ್ ಮೈತ್ರಿಗೆ 24-36 ಸ್ಥಾನ ಸಿಗಲಿವೆ ಎಂದು ಅಂದಾಜಿಸಿದೆ.**
- **ಪೀಪಲ್ಸ್ ಪಲ್ಸ್ 68-72 ಸ್ಥಾನಗಳನ್ನು ಎನ್‌ಡಿಎಗೆ ಮತ್ತು 22-26 ಸ್ಥಾನಗಳನ್ನು ಕಾಂಗ್ರೆಸ್ ಮೈತ್ರಿಗೆ ನೀಡಿದೆ.**
- **ಮ್ಯಾಟ್ರಿಜ್ ಸಮೀಕ್ಷೆಯ ಪ್ರಕಾರ ಎನ್‌ಡಿಎ 85-95 ಸ್ಥಾನಗಳನ್ನು ಗೆಲ್ಲಬಹುದು. ಅಸ್ಸಾಂ ವಿಧಾನಸಭೆಯಲ್ಲಿ ಒಟ್ಟು 126 ಸ್ಥಾನಗಳಿದ್ದು, ಬಹುಮತಕ್ಕೆ 64 ಸ್ಥಾನಗಳು ಅಗತ್ಯ.**

ಕೇರಳದಲ್ಲಿ ಯುಡಿಎಫ್ ಮುನ್ನಡೆ ಸಾಧ್ಯತೆ

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಗೆಲುವು ಸಾಧಿಸುವ ಸಾಧ್ಯತೆ ಇದೆ.

- **ಆಕ್ಸಿಸ್ ಮೈ ಇಂಡಿಯಾ 78-90 ಸ್ಥಾನಗಳನ್ನು ಯುಡಿಎಫ್‌ಗೆ, 49-62 ಸ್ಥಾನಗಳನ್ನು ಎಲ್‌ಡಿಎಫ್‌ಗೆ ಮತ್ತು 0-3 ಸ್ಥಾನಗಳನ್ನು ಎನ್‌ಡಿಎಗೆ ನೀಡಿದೆ.**
- **ಪೀಪಲ್ಸ್ ಪಲ್ಸ್ ಸಹ ಯುಡಿಎಫ್‌ಗೆ 75-85 ಸ್ಥಾನ ಸಿಗಲಿದೆ ಎಂದು ಅಂದಾಜಿಸಿದೆ.**
- **ಮ್ಯಾಟ್ರಿಜ್ ಪ್ರಕಾರ, ಯುಡಿಎಫ್ 70-75 ಸ್ಥಾನಗಳನ್ನು ಗೆಲ್ಲಬಹುದು. ಕೇರಳದಲ್ಲಿ ಒಟ್ಟು 140 ಸ್ಥಾನಗಳಿದ್ದು, ಬಹುಮತಕ್ಕೆ 71 ಸ್ಥಾನಗಳು ಬೇಕಾಗಿವೆ.**

ತ.ನಾಡಿನಲ್ಲಿ ಡಿಎಂಕೆ ಮುನ್ನಡೆ

ತಮಿಳುನಾಡಿನಲ್ಲಿ ಡಿಎಂಕೆ ಮೈತ್ರಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ನಿರೀಕ್ಷೆ ಇದೆ.

- **ಪೀಪಲ್ಸ್ ಪಲ್ಸ್ ಪ್ರಕಾರ ಡಿಎಂಕೆ ಮೈತ್ರಿಗೆ 125-145 ಸ್ಥಾನಗಳು, ಎಐಎಡಿಎಂಕೆ-ಬಿಜೆಪಿ ಮೈತ್ರಿಗೆ 65-80 ಸ್ಥಾನಗಳು ಸಿಗಬಹುದು. ಮ್ಯಾಟ್ರಿಜ್ ಡಿಎಂಕೆಗೆ 122-132 ಸ್ಥಾನಗಳನ್ನು ಅಂದಾಜಿಸಿದೆ.**
- **ಒಟ್ಟು 234 ಸ್ಥಾನಗಳಿರುವ ತಮಿಳುನಾಡಿನಲ್ಲಿ ಬಹುಮತಕ್ಕೆ 118 ಸ್ಥಾನಗಳು ಅಗತ್ಯ.**
- **ನಟ ವಿಜಯ್ ನಿರೀಕ್ಷೆ ಹುಸಿ: ಈ ಚುನಾವಣೆಯಲ್ಲಿ ನಟ ವಿಜಯ್ ಅವರ ಟಿವಿಕೆ ಪಕ್ಷವು ಕಿಂಗ್‌ಮೇಕರ್ ಆಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ, ಹೆಚ್ಚಿನ ಸಮೀಕ್ಷೆಗಳು ಟಿವಿಕೆಗೆ 2 ರಿಂದ 10 ಸ್ಥಾನಗಳು, 5-8 ಪ್ರತಿಶತ ಮತ ಪಡೆಯಲಿದೆ ಎಂದು ಅಂದಾಜಿಸಿವೆ. ಆಕ್ಸಿಸ್- ಮೈ ಇಂಡಿಯಾ ಸಮೀಕ್ಷೆಗಳು ಮಾತ್ರ ಟಿವಿಕೆ ಪಕ್ಷವು 98-120 ಸ್ಥಾನ ಪಡೆಯಲಿದೆ ಎಂದು ಭವಿಷ್ಯ ನುಡಿದಿದೆ.**

ಪಶ್ಚಿಮ ಬಂಗಾಳದಲ್ಲಿ ತುರುಸಿನ ಸ್ಪರ್ಧೆ

ದಾಖಲೆಯ ಮತದಾನವಾಗಿರುವ ಪಶ್ಚಿಮ ಬಂಗಾಳದಲ್ಲಿ ತುರುಸಿನ ಸ್ಪರ್ಧೆ ಇದೆ.

- **ಪೀಪಲ್ಸ್ ಪಲ್ಸ್ ಪ್ರಕಾರ ಟಿಎಂಸಿ 177-187 ಸ್ಥಾನಗಳನ್ನು ಗೆಲ್ಲಬಹುದು, ಬಿಜೆಪಿ 95-110 ಸ್ಥಾನಗಳನ್ನು ಪಡೆಯಬಹುದು.**
- **ಆದರೆ, ಮ್ಯಾಟ್ರಿಜ್ ಬಿಜೆಪಿ ಮುನ್ನಡೆ ಸಾಧಿಸಬಹುದು ಎಂದು ಹೇಳಿದ್ದು, 146-161 ಸ್ಥಾನಗಳನ್ನು ಅಂದಾಜಿಸಿದೆ. ಪಿ-ಮಾರ್ಕ್ ಕೂಡ ಬಿಜೆಪಿ 150-175 ಸ್ಥಾನಗಳನ್ನು ಪಡೆಯ ಬಹುದು ಎಂದು ಹೇಳಿದೆ. ಬಂಗಾಳದಲ್ಲಿ ಒಟ್ಟು 294 ಸ್ಥಾನಗಳಿದ್ದು, ಬಹುಮತಕ್ಕೆ 148 ಸ್ಥಾನ ಅಗತ್ಯ.**

ಪುದುಚೇರಿಯಲ್ಲಿ ಎನ್‌ಡಿಎ ಮುನ್ನಡೆ

ಪುದುಚೇರಿಯಲ್ಲಿ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಸಮೀಕ್ಷೆಗಳು ಸೂಚಿಸಿವೆ.

- **ಆಕ್ಸಿಸ್ ಮೈ ಇಂಡಿಯಾ 16-20 ಸ್ಥಾನಗಳನ್ನು ಎನ್‌ಡಿಎಗೆ ಮತ್ತು 6-8 ಸ್ಥಾನಗಳನ್ನು ಡಿಎಂಕೆ-ಕಾಂಗ್ರೆಸ್ ಮೈತ್ರಿಗೆ ನೀಡಿದೆ.**
- **30 ಸ್ಥಾನಗಳಿರುವ ಈ ವಿಧಾನಸಭೆಯಲ್ಲಿ ಸಣ್ಣ ಪಕ್ಷಗಳಿಗೂ ಕೆಲವು ಸ್ಥಾನಗಳು ಸಿಗಬಹುದು.**

ಪ.ಬಂಗಾಳದಲ್ಲಿ ಶೇ.92.47 ದಾಖಲೆಯ ಮತದಾನ • ಪುಟ ೧೦

ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ದುರಂತ

ಆಸ್ಪತ್ರೆ ಕಾಂಪೌಂಡ್ ಕುಸಿದು ಏಳು ಸಾವು



• **ಬೆಂಗಳೂರು:** ಬುಧವಾರ ಸಂಜೆ ರಾಜಧಾನಿಯಲ್ಲಿ ಸುರಿದ ಭಾರೀ ಮಳೆ ದುರಂತವನ್ನೇ ಸೃಷ್ಟಿಸಿದೆ. ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದ ಪರಿಣಾಮ ಇಬ್ಬರು ಮಕ್ಕಳು ಸೇರಿ ಏಳು ಮಂದಿ ಮೃತಪಟ್ಟಿದ್ದು, ಏಳು ಜನ ಗಾಯಗೊಂಡಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಯಾರಬ್ ನಗರದ ಸೈಯದ್ ಸೂಫಿಯಾನ್ ಎಂಬ ವಿದ್ಯಾರ್ಥಿ ವಿದ್ಯುತ್ ಶಾಕ್ ತಗುಲಿ ಮೃತಪಟ್ಟಿದ್ದು, ಒಟ್ಟು 8 ಜನ ಅಸುನೀಗಿದ್ದಾರೆ.

ಭಾರೀ ಮಳೆ ಸುರಿಯುತ್ತಿದ್ದ ಸಮಯ ಅಂದರೆ ಸಂಜೆ 5ರ ವೇಳೆಗೆ ಕಾಂಪೌಂಡ್ ಕುಸಿದಿದ್ದು, ಮಳೆಯಿಂದ ಪಾರಾಗಲು ಆಶ್ರಯ ಪಡೆದಿದ್ದ ಹಾಗೂ ವ್ಯಾಪಾರ ಮಾಡುತ್ತಿದ್ದವರನ್ನು ಬಲಿ ಪಡೆದಿದೆ. ಬಟ್ಟೆ ವ್ಯಾಪಾರಿ ಮೊಹಮ್ಮದ್ ಅಬ್ದುಲ್ ಹಕ್(52), ಪಾದರಕ್ಷೆ ವ್ಯಾಪಾರಿ ಫಯಾಜ್ ಅಹಮ್ಮದ್ (39), ವಿದ್ಯಾರ್ಥಿನಿ ಮುಸವೀರ್ ಬೇಗಂ(06), ಕೇರಳ ಮೂಲದ ಲತಾ ಕೆ.ಕೆ. (52), ಸ್ವಿತಾ (47), ಉತ್ತರ ಪ್ರದೇಶ ಮೂಲದ ವ್ಯಾಪಾರಿ ಸಲಾವುದ್ದೀನ್ ಅನ್ಸಾರಿ(36), ಅಸ್ಸಾಂ ಮೂಲದ ಸ್ಟಿಚಿಂಗ್ ಕೆಲಸಗಾರ ನೋಮುಲ್ಲಾ (19) ಮೃತಪಟ್ಟವರು. ➡ಪುಟ ೭

ಕುಸಿದ ಬೌರಿಂಗ್ ಆಸ್ಪತ್ರೆ ಕಾಂಪೌಂಡ್

ಮಳೆಯಿಂದ ರಕ್ಷಣೆ ಪಡೆಯುತ್ತಿದ್ದ ಪಾದಚಾರಿಗಳು, ಬೀದಿಬದಿ ವ್ಯಾಪಾರಿಗಳು ಹಾಗೂ ಪುಟ್ಟ ಮಕ್ಕಳೂ ಇದ್ದರು. ಸಂಜೆ ಸುಮಾರು 5 ಗಂಟೆಯ ಸುಮಾರಿಗೆ ನಗರದಲ್ಲಿ ಗುಡುಗು, ಸಿಡಿಲು ಹಾಗೂ ಆಲಿಕಲ್ಲುಸಹಿತ ಭಾರೀ ಮಳೆ ಆರಂಭವಾಯಿತು. ಮಳೆಯಿಂದ ಬಚಾವಾಗಲು ಹಾಗೂ ಜತೆಯಲ್ಲಿದ್ದ ಮಕ್ಕಳು ನೆನೆಯಬಾರದು ಎಂಬ ಉದ್ದೇಶದಿಂದ ಪಾದಚಾರಿಗಳು ಮತ್ತು ವ್ಯಾಪಾರಿಗಳು ಬೌರಿಂಗ್ ಆಸ್ಪತ್ರೆಯ ಬೃಹತ್ ಕಾಂಪೌಂಡ್ ಗೋಡೆಯ ಆಶ್ರಯ ಪಡೆದಿದ್ದರು. ಆದರೆ, ಸತತ ಮಳೆಯಿಂದಾಗಿ ಗೋಡೆ ಏಕಾಏಕಿ ಕುಸಿದುಬಿದ್ದಿದೆ.

ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ

• ಪುಟ ೭

ವಾರಾಣಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ರೋಡ್ ಶೋ

ಕಾಶಿ ವಿಶ್ವನಾಥನಿಗೆ ಮೋದಿ ಪೂಜೆ

• **ವಾರಾಣಸಿ:** ಉತ್ತರಪ್ರದೇಶಕ್ಕೆ ತಮ್ಮ ಎರಡು ದಿನಗಳ ಭೇಟಿಯ ದ್ವಿತೀಯ ದಿನವಾದ ಬುಧವಾರ ಬೆಳಗ್ಗೆ ವಾರಾಣಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ರೋಡ್ ಶೋ ನಡೆಸಿದರು. ಕಾಶಿ ವಿಶ್ವನಾಥ ದೇವಾಲಯದಲ್ಲಿ ವೇದಮಂತ್ರ ಪಠಣಗಳೊಂದಿಗೆ ಶ್ರೀದೇವರಿಗೆ ಪ್ರಧಾನಿ ಮೋದಿ ಪ್ರಾರ್ಥನೆ ಸಲ್ಲಿಸಿದರು.

ವಾರಾಣಸಿಯ ಬನಾರಸ್ ಲೋಕೋಮೋಟಿವ್ ವರ್ಕ್ಸ್(ಬಿಎಲ್‌ಡಬ್ಲ್ಯು)ನಿಂದ ಶುರುವಾದ ರೋಡ್ ಶೋ ಲಹರ್‌ತಾರಾ, ಕಛಾಸ್ತ್ರಿ, ಅಂಬೇಡ್ಕರ್ ಚೌರಾಹ, ಚೌಕಾಘಾಟ್, ತೆಲಿಯಾಬಾಗ್, ಲಹುರಾಬಿರ್, ಮೈದಾಜಿನ್ ಮಾರ್ಗವಾಗಿ ಕಾಶಿ ವಿಶ್ವನಾಥಧಾಮ್‌ನಲ್ಲಿ ಸಮಾಪನಗೊಂಡಿತು. ಕಾಶಿ ವಿಶ್ವನಾಥ ದೇವಾಲಯದಲ್ಲಿ ಪ್ರಾರ್ಥನೆ ಮುಗಿಸುತ್ತಲೇ ಸ್ಥಳೀಯರು ಪ್ರಧಾನಿ ಮೋದಿ ಅವರನ್ನು ತ್ರಿಶೂಲ, ಡಮರು ಮತ್ತು ಸಾಂಪ್ರದಾಯಿಕ ಉತ್ತರೀಯ ಪಟ್ಟಿ ನೀಡಿ ಸ್ವಾಗತಿಸಿದರು. ಪ್ರತಿಯಾಗಿ ಪ್ರಧಾನಿ ಮೋದಿ ಜನರಿಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದರು.

ಹರ ಹರ ಮಹಾದೇವ್... : ಹರ ಹರ ಮಹಾದೇವ್! ಕಾಶಿ ವಿಶ್ವನಾಥ ದೇವರ ದರ್ಶನ ಮತ್ತು ಪೂಜೆ ಸಲ್ಲಿಸುವ ಅವಕಾಶ ದೊರೆತದ್ದು ನನ್ನ ಭಾಗ್ಯ. ➡ಪುಟ ೭



ಎರಡು ವರ್ಷದಿಂದ ಸಿಗದ ಅನುದಾನ: ಸಿಎಂ ಸಿದ್ದರಾಮಯ್ಯ

ಜಲ್ ಜೀವನ್‌ಗಿಲ್ಲ ಕೇಂದ್ರದ ಹಣ

• **ಬೆಂಗಳೂರು:** ಜಲ್ ಜೀವನ್ ಯೋಜನೆಗೆ ಕೇಂದ್ರ ಸರ್ಕಾರ ಆಯವ್ಯಯದಲ್ಲಿ ಅನುದಾನ ಹಂಚಿಕೆ ಮಾಡಿದ್ದರೂ ಕಳೆದ 2 ವರ್ಷಗಳಿಂದ ಕರ್ನಾಟಕಕ್ಕೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ, ಆದರೂ ರಾಜ್ಯ ಸರ್ಕಾರ ಕೇಂದ್ರದ ಪಾಲಿನ ಅನುದಾನವನ್ನು ಭರಿಸಿ, ಯೋಜನೆ ಅನುಷ್ಠಾನ ಮುಂದುವರಿಯುವಂತೆ ನೋಡಿಕೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗೃಹಕಚೇರಿ ಕೃಷ್ಣಾದಲ್ಲಿ ಬುಧವಾರ ಕೇಂದ್ರ ಜಲಶಕ್ತಿ ಸಚಿವಾಲಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಜಲ್ ಜೀವನ್ ಮಿಷನ್ 2.0 ಸಂಬಂಧಿಸಿದ ತಿಳುವಳಿಕೆ ಪತ್ರಕ್ಕೆ ಸಹಿ ಹಾಕುವ ಕುರಿತು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್ ಪಾಟೀಲ್ ನೇತೃತ್ವದಲ್ಲಿ ನಡೆದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಮಾತನಾಡಿದರು. ➡ಪುಟ ೭



> **ಜಲ್ ಜೀವನ್ ಮಿಷನ್ ಯೋಜನೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಕಾಲ ಮಿತಿ ಯೊಳಗೆ ಪೂರ್ಣಗೊಳಿಸಲು ಕರ್ನಾಟಕ ಸಂಪೂರ್ಣವಾಗಿ ಬದ್ಧವಾಗಿದೆ. ಮುಂಗಡ ವೆಚ್ಚದ ಮರುಪಾವತಿಗಳು ಸೇರಿದಂತೆ ಬಾಕಿಯಿರುವ ಎಲ್ಲಾ ಅನುದಾನವನ್ನು ಕೇಂದ್ರ ಸರ್ಕಾರ ಶೀಘ್ರವೇ ಬಿಡುಗಡೆ ಮಾಡಬೇಕು.**
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೇ 20ರಿಂದ ಮುಷ್ಕರ

• **ಬೆಂಗಳೂರು:** ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ನಡೆದ ಸಾರಿಗೆ ನೌಕರರ ಸಂಧಾನ ಸಭೆ ವಿಫಲವಾಗಿದ್ದು, ಈ ಹಿನ್ನಲೆಯಲ್ಲಿ ಸಾರಿಗೆ ನೌಕರರು ಮೇ 20ರಿಂದ ಮುಷ್ಕರ ನಡೆಸಲು ತೀರ್ಮಾನಿಸಿದ್ದಾರೆ. ಶಾಂತಿನಗರದ ಸಾರಿಗೆ ಇಲಾಖೆಯ ಪ್ರಧಾನ ಕಚೇರಿಯಲ್ಲಿ ಬುಧವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಾರಿಗೆ ನೌಕರರ ಬೇಡಿಕೆಯನ್ನು ಆಲಿಸಿ, ನಿಮ್ಮ ಅಹವಾಲನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅದಷ್ಟು ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.ಸರ್ಕಾರಕ್ಕೆ ಸಾರಿಗೆ ನೌಕರರ ಬಗ್ಗೆ ನಿಜವಾದ ಕಾಳಜಿ ಇದ್ದೇ ಇದೆ. ಸಾರಿಗೆ ನೌಕರರಿಗೆ ನಾಲ್ಕು ವರ್ಷ ಮೊದಲೇ 7ನೇ ವೇತನ ಆಯೋಗ ನೇಮಿಸಿ ಶೇ.27.5 ವೇತನ ಹೆಚ್ಚಳ ಘೋಷಿಸಿರುವ ರಾಜ್ಯ ಸರ್ಕಾರವು ಸಾರಿಗೆ ನೌಕರರ ವಿಷಯದಲ್ಲಿ ತಾರತಮ್ಯ ಧೋರಣೆ ಅನುಸರಿಸುತ್ತಿರುವುದು ಸಾರಿಗೆ ನೌಕರರ ಆಕ್ರೋಶಕ್ಕೆ ಕಾರಣವಾಗಿದೆ. ➡ಪುಟ ೭

ರಾಮಲಿಂಗಾರೆಡ್ಡಿ ನೇತೃತ್ವದ ಸಂಧಾನ ಸಭೆ ವಿಫಲ ಹಿನ್ನೆಲೆ

ಕಿದ್ವಾಯಿ ಆಸ್ಪತ್ರೆ ಸಾಧನೆ | ಅತಿದೊಡ್ಡ ಅಸ್ಥಿಮಜ್ಜೆ ಕಸಿ ಘಟಕ

1,092 ರೊಬೊಟಿಕ್ ಶಸ್ತ್ರಚಿಕಿತ್ಸೆ

▶ ನಂದಿನಿ ಎನ್.

• **ಬೆಂಗಳೂರು:** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ರೊಬೊಟಿಕ್ ಯಂತ್ರ ಬಳಸಿಕೊಂಡು ವರ್ಷದಿಂದ ವರ್ಷಕ್ಕೆ ರೊಬೊಟಿಕ್ ಶಸ್ತ್ರಚಿಕಿತ್ಸೆ ಸಂಖ್ಯೆ ಹೆಚ್ಚಾಗುತ್ತಿದ್ದು, ಈವರೆಗೂ ಒಟ್ಟು 1,092 ರೊಬೊಟಿಕ್ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ.

ಕ್ಯಾನ್ಸರ್ ರೋಗಿಗಳಿಗೆ ಮತ್ತು ಬಡ ರೋಗಿಗಳಿಗೆ ಅಸ್ಥಿಮಜ್ಜೆ ಕಸಿ ಚಿಕಿತ್ಸೆ ಸುಲಭವಾಗಿ ಕೈಗೆಟುಕುವಂತೆ ಮಾಡಲಾಗುತ್ತಿದೆ. ಕಿದ್ವಾಯಿ ಸಂಸ್ಥೆಯ ಅಸ್ಥಿಮಜ್ಜೆ ಕಸಿ ಘಟಕವು ತೀವ್ರ ನಿಗಾ ಘಟಕ ಸೇರಿದಂತೆ 14 ಹಾಸಿಗೆಗಳ ಸೌಲಭ್ಯದೊಂದಿಗೆ ಭಾರತದ ಅತಿದೊಡ್ಡ ಅಸ್ಥಿಮಜ್ಜೆ ಕಸಿ ಘಟಕವಾಗಿ ಹೊರಹೊಮ್ಮಿದೆ. ಅಲ್ಲದೆ, ಬಡ ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ಅಸ್ಥಿಮಜ್ಜೆ ಕಸಿ ಚಿಕಿತ್ಸೆ ನೀಡುತ್ತಿರುವ ಏಕೈಕ ಸರ್ಕಾರಿ ಆಸ್ಪತ್ರೆಯಾಗಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಕ್ಯಾನ್ಸರ್ ಚಿಕಿತ್ಸೆಗಾಗಿ ಇರುವ ಏಕೈಕ ಸ್ವಾಯತ್ತ ಸರ್ಕಾರಿ ಆಸ್ಪತ್ರೆಯಾಗಿದೆ. ಸಂಸ್ಥೆ ಯಲ್ಲಿ ಎಲ್ಲ ಕ್ಯಾನ್ಸರ್ ಪ್ರಕಾರಗಳಿಗೆ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ. ಅದರಲ್ಲೂ ಕ್ಯಾನ್ಸರ್‌ಪೀಡಿತ ಮಕ್ಕಳು ಮತ್ತು ವಯಸ್ಕರಿಗೆ ಉತ್ತಮ ಸೇವೆಯನ್ನು ನೀಡುತ್ತಿದೆ. ➡ಪುಟ ೭



ಅಲ್ಪಾವಧಿಯಲ್ಲೇ ಚೇತರಿಕೆ

ಈ ಅತ್ಯಾಧುನಿಕ ತಂತ್ರಜ್ಞಾನವು ರೋಗಿ ಹಾಗೂ ವೈದ್ಯರಿಗೆ ಸಹಕಾರಿಯಾಗಿದೆ. ಸಣ್ಣದಾಗಿ ರಂಧ್ರ ಮಾಡಿ, ರೋಗಕಾರಕ ಭಾಗವನ್ನು ಮಾತ್ರ ಹೊರತೆಗೆಯಲಾಗುತ್ತದೆ. ಇದರಿಂದ ನಿಖರ ಶಸ್ತ್ರಚಿಕಿತ್ಸೆಯ ಜತೆಗೆ, ರೋಗಿಗಳು ಅಲ್ಪಾವಧಿಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಸಾಂಪ್ರದಾಯಿಕ ಶಸ್ತ್ರಚಿಕಿತ್ಸಾ ವಿಧಾನದಲ್ಲಿ ದೇಹಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗುವ ಜತೆಗೆ, ಶಸ್ತ್ರಚಿಕಿತ್ಸೆ ಹಾಗೂ ರೋಗಿ ಚೇತರಿಸಿಕೊಳ್ಳಲು ಹೆಚ್ಚಿನ ಅವಧಿ ಬೇಕಾಗುತ್ತದೆ.

ಉಪ ಚುನಾವಣೆ: ನಮ್ಮದೇ ಗೆಲುವು

• **ವಿಜಯನಗರ:** ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ನಿಶ್ಚಿತವಾಗಿದೆ. ಈ ಬಾರಿ ಉಪಚುನಾವಣೆಯ ಫಲಿತಾಂಶದ ಪ್ರಕಟಗೊಂಡ ಬಳಿಕ ಕಾಂಗ್ರೆಸ್ ಪಕ್ಷದಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಹೊಸಪೇಟೆಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರಿಂದ ದೆಹಲಿ ದಂಡಯಾತ್ರೆ ಶುರುವಾಗಿದೆ.

• ವಿವರ ಪುಟ ೨

[illegible]

SCHEDULE

Lands situated at Thataparthy Village, Jangamakote Hobali, Sidlaghatta Taluk, Chikkaballapura District.

1. Land bearing sy. no. 21/2, an extent of 0-08 guntas, 0-01 gunta Karab, assessed land 0-07 guntas, assessed at Rs. 0-27/- paise. 2. Land bearing sy. no. 21/3 an extent of 0-03 guntas, assessed at Rs. 0-12/-paise, Both lands are adjacent to each other having common boundaries bounded on:- East by: Land of Pothalappa, West by: Land of Narayanappa, North by: Road, South by: Land of Shankaramma. 3. Land bearing sy. no. 57/2 an extent of 1-03 guntas, assessed at Rs. 1.42/- paise situated at Krishnumanahalli Village, Jangamakote Hobali, Sidlaghatta Taluk, and bounded on: East by: Land of T.M. Rajappa, West by: Land of Kurigala Gangappa, North by: Land of Venkateshappa, South by: Land of T.R. Rajappa.

[illegible]

IN THE COURT OF THE CIVIL JUDGE (JR.DN) & J.M.F.C. AT CHICKBALLAPUR. Criminal Misc. NO.331/2025.

Petitioners :1. Smt. Latha D/o Late K.R.Krishnappa W/o Manjunath, Aged about 48 years, **2. Sri. Anil Kumar.K** S/o Late K.R.Krishnappa Aged about 47 years, 1 and 2 are Now R/at No.758/5, Chinthayappa Compound, 3rd Main Road, Mathikere, Mathikere, Bangalore-560054. **3. Smt. Poornima Raj.K.S** D/o Late Srinivas Aged about 50 years R/at Nagarabavi, Bangalore. **4. Smt. Vanajamma.K.N** D/o Late Nanjundappa Aged about 58 years, R/at Ward No.2, Bhagathsing Nagara, Chikkaballapur Town, **5. Smt. Renuka.K.N** D/o Late Nanjundappa Aged about 59 years, R/at R.T Nagar, Bangalore. -V/s-

Respondent: The Registrar of Birth and Death City Municipal counsel, Chickballapur.

PAPER PUBLICATION

The petitioners are filed this petition for grant of death certificate of death of The said K.L.Ramaiah S/o Lingappa Was died on 19-03-1979, at his residence Sadubhavi Road, Ward No.9, T.G.Tank Road, Chickballapur Town.

1. Whom so ever if any person who are related or interest or dispute date of death of K.L.Ramaiah may hereby directed to appear in the above said court in Person or through pleader duly instructed and to able to answer all matterial question raising in the petition on the day of **05/06/26** at 11 AM in said court. Take Notice that in default of your appearance on the date before mentioned the petition, it will be heard and determine ex-parte.

my hand seal of the court on the day of 2026.

By order of the court, Sheristhedar, Principal Junior Civil Judge & JMFC Chickballapur - 562101.

Advocate for petitioners : **Sri.S.Sudarshan** Chickballapur

IN THE COURT OF THE PRL SR. CIVIL JUDGE AT BENGALURU RURAL DISTRICT AT BENGALURU

EX. PET. No.49/2019

BETWEEN: Sri. A. Krishnamurthy, Aged about 57 years, S/o late Poojari Agadoorappa NO.135, 1st Main Road, Muddaianapalya, Bengaluru-560091 ... **DECREE HOLDER**

AND: Sri. Anjanappa, Since dead by his Lrs Smt. Jayamma & others ... **JUDGEMENT DEBTORS**

(Summons for service by Advertisement in a News Paper Order 5 Rule 20)

SUMMONS TO THE LRS OF THE JUDGEMENT DEBTORS 1(A) TO 1(C) AND 2 AND 3

1(a) Smt. Jayamma, W/o. late Anjenappa, Aged about 66 years, **1(b) Smt. Manjula,** D/o. late Anjenappa, Aged about 45 years, **1(c) Sri. Ravi,** S/o. late Anjenappa, Aged about 40 years, All are residing at No.326, 4th stage, 2nd Main, BEML Layout, Rajarajeshwari Nagar, Bengaluru-560098. **2. Sri. Dinesh,** S/o. R.C. Metha, No. 15, First Floor, SJP Road, Shanthappa Lane Bengaluru-560002. **3. Sri. M. Narasimhamurthy,** S/o.Anantha Swamy, Aged about 73 years, No. 11, Poorna Pragna Layout, Near Banashankari II Stage, Bengaluru-560085.

WHEREAS, the Decree Holder above named has filed the above execution petition against the Judgement Debtor and Lrs of Judgement Debtors 1(a) to 1(c) and 2 and 3 are seeking the relief of specific performance of the suit in respect of the suit schedule property.

Hence the Judgement Debtors 1(a) to 1(c) and 2 and 3 above named is hereby directed to appear before this Hon'ble Court either in person or the pleader on 03-07-2026 at 11:00 AM to defend the above case, failing which the matter will be heard ex-parte.

SCHEDULE

All that piece and parcel of the property bearing Sy.NO.49/1, Kommaghatta Village, Kengeri Hobli, Bangalore South Taluk, admeasuring 10 guntas and bounded on:- East by Road, West by: remaining Property in Sy.No.49/1, North by: Remaining property in Sy.No.49/1 and South by: Remaining property in Sy.NO.49/1.

Given under my hand and seal of this Court on 28-04-2026.

By order of the court, Chief Ministerial officer, Senior Civil Judge Court, bangalore Rural District.

Advocate for Plaintiff:
Sri. V.VENKATARAMAREDDY
No.58/B, 2nd Main, 2nd Cross, Friends Layout, Seegehalli, Bengaluru-560049.
Mob.No.9448031923

[illegible]

IN THE COURT OF THE HON'BLE PRINCIPAL CIVIL JUDGE (JR.DN) AND J.M.F.C AT ANEKAL

C. Misc. No. 709/2026

BETWEEN: 1. Smt. T. M. Shyamalamma, D/o Late Munishami, W/o Sundara Raj, aged about 75 years, Residing at: No.141/1, Varadaraya Swamy Nilaya, 7th Main Road, Kalyani Rukmini Nagar, Bangalore North, Bangalore-560 073. **2. Smt. Ambujamma,** D/o Late Munishami, W/o G. Puttappa, aged about 63 years, Residing at: No.2682, 4th Cross, 18th Main, HAL, 2 Stage, Indiranagar, Bangalore North, Bangalore-560038... **PETITIONERS.**

AND: The Tashildhar, Anekal, Anekal Taluk, Bangalore District... **RESPONDENT.**

Whereas the petitioners have filed the above petition for the issuance of death certificate of petitioner's mother namely Gowramma W/o Late Munishami, who died on 20-12-1996 at Halasahalli Thippasandra Village, Sarjapura Hobli, Anekal Taluk, and Bangalore Urban District. Any person having any sort of claim are hereby informed to appear before this Hon'ble court in person or by a pleader duly instructed on **20-06-2026** at 11:00 A.M. failing which, the matter will be heard and determined exparte.

Given under my hand and seal of the court on 29-04-2026.

By order of the Court, Sheristedar, Civil Judge Jr.dvn & JMFC Court, Anekal

Advocate for petitioner: **J.C. RAMESHA.**
No.1, 1st Floor, Chowdareddy building, Opposite Ganesha Cycle Mart, Anekal Town, Bangalore District.

IN THE COURT OF THE IInd ADDITIONAL SENIOR CIVIL AND JMFC, AT ANEKAL

O.S. No. 2105/2006

BETWEEN: SMT. PUSHPAVATHI AND 6 OTHERS ... **PLAINTIFFS**

AND: D8(a). SMT.RASHMI, W/o Gopal, Aged about 38 years, R/at Maknahalli Circle, Hoskote Taluk, Bengaluru-562114. D8(c). **SMT.NAVITHA,** W/o Prathib, Aged about 32 years, R/at Maruthi Saw Mill, Church Road, Hoskote Godi, Bengaluru-562114. ... **DEFENDANTS**

SUIT SUMMONS/NOTICE TO DEFENDANTS No.8(a) & 8© UNDER V RULE 20 OF CPC.

Whereas the plaintiff has instituted a suit against the defendants for the relief of Partition and separate possession and for consequential relief of Declaration and for Permanent Injunction and for other reliefs in respect of the properties bearing Sy.No.81/1, measuring 30 guntas, Sy.No.79, measuring 35 guntas, Sy.No.107/2 & 111/3, measuring 20 guntas, Sy.No.76/5, measuring 20 guntas, Sy.No.104/4, measuring 22 guntas, Sy.No.97/2, measuring 10 guntas, Sy.No.14/1, measuring 2 acres, Sy.No. 64 & 176, measuring 3 acres 28 guntas, all the properties are situated at Halehalli Village, Attibele Hobli, Anekal Taluk, Bengaluru Urban District and property bearing Sy.208/3, measuring 2 acres 26 guntas, situated at Mayasandra Village, Attibele Hobli, Anekal Taluk, Bengaluru Urban District and Sy.No.309/P2, measuring 2 acres out of 8 acres and Sy.No.309/P2, measuring 2 acres out of 8 acres, both properties situated in Samandur Village, Attibele Hobli, Anekal Taluk, Bengaluru Urban District. Hence, you are hereby asked to take notice and to appear before this Hon'ble Court in person or by an Advocate duly instructed on **17-06-2026** at 11:00 A.M to answer the claim. Take notice that in default of your appearance on the day aforesaid mentioned, the suit will be heard and determined in your absence.

Given under my hand and seal of this Hon'ble Court on 28-04-2026.

By order of the court, Chief Ministerial Officer, Senior Civil Judge & JMFC Court at Anekal.

V. ANAND & ASSOCIATES, Advocates
No.84, Kilari Road, Bengaluru-560053.

IN THE COURT OF THE SENIOR CIVIL JUDGE AND JMFC AT SIDLAGHATTA

O.S. No 452/2024

Plaintiffs: Smt Channamma and others

V/S

Defendats: Sri B Muniyappa and others

Defendant No 5: Smt Chandrakala D/o B Muniyappa, Wife of V Byresh, Aged about 46 years, Residing at No. 93, 5th Cross, Shree Krishna Garden, R R Nagara Bangalore South-560059.

Defendnat No 4: Smt Sylaja D/o B Muniyappa, Wife of Keshvakumar, Aged about 44 years, Residing at No K K pete, Sidlaghatta Town and Taluk-562105.

Sommons and notice to Defendant No 3 and 4

Whereas, the Plaintiffs filed the above suit against the Defendants with respect to the Plaint schedule properties, the above suit is fixed for hereing on 22-06-2026 before the Hon'ble court of Senior civil judge and JMFC at Sidlaghatta you are hereby summoned in this regard you appeared before this Hon'ble court in personally or by a pleaded to file objection the same. If you failing which the suit will be disposed of equity. Given under my hand and seal of the cout this 25-04-2026

By order of the court: Sheristedar, Senior Civil judge & JMFC, Sidlaghatta Advocate for Plaintiffs: M.B. Lokesh, B.A.LLB., Advocate, H.V.H Complex, T.B.Road, Sidlaghatta

---

IN THE COURT OF THE CIVIL JUDGE AND J.M.F.C. AT PAVAGADA.
C.MIS.No.195/2026.

PETITIONER : Smt. Roopa W/o Ramanji, aged about 40 years, R/at Arlahalli village, Nidagal Hobli, Pavagada Taluk, Tumkur Dist.

Vs

RESPONDENT : 1.The Deputy Tahasildar, Nada Kacheri, Mangalawada Hobli, Pavagada Taluk, Tumkur Dist. 2.Smt. Nagarathnamma D/o late Hanumappa, aged about 54 years, **3.Smt. Shanthamma** D/o late Hanumappa, aged about 46 years, The respondent No.2 and 3 are R/at Arlahalli village, Nidagal Hobli, Pavagada Taluk, Tumkur Dist.

PAPER PUBLICATION.

WHEREAS, the petitioner has filed the above petition seeking issue of a Death Certificate of petitioner grandfather Hanumappa S/o Hanumantharayappa was died on 23/07/1998 now the matter is set down for issue notice to all or any interested person or legal heirs whoever got any objections over the above said Death Certificate may appear in this case either as respondent/petitioners and may prosecute the same on the date of hearing i.e. **on 01/06/2026.** You are hereby called upon to appear before this court at 11-00 AM on the said date of hearing either in person or through your counsel. If you fails to appear before this court, the matter will be heard and decided ex-parte.

By Order, Shirasthedar, CMO, PRO Civil Judge court Pavagada.

Advocate for petitioner : **K.R.Shivanna** Advocate, Pavagada.

[illegible]

CHANGE OF NAME

I, Vinita, daughter of Mr. Joseph Joseph and Mrs. Chinnamma, aged about 55 years, by occupation a Teacher, presently residing at Maria Nilaya, No. 11, Defence Avenue, Chellekere, Kalyananagar PO, Bangalore - 560043, I declare that below mentioned names **Mini Joseph** and **Vinita** refer to one and the same person - myself. I am known by both names, and there is no person other than me who is represented by these names, vide affidavit dated 17/4/2026 sworn to before S Nagaraja Advocate and Notary Bangalore.

[illegible]

IN THE COURT OF THE HON'BLE_PRL SENIOR CIVIL JUDGE & J.M.F.C. AT K.G.F
P & SC. No. 04/2025.

PETITIONERS : 1. Smt. Shanthi W/o Late Muniswamy Aged about 65 years, R/at: No.340, Sriram Nagar, Oorgaumpet Post, KGF-563121, KGF Taluk, Kolar District.

V/S

RESPONDENT : 1. Sri. M Elangovan S/o Late D Muniswamy & Late. C Suguna Age 50 years **2. Smt. M Kanchana** S/o Late D Muniswamy & Late. C Suguna Age 48 years, **3. Smt. M Thangamani** S/o Late. D Muniswamy & Late. C Suguna Age 46 years, **4. Smt. M Suntaha Bai** S/o Late D Muniswamy & Late. C Suguna Age 45 years, Respondents No.1 to 4 all are R/at: No.63, Krishnagiri Line, Marikuppam Post, KGF-563119,

KGF Taluk, Kolar District. **5. Sri. Kumar Rahul** Regional P.F Commissioner-II & Appellate Authority, Bengalure Central Bhavishyanidhi Bhavan, No.13, Raja Ram Mohan Roy Road, Bengaluru-560025. **6. The General Manager (HRD) Bharath Earth Movers Limited,** BEML Nagar, KGF-563115, KGF Taluk, Kolar District.

PUBLIC NOTICE

This is to inform that, the above petitioner have filed against respondent petition under section 372)of Indian Succession Act for the against respondent to issue of Succession certificate in favour of the petitioner to direct the respondent No.5 regional PF Commissioner-II & Appellate Authority, Bengaluru Central, Bhavishyanidhi Bhavan, No.13. Raja Ram Mohan Roy Road Bengaluru 560025, and The General Manager (HRD), Bharath Earth Movers Limited, BEML Nagar, K.G.F. 563115, K.G.F. Taluk, Kolar District, to make P.F. amounts and Widow Pension amount of Only.) payable and Rs.2,00,000/- (Rupees Two Lakhs Only) the same is credited and standing in the name of the deceased Sri. D. Muniswamy, bearing Badge No.317-11273, P.F. Account No.BG/BNG/2416/4720, bearing PPO No.47624, to the respondents No.5 & 6, the Garnishee, and enable to make payment and receive the above said amount along with any other accrued interest amount to the petitioner.

The hearing date of the case is posted **on : 08.06.2026** if any person having any claim or objection has to appear before Hon'ble court in person or by pleader in the above said hearing date at about 11 am to answer the same, failing which the petition will disposed of as ex-parte.

Given under my hand and seal of this court of this 29/04/2026.

By The Order of the Court
Senior Sheristedar,
Pri Senior Judge & JMFC at KGF.

Advocate For Petitioner: **PV Thimmarayappa** BA, LL.B, Advocate, KGF Date : 29/4/2026

IN THE COURT OF THE HONBLE SENIOR CIVIL JUDGE AND J.M.F.C AT CHINTAMANI

M.C. NO. 73/2021

Petitioner: Sri. K.C, Nagaraj

-V/S-

Respondent: Smt Shyamala W/o K.C. Nagaraja D/o Narasimhappa, Aged about 34 years, R/o Yagavakote village, Murugamalla Hobli, Chintamani Taluk Chickballapur District.

PAPER PUBLICATION

WHEREAS, the Petitioner filed a petition against the Respondent for the relief of dissolving the marriage through this before Hon'ble court, this Hon'ble court issued summons through RPAD to Respondent, but Respondent intentionally avoided to take notice, hence filed application for issuing notice to Respondent through paper publication in a HOSA DIGANTHA daily news paper. Where fore. You are hereby summoned to appear before the Hon'ble Senior Civil Judge and JMFC at Chintamani, On 03-06-2026 at about 11 am in person or through advocate duly instructed otherwise the suit will be disposed off in your absence.

BY ORDER OF THE COURT: Shirasthedar SR. Civil Judge JMFC At Chintamani.

Advocate:

Place: Chintamani Date: 10-04-2026

[illegible]

IN THE COURT OF THE PRL. CIVIL JUDGE AND J.M.F.C. AT GOWRIBIDANUR.
Cri.Misc.No.239/2026.

Petitioner : Smt.Padmamma, W/o Padmanabhaiah, D/o Late.Narayanaswamy, Aged about 61 years, R/at Pujarlahalli Village, Thondebhavi Hobli, Gowribidanur Tq. Chikkaballapur Dist.

V/S

Respondent: Chief registrar, Birth & Death, Taluk Office, Gowribidanur.

Paper publication draft

Whereas the petitioner has filed above petition Under Section 13(3) of registration of Birth & Death Act to obtained the death certificate of the mother of the petitioner by Name Yashodamma W/o Late. Narayanaswamy was died **on : 01-01-1960** at Pujarlahalli Village, Thondebhavi Hobli, Gowribidanur Tq, Chikkaballapur Dist. If anybody have any objection or write with respect to the above fact & petition may file objection in the above said petition by personally or by counsel. The above said petition is posted **on : 09.06.2026** At 11 P.M., otherwise said matter will be disposed accordance with law.

Given under my hand & seal of the court on this 29th day of April 2026 at Gowribidanur.

By order of the Of the Court
Chief Ministerial Officer
Civil Judge & JMFC Court Gowribidanur

Advocates for petitioner :
Sri. Ramachandra & Smt. H.Mala

[illegible]

IN THE COURT OF THE JUDGE, PRINCIPAL SMALL CAUSES AT MYSORE.
M.V.C. No.2490 OF 2023.

Petitioner: Sathisha.B.V.

V/S

Respondents : Devaraju.S. and Another
1. Devaraju.S. S/o Shrinivasa.B. R/at: # 264, Lakshmikantha Nagara, HUDCO, Hebbal 1st Stage, Mysuru -570 017

NOTICE TO RESPONDENT NO-1

Whereas, the petitioners have instituted the petition under Section 166 of the M.V. Act against Respondent No.1 and another, claiming compensation for the injuries sustained in road traffic accident. The Respondent No.1 is the R.C. owner of the said Vehicle. The Respondent no.1 is hereby summoning to appear in this court in person or by a pleader on 08-6-2026 at 11.00 AM to answer the same, failing which the above petition will be disposed off exparte.

Given under my hand and seal of this court.

By order of the court,
Chief Ministerial Officer,
Court of Small Causes, Mysuru.

M.G. Praveenkumar, B.A., LL.B., Advocates & Legal consultants, MGP Law Associates, Beside Jain Basadi, Jayalakshmi Kalyanamantapa Road, Srirangapatana Town, Mandya District. Mob: 9740260222.

[illegible]

By Order Of the Court
Chief Ministerial Officer
Prl. Civil Judge & JMFC Court Kolar.

[illegible]

IN THE COURT OF THE PRINCIPAL CIVIL JUDGE & J.M.F.C. AT HOSAKOTE

C.MIS. 201/2026

BETWEEN: Muniyappa and others ... **PETITIONERS**

AND: The Tahsildar ... RESPONDENT

GENERAL PUBLIC NOTICE

The above named petitioners has filed the above petition seeking directions to the respondent authority to entire the name of the their father by name Muniyappa S/o Muniyappa, he died on 11/06/1987 at Kumbalahalli Village, Kasaba Hobli, Hosakote taluk, Bengaluru Rural District, in the birth and death Register. Since the above matter is posted on **24/06/2026,** at **11:00 A.M** before the Principal Civil Judge and J.M.F.C at Hoskote. Therefore any person interested may appear before the court on the said date either in person or Advocate, failing which the matter will be disposed on exparte.

Given under my hand and seal of the court on this 28/04/2026.

By order of the Court, Sheristedar, Civil Judge & J.M.F.C Hoskote

K.G. RAMAKRISHNAIAH, Advocate
Upstairs, S.F.C.S Building, T.G. Extension, Hoskote-562114

PUBLIC NOTICE

It is hereby informed to the general public that my client, **SMT. NEHA BAJORIA, W/o Sri. Mukesh Bajoria AND SRI. MUKESH BAJORIA S/o Sri. Suirendra Bajoria,** informed me that, the Original Gift Deed dated 19.06.2020,which was registered as Document No.VRT-1-00572/2020-21 of Book-I, stored in CD No.VRTD 724, in the office of the Sub-Registrar, Varthur, Bangalore in respect of the below mentioned Schedule Property is lost and not traceable. In this regard my client have also lodged a complaint before the Police vide Lost Report No.2168418/2026, dated 22.04.2026.

If any persons known/found/possessing or otherwise howsoever, are hereby required to hand it over the same to the undersigned at his office below mentioned address within 7 days from the date hereof, failing which without any reference to such claim and the same, if any, shall be considered as waived.

SCHEDULE PROPERTY

All that Residential Three Bed Rooms **Apartment at bearing No.1C,** property No.2296/1531/1C, PID No.3229716690, in First Floor, Bluebell Tower at "Klassik Landmark" Residential Project measuring 1,819 Square Feet of Super Built up Area and 576 Square Feet of Undivided share of Land situated at Sy No.34/9, 34/10, 34/11, 34/12 & 34/13 of Junnasandra Village, Varthur Hobli, Bangalore East Taluk.

PRAVEEN M.R, Advocate
No.188, 3rd Floor, 2nd Cross Road, 5th Phase, Sachidanandha Nagara Layout, R.R. Nagara, Bangalore-560098. **M-9449104230**

BEFORE THE MOTOR ACCIDENT CLAIMS TRIBUNAL AT BENGALURU (SCCH-10)

M.V.C. No.9298/2025

BETWEEN: Sri. Rajesh. S... PETITIONERS
AND: Sri. Kavan & Anr... RESPONDENTS
NOTICE TO RESPONDENT No.1

Sri. Kavan, S/o Chikka Anjinappa, aged about 23 years, R/at. Bommekallu Village, Ambajidurga Hobli, Chintamani Taluk, Chikkaballapura District-563128.

Whereas, the petitioner in the above case has filed the above claim petition against you, claiming compensation of Rs.50,00,000/- (Rs. Fifty Lakhs Only) for the injuries sustained by the petitioner in a R.T.A, caused by your Mahendra Bolero LGV bearing Reg. No. KA-40-B-5413 at about 2:30 PM, 08-08-2025 reached in front of Jio petrol bunk, near Allalasandra Gate, on Mulabagal Palmaner NH-75 four lane highway road with center median, Mulabagal Taluk, Kolar District. Hence, you are hereby summoned to appear before this court in person or by a pleader duly instructed, and able to answer all the material questions relating to the case on **11-06-2026** at 11:00 A.M, (SCCH-10) failing which the above cases will be disposed of ex-parte.

Give under my hand and the seal of this court on 27-04-2026.

By order of the Court, Assistant Registrar, Court of Small Causes, Bangalore.

Advocate for petitioner: **N.MANJUNATH.**
No.3, Amar Towers, 1st Cross, Gandhinagar, Bengaluru-09.

IN THE COURT OF THE XV ADDL. JUDGE COURT OF SMALL CAUSES AT BENGALURU MAYO HALL UNIT (SCCH. No. 19)

M.V.C. No. 822 OF 2026

Petitioner : Sri. Domnic Tony F

V/s

Respondent : Sri. Dhananjaya Aged About 50 Years, S/o. Nagendrappa R/at. 2nd Cross, Sadashivanagara, Tumkur Karnataka - 572103

(Owner of The Motor Cycle Bearing Registration No. KA-06-EU-4958)

Whereas the petitioner has presented the above claim before the hon'ble tribunal under section 166 of motor vehicle act 1989 seeking compensation of rupees 20,00,000/- against the respondent for the injuries caused to the petitioner in a road accident which took place on 22.08.2025 at about 10.20 pm on road near Avalahalli Village Service Road, near Lake, Bidarahalli Hobli, Bangalore City involving your motor cycle. You are hereby noticed to appear before this court in person/pleader duly instructed **on 18/06/2026 at 11.00 a.m** failing which the petition will be heard and determined in your absence.

Given under my hand and seal of this court, the 28th April 2026.

By Order of the Court, Sheristedar, Court of Small Causes, Mayo Hall Unit, Bengaluru.

Advocate for Petitioner: **K. Mohan,** Advocate
No. 64, 4th Cross, Indiranagar 2nd Stage, Bangalore-560038. Mobile No. 9845234925

ಕರ್ನಾಟಕ ಗೃಹ ಮಂಡಳಿ

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ಜಿಲ್ಲೆ, ಸೂರ್ಯನಗರ 2ನೇ ಹಂತದ ಲಿಂಗಾಪುರದಲ್ಲಿ ನಿವೇಶನ ಮತ್ತು ಸೇವೆ ಯೋಜನೆಯ ಅಭಿವೃದ್ಧಿ ಕಾಮಗಾರಿಗೆ ಯೋಜನಾ ಉಸ್ತುವಾರಿ ಸಂಸ್ಥೆ (PMC) ನೇಮಕಾತಿಗಾಗಿ KPP Portal ಮೂಲಕ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ.

Notification No: KHB/CE/PMC/KHB/2026-27/SE0380 Date: 28.04.2026

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 12.05.2026 ಸಂಜೆ 4.00 ಗಂಟೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ಪಾಕ್ಷ/424/ಟಿಆರ್/2026-27

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, "ಜಲಭವನ," ವಿಭಾಗ, 3ನೇ ಮಹಡಿ, 1ನೇ ಬ್ಲಾಕ್, 1ನೇ ಹಂತ, ಬಿಟಿಎಂ ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029. ದೂರವಾಣಿ: 080-26539297 : e-mail : kwbeebng@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

KWB/EE/BNG/TEC/AE-2/0 & M-RMG/169 /2026-27 Dtd: 28.04.2026
Work Indent No.: KUWSDB/2026-27/WS/WORK_INDENT 506

ಕಾಮಗಾರಿಯ ವಿವರ : ರಾಮನಗರ ನಗರಸಭೆ ವ್ಯಾಪ್ತಿಯ ವಾರ್ಷಿಕ ನೀರು ಸರಬರಾಜು ಪಾಲನೆ ಮತ್ತು ನಿರ್ವಹಣೆಯಡಿ, ನಗರ ವ್ಯಾಪ್ತಿಯಲ್ಲಿನ ನೀರು ಸರಬರಾಜು ಬಿಲ್ಲಿಂಗ್ / ಕರ ಸಂಗ್ರಹ ಹಾಗೂ ಕಚೇರಿ ಕಾರ್ಯಗಳನ್ನು ನಿರ್ವಹಿಸಲು ಹೊರಗುತ್ತಿಗೆ ಸಿಬ್ಬಂದಿ ಸೇವೆ ಒದಗಿಸುವ ಕಾಮಗಾರಿ

ಟೆಂಡರ್‌ಗುತ್ತ ಮೊತ್ತ : ರೂ. 17,87,253/-, ಇ.ಎಂ.ಡಿ ಮೊತ್ತ : ರೂ.45,000/- ಗುತ್ತಿಗೆ ಕಾಲಾವಧಿ: 05 ತಿಂಗಳು.

ಟೆಂಡರ್ ವಿವರ: 1) ಟೆಂಡರ್ ಪ್ರಾರಂಭ ದಿನಾಂಕ ಮತ್ತು ಸಮಯ: **30.04.2026ರ ಬೆಳಿಗ್ಗೆ 11:00 ಗಂಟೆಯ ನಂತರ.** 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **06.05.2026ರ ಸಂಜೆ 5:30ರವರೆಗೆ.** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **08.05.2026ರ ಬೆಳಿಗ್ಗೆ 11:00 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರರವರ ಕಛೇರಿ ದೂರವಾಣಿ 080-26539297 ಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: +91-8046010000/80-68948777 ಯಿಂದ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಕನನೀಸ ಮತ್ತು ಒಚ ಮಂಡಳಿ ವಿಭಾಗ, ಬೆಂಗಳೂರು.

ವಾಸಾಸಂಇ/ಪಾಕ್ಷ/ಟಿಎ/405/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕೊಟ್ಟಾರ, ಮಂಗಳೂರು

ಟೆಂಡರ್ ಅಧಿಸೂಚನೆ ಸಂಖ್ಯೆ:ಪ.ರ.ಇ.ವ/ಮಂ/ಟೆಂಡರ್-4/ಎಇ-1/2026-27/190
ದಿನಾಂಕ: 28-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025-26ನೇ ಸಾಲಿನ ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಅಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ವ್ಯಾಪ್ತಿಯಲ್ಲಿನ ಭೂಕುಸಿತ ತಡೆಗಟ್ಟುವ ಕಾಮಗಾರಿಗಳ ಕ್ರಿಯಾಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವರ್ಷನ್-2 ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದ್ದು ಟೆಂಡರ್ ಸಲ್ಲಿಸುವ ದಿನಾಂಕವನ್ನು ಈ ಕೆಳಕಂಡಂತಿದೆ.

ಕಾಮಗಾರಿ ಹೆಸರು: (1) ಉಳ್ಳಾಲ ಕೋಟೆಕಾರು ಪಾ.ಸಂ.08ರ ಕಾಟಾರು ಸೇತುವೆ ಬಳಿ ಮಳೆನೀರು ಹರಿಯುವ ತೋರಂಬೋಳು ತೋಡಿನ ತಡೆಗೋಡೆ ಪುನರ್ ನಿರ್ಮಾಣ. RDPR/2026-27/OW/WORK_INDENT26311, ಟೆಂಡರ್‌ಗುತ್ತ ಮೊತ್ತ: ರೂ. 61.50 ಲಕ್ಷ

(2) ಉಳ್ಳಾಲ ತಾಲೂಕು ಕಿನ್ಯಾ ಗ್ರಾಮ ಪಂಚಾಯತ್ ವ್ಯಾಪ್ತಿಯ ನಡುಮನೆ ಸೇತುವೆ ಬಳಿ ತಡೆಗೋಡೆ ರಚನೆ. RDPR/2026-27/OW/WORK_INDENT26310, ಟೆಂಡರ್‌ಗುತ್ತ ಮೊತ್ತ ರೂ. 61.50 ಲಕ್ಷ

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 12-05-2026 ಅಪರಾಹ್ನ 4.00 ಗಂಟೆಯವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13-05-2026 ಅಪರಾಹ್ನ 4.30 ಗಂಟೆಗೆ (3) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಅಂತರ್ಜಾಲ https://kppp.karnataka.gov.in ನಲ್ಲಿ, ಕಛೇರಿ ದೂರವಾಣಿ ಸಂಖ್ಯೆ: 0824-2451281 ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು

DIPR/DK/KSMCA/143/ 26-27 Dt. 29.04.2026

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382-220556 ಇ-ಮೇಲ್: predkarwar@gmail.com
ಕ್ರ.ಸಂ:ಪಂರಾಇ.ಉಂ/ಕಾ/ಏಬಿ-1/2026-27/04 ದಿ: 28.04.2026

ಟೆಂಡರ್ ಪ್ರಕಟಣೆ-04/2026-27 (ಕೆ.ಪಿ.ಪಿ ಮೂಲಕ)

[illegible] (1) 2025-26ನೇ ಸಾಲಿನ [illegible] 5054 [illegible] ರೂ. 50.00 ಲಕ್ಷ, [illegible] ರೂ. 50,000.00 [illegible] 05 [illegible] (2) [illegible] ರೂ. 75.00 ಲಕ್ಷ [illegible] (3) 2024-25ನೇ ಸಾಲಿನ 4235-02-102-0-06-13 [illegible] ರೂ. 12.00 ಲಕ್ಷ [illegible] ರೂ. 30,000.00 [illegible]

(1) [illegible] Technical Bid [illegible] 11.05.2026 [illegible] 16.30 [illegible] (2) [illegible] Technical Bid [illegible] 12.05.2026 [illegible] 16.31 [illegible] (3) [illegible]

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ,
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/07/25-26

ತಾಲೂಕಾ ಪಂಚಾಯತ ಕಾರ್ಯಾಲಯ, ಕಾರವಾರ-581 301

Off: 08382-226389 E-mail: eotpkwr@gmail.com
ಸಂಖ್ಯೆ : ತಾಪಂಕಾ/ಮುದ್ರಾಂಕ ಶುಲ್ಕ/ಇ-ಟೆಂಡರ್/2026-27
ದಿನಾಂಕ: 28-04-2026

ಟೆಂಡರ್ ಪ್ರಕಟಣೆ

(Karnataka Public Procurement Portal ಮುಖಾಂತರ)

2018-19 ನೇ ಸಾಲಿನ ತಾಲೂಕಾ ಪಂಚಾಯತ ಮುದ್ರಾಂಕ ಶುಲ್ಕ ಯೋಜನೆಯ ಮಂಜೂರಾದ ತಾಲೂಕಾ ಪಂಚಾಯತ ಕಾರ್ಯಾಲಯದ ಮೊದಲನೇಯ ಮಹಡಿಯ ಕಟ್ಟಡ ನಿರ್ಮಾಣ ಕಾಮಗಾರಿಗೆ [illegible] Karnataka Public Procurement Portal [illegible] https://kppp.karnataka.gov.in [illegible] karnataka.gov.in/#/portal/protal-home [illegible]

1.	ಟೆಂಡರ್ ಪ್ರಕಟಣೆ ದಿನಾಂಕ	28-04-2026
2.	ಟೆಂಡರ್‌ನ ಅಂದಾಜು ಮೊತ್ತ	ರೂ. 1239305.00
3.	ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	ದಿನಾಂಕ: 12-05-2026 ಸಂಜೆ 4.30
4.	ಪ್ರಿ ಬಿಡ್ ಮೀಟಿಂಗ್ ದಿನಾಂಕ (ಅವಶ್ಯವಿದ್ದಲ್ಲಿ ಮಾತ್ರ)	
5.	ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	ತಾಲೂಕಾ ಪಂಚಾಯತ ಕಾರ್ಯಾಲಯ ಕಾರವಾರ ದಿನಾಂಕ: 13-05-2026, ಸಂಜೆ 4.30 ಗಂಟೆ
6.	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ. 30,000.00
7.	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕಾ ಪಂಚಾಯತ ಕಾರವಾರ

ಸಹಿ/- ಕಾರ್ಯನಿರ್ವಾಹಕ ಅಧಿಕಾರಿ,
ತಾಲೂಕ ಪಂಚಾಯತ, ಕಾರವಾರ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಕಡಕೊಳ

ಮೈಸೂರು ಜಿಲ್ಲೆ - 571311 , ದೂ: 0821-2970319
ಇ-ಮೇಲ್: itstaff ulb kadakola@yahoo.com

ಸಂ: ಪಪಂಕ/ಕಾ.ಟೆ.ಪ್ರ/ಸಿಆರ್ 01/2025-26 ದಿನಾಂಕ: 28.04.2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮಾತ್ರ)

ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆ [illegible] 1999 ರಿಂದ 2000ರ [illegible] https://kppp.karnataka.gov.in ಪೋರ್ಟಲ್ ಮುಖಾಂತರ [illegible] https://kppp.karnataka.gov.in ನಿಂದ ಟೆಂಡರ್ ಪತ್ರ [illegible] ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸುವುದು.

1) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿನಾಂಕ: 13.05.2026ರ ಸಂಜೆ 5.30 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ: 15.05.2026 ಬೆಳಿಗ್ಗೆ 11.00 ಗಂಟೆಗೆ ಅಥವಾ ಅನುಕೂಲವಾದ ದಿನಾಂಕದಂದು ತೆರೆಯಲಾಗುವುದು.

ಕ್ರ.ಸಂ	ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	DMA/2025-26/SE7461/CALL-2	34.32	64640/-

ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗೆ ಸರಬರಾಜುದಾರರು: https://kppp.karnataka.gov.in ಪೋರ್ಟಲ್‌ನಲ್ಲಿ ನೋಡಬಹುದಾಗಿರುತ್ತದೆ.

ಸಹಿ/- ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ಕಡಕೊಳ
ಸಹಿ/- ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಕಡಕೊಳ

DIPR/MYS/121/SA/2026-27

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಾಂತಿನಗರ ವಿಭಾಗ,
ಹಿಂಡಿಯು ಕಟ್ಟಡ, 9ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು-560 001.

ಸಂಖ್ಯೆ: ಬೆಂಕೇನಪಾ/ಕಾಪಾಅ/ಶಾವಿ/ಟೆಂಡರ್/02/26-27 ದಿನಾಂಕ: 29-04-2026

ಟೆಂಡರ್‌ಗಳ ಆಹ್ವಾನ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್: **https://kppp.karnataka.gov.in**

ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬೆಂಕೇನಪಾ, ಬೆಂಗಳೂರು ರವರು ಕೆಳಗೆ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಬೆಂಕೇನಪಾ/ಕೆ.ಪಿ.ಡಬ್ಲ್ಯು.ಡಿ/ಸಿ.ಪಿ.ಡಬ್ಲ್ಯು.ಡಿ/ರೈಲ್ವೆ/ಎಂ.ಇ.ಎಸ್/ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1)	2026-27ನೇ ಸಾಲಿನ (7 ತಿಂಗಳು) ಶಾಂತಿನಗರ ಮತ್ತು ವಿನಾಯಕನಗರ ಉಪ ವಿಭಾಗಗಳಲ್ಲಿ (ಅಶೋಕನಗರ ಮತ್ತು ಶಾಂತಿನಗರ ವಾರ್ಡ್) (ನೀಲಸಂದ್ರ, ವಿನಾಯಕನಗರ ಮತ್ತು ಆಸ್ಟಿನ್ ಟೌನ್) ತಾತ್ಕಾಲಿಕ ನಿಯಂತ್ರಣ ಕೊಠಡಿ ಯನ್ನು ಒದಗಿಸುವುದು. ಕಾಮಗಾರಿಯ ಅಂದಾಜು ಮೊತ್ತ (ಲಕ್ಷ ರೂ. ಗಳಲ್ಲಿ) : 15.00 ಲಕ್ಷಗಳು. ಇಎಂಡಿ ಮೊತ್ತ (ರೂ.ಗಳಲ್ಲಿ): 37,500/-.
2)	2026-27ನೇ ಸಾಲಿನ (7 ತಿಂಗಳು) ದೊಮ್ಮಲೂರು ಮತ್ತು ನೀಲಸಂದ್ರ ಉಪ ವಿಭಾಗಗಳಲ್ಲಿ (ವನ್ನಾರಪೇಟೆ ಮತ್ತು ಅಂಬೇಡ್ಕರ್ ನಗರ ವಾರ್ಡ್) (ಜೋಗುಪಾಳ್ಯ, ಅಗರಂ, ಮತ್ತು ದೊಮ್ಮಲೂರ್) ನಲ್ಲಿ ತಾತ್ಕಾಲಿಕ ನಿಯಂತ್ರಣ ಕೊಠಡಿಯನ್ನು ಒದಗಿಸುವುದು. ಕಾಮಗಾರಿಯ ಅಂದಾಜು ಮೊತ್ತ (ಲಕ್ಷ ರೂ. ಗಳಲ್ಲಿ) : 15.00 ಲಕ್ಷಗಳು. ಇಎಂಡಿ ಮೊತ್ತ (ರೂ.ಗಳಲ್ಲಿ): 37,500/-.

1) ಪೂರ್ವ ಬಿಡ್ ಸಭೆಯು ದಿನಾಂಕ: 05-05-2026 ರಂದು ಮಧ್ಯಾಹ್ನ 3.30 ಗಂಟೆಗೆ ನಡೆಯಲಿದೆ. 2) ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 11-05-2026ರ ಸಂಜೆ 4.00 ಗಂಟೆಗೆ. 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 12-05-2026ರ ಸಂಜೆ 4.30 ಗಂಟೆಗೆ.

ಸಹಿ/-, ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬೆಂಕೇನಪಾ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಗುರುವಾರ, 30 ಏಪ್ರಿಲ್ 2026
ಬೆಂಗಳೂರು





ಹೊ. ವೆ. ಶೇಷಾದ್ರಿ ಶತಾಬ್ದಿ ಸಂಸ್ಮರಣ

1926ರ ವೈಶಾಖ ಶುಕ್ಲ ಚತುರ್ದಶಿ ಯಂದು ಅವರ ಜನನ. ಈ ವರ್ಷ ಇಂದು ಈ ಮಿತಿ ಇದೆ



ಗ. ಕೃ. ವೆಂಕಟೇಶಮೂರ್ತಿ

ಶೇಷಾದ್ರಿಗಳು ಬದುಕಿದ್ದರೆ ಪಂಚಾಂಗದ ಪ್ರಕಾರ ಅವರಿಗೆ ಇದೇ ವೈಶಾಖ ಶುಕ್ಲ ಚತುರ್ದಶಿ, ಶ್ರೀ ನರಸಿಂಹ ಜಯಂತಿಯಂದು(ಏಪ್ರಿಲ್ 20, 2026) ''ಶರದ: ಶತಮ್'' (ನೂರು ವರ್ಷ) ತುಂಬುತ್ತಿತ್ತು. ಕ್ಯಾಲೆಂಡರ್ ಪ್ರಕಾರ ಅವರು ಹುಟ್ಟಿದ್ದು ಮೇ 26, 1926. ಸರಿ ಸುಮಾರು ಸಂಘ ಜನ್ಮದ ಒಂದು ವರ್ಷದ ನಂತರ.

ಕರ್ನಾಟಕದ ಸಂಘದ ಓರ್ವ ಕಾರ್ಯಕರ್ತರಾಗಿದ್ದ ಅವರು ಸಂಘದ ಅತ್ಯುಚ್ಚ ಪದವಿಗೂ ಏರಬಲ್ಲ ಸಾಮರ್ಥ್ಯ ಪಡೆದು ತ್ರಿವಿಕ್ರಮನಂತೆ ಬೆಳೆದರು. ಆದರೆ ತಮ್ಮ ಆರೋಗ್ಯ ಕಾರಣವನ್ನು ಮುಂದು ಮಾಡಿ ಅವರೇ ಸ್ವತಃ ಆ ಸ್ಥಾನವನ್ನು ನಿರಾಕರಿಸಿದಂತಹ ಉದಾಹರಣೆ ಇತರ ಸಂಘ ಸಂಸ್ಥೆಗಳಲ್ಲಿ ಸಿಗಲಾರದು.

ವ್ಯಾಸರಿಗೆ ಗಣೇಶನಂತೆ, ಸಾಕ್ರಟೀಸ್‌ಗೆ ಪ್ಲೇಟೋನಂತೆ ಹಾಗೂ ಪೂಜನೀಯ ಗುರೂಜಿಯವರಿಗೆ ಅವರು ಲಿಪಿಕಾರರಾಗಿದ್ದು ಈಗ ಇತಿಹಾಸ.

ಗುರೂಜಿಯವರ ಬೌದ್ಧಿಕ್ ಅಥವಾ ಬೈಠಕ್ ಗಳು ಹೆಚ್ಚಾಗಿ ಹಿಂದಿಯಲ್ಲಿ ಇರುತ್ತಿದ್ದವು. ಪ್ರಾರಂಭದಲ್ಲಿ ಗುರೂಜಿಯವರ ಬೌದ್ಧಿಕ ಅನ್ನು ರಿಲೇ ರೇಸ್ ನಂತೆ ಐದು ಜನ ವೃತ್ತಾಕಾರದಲ್ಲಿ ಕುಳಿತು ಒಬ್ಬರ ನಂತರ ಒಬ್ಬರು ಬರೆದುಕೊಳ್ಳುತ್ತಿದ್ದರು. ಆಮೇಲೆ ಅದನ್ನು ಆಗ ಇದ್ದ ಭೂತಾಕಾರದ ಟೇಪ್ ರೆಕಾರ್ಡರ್ ನಲ್ಲಿ, ಅಷ್ಟೇನೂ ತಾಂತ್ರಿಕ ಜ್ಞಾನ ಮುಂದುವರೆಯದಿದ್ದ ಕಾಲದಲ್ಲಿ, ಕೇಳಿ ವಿಷಯ ವಿಂಗಡಣೆ ಮಾಡಿ, ಮೊದಲು ಇಂಗ್ಲಿಷ್ ನಲ್ಲಿ ಬರೆದು ಗುರೂಜಿಯವರಿಂದಲೇ ''ಸೈ'' ಅನ್ನಿಸಿಕೊಂಡವರು ಶೇಷಾದ್ರಿಗಳು! ವೇದಗಳನ್ನು, ಪುರಾಣಗಳನ್ನು ವಿಂಗಡಿಸಿದ ವ್ಯಾಸರ ಕಾರ್ಯದೊಡನೆ ಹೋಲಿಸಬಹುದಾದ ಕಾರ್ಯ ಅದಾಗಿತ್ತು! ಶೇಷಾದ್ರಿಗಳ ವ್ಯಕ್ತಿತ್ವದ ವಿಶ್ಲೇಷಣೆ ಈ ಲೇಖನದ ಉದ್ದೇಶವಲ್ಲ, ಅದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ, ಕೇವಲ ಅವರೊಡನೆ ನನ್ನ ಒಡನಾಟದ ಕೆಲವು ಪ್ರಸಂಗಗಳ ಝಲಕು, ಶತಾಬ್ದಿ ಸಂಸ್ಮರಣೆ ರೂಪದಲ್ಲಿ ಇಲ್ಲಿದೆ.

ಪ್ರತಿ ಅಕ್ಷರಕ್ಕೂ ಇದೆ ಸೌಂದರ್ಯ !

ಅದು 1972. ಶಿವಪುರಿನಲ್ಲಿ ನಡೆದಿತ್ತು ಸಂಘ ಶಿಕ್ಷಾ ವರ್ಗ. ನಾನಾಗ ದ್ವಿತೀಯ ವರ್ಷದ ಸಂಘ ಶಿಕ್ಷಾ ವರ್ಗ ಮುಗಿಸಿದ್ದೆ. ಶಿವಪುರಿನ ವರ್ಗದ ಬೌದ್ಧಿಕ ವಿಭಾಗದಲ್ಲಿ ಪ್ರಬಂಧಕನಾಗಿ ಕೆಲಸ ಮಾಡುತ್ತಿದ್ದೆ. ನನಗೆ ನೆನಪಿರುವಂತೆ ವರ್ಗದ ಸಮಾರೋಪ ಸಮಾರಂಭದಲ್ಲಿ ಮಾನ್ಯ ಬಾಬಾ ಸಾಹೇಬ ಆಪಟೆ ಅವರಿದ್ದರು. ಅಷ್ಟು ಹೊತ್ತಿಗಾಗಲೇ ನಾನು ನನ್ನ ದುಂಡಕ್ಷರದಿಂದ ಖ್ಯಾತಿ ಪಡೆದಿದ್ದೆ. ಕಾರ್ಯಕ್ರಮದ ಘಟನಾವಳಿಗಳನ್ನು ಹಿಂದಿಯಲ್ಲಿ ಬರೆದು ವೇದಿಕೆಯ ಮೇಲೆ ಇಡುವ ಕೆಲಸ ನನ್ನ ಪಾಲಿಗೆ ಬಂತು. ನಾನು ಆಗ ಹಿಂದಿಯ ಲ '' ಎಂಬ ಅಕ್ಷರವನ್ನು ಬರೆಯುವಾಗ, 3 ಎಂಬ ಅಂಕೆಯನ್ನು ಮಲಗಿರುವಂತೆ ಬರೆದು ಅದರ ಮೇಲೆ ಗೆರೆ ಎಳೆಯುತ್ತಿದ್ದೆ. ನಾನು ಬರೆದ ಕರಡು ಪ್ರತಿಯನ್ನು ನೋಡಿದ ಶೇಷಾದ್ರಿಗಳು '' 'ಲ' ದ ಮೊದಲನೇ ಉಬ್ಬನ್ನು ದೊಡ್ಡದಾಗಿ ತುಂಬಿಕೊಂಡಿರುವಂತೆ ಬರೆದು, ಎರಡನೆಯದನ್ನು ಚಿಕ್ಕದಾಗಿರುವಂತೆ ಬರೆದರೆ ಚೆನ್ನಾಗಿರುತ್ತದೆ'' ಎಂದು ಹೇಳಿ ಬರೆದು ತೋರಿಸಿದರು. ''ಪ್ರತಿ ಅಕ್ಷರಕ್ಕೂ ಒಂದು ಸೌಂದರ್ಯವಿರುತ್ತದೆ'' ಎಂದು ನನಗೆ ಅರಿವಾದುದೇ ಆಗ. ಹೀಗೆ ನನ್ನಲ್ಲಿ ಬೀಜಾಂಕುರ ಆದ ''ಅಕ್ಷರಗಳ ಸೌಂದರ್ಯ ಪ್ರಜ್ಞೆಯು'' ಬೃಹದಾಕಾರವಾಗಿ ಬೆಳೆದು, ನಾನೀಗ ಕನ್ನಡ ಮತ್ತು ಇಂಗ್ಲಿಷ್ ನಲ್ಲಿ ಕೈಬರಹದ ಕುರಿತು ಪುಸ್ತಕಗಳನ್ನು ಬರೆದಿದ್ದೇನೆ, ಯೂಟ್ಯೂಬ್ ವಿಡಿಯೋಗಳನ್ನು ಮಾಡಿದ್ದೇನೆ.



ಅಕ್ಷರಗಳ ಸೌಂದರ್ಯಕ್ಕಾಗಿ ಅವರು ನೀಡುತ್ತಿದ್ದ ಒಂದು ಟಿಪ್, ಈಗಲೂ ನನಗೆ ನೆನಪಿದೆ ? '' ಸೊನ್ನೆಯನ್ನು ದೊಡ್ಡದಾಗಿ ಬರೆದರೆ, ಅದು ದುಂಡಾಗಿರುವ ಸಂಭವ ಕಡಿಮೆ. ಚಿಕ್ಕದಾಗಿ ಬರೆದರೆ ಅದು ದುಂಡಾಗಿರುವಂತೆ ಬರೆಯುವುದು ಸುಲಭ'' ಕೇಶವಕೃಪಾದಲ್ಲಿ ಮಾನನೀಯ ಯಾದವರಾವ್ ಜೋಶಿ ಯವರ ಕೈಬರಹ (ಹಿಂದಿ, ಮರಾಠಿ ಅಥವಾ ಇಂಗ್ಲಿಷ್) ಅಷ್ಟಕ್ಕಷ್ಟೇ. ಅವರು ಕೆಲವು ಬಾರಿ ತಾವು ಬರೆದುದನ್ನೇ ಓದಲಾಗದೆ ಸಾನಂದ ಗಣೇಶರಿಗೆ ''ಸಾನಂದ, ನಾನು ಇದು ಏನು ಬರೆದಿದ್ದೇನೆ ಅಂತ ಸ್ವಲ್ಪ ಓದಿ ಹೇಳು'' ಎಂದು ಕೇಳುತ್ತಿದ್ದರು!. ಯಾದವರಾಯರ ಕುರಿತು ಅತ್ಯಂತ ಪೂಜ್ಯ ಭಾವ ಹೊಂದಿದ್ದರೂ ಶೇಷಾದ್ರಿಗಳು, ಅವರನ್ನೂ ಕಿಚಾಯಿಸುವುದರಲ್ಲಿ ರಿಯಾಯಿತಿ ತೋರುತ್ತಿರಲಿಲ್ಲ. ತಮಾಷೆಯಾಗಿ ಅವರು ಸಾನಂದರಿಗೆ ಹೇಳುತ್ತಿದ್ದರು ''ಸಾನಂದ, ಅವರು (ಯಾದವರಾಯರು) ಯಾವ ಭಾಷೆಯಲ್ಲಿ ಬರೆದಿದ್ದಾರೆ ಅಂತ ಮೊದಲು ಕೇಳಿ ಬಿಡಪ್ಪ!''.

ನನ್ನ ಗೂಗ್ಲಿಗೆ ಅವರ ಸಿಕ್ಸರ್!

ಸ್ವಯಂಸೇವಕನಾಗಿ ನಾನು ಅವರ ಮೊಟ್ಟಮೊದಲ ಬೈಠಕ್ ನಲ್ಲಿ ಭಾಗವಹಿಸಿದ್ದು ಶಿವಮೊಗ್ಗದಲ್ಲಿ, ನಾನಾಗ ಸಹ್ಯಾದ್ರಿ ಕಾಲೇಜು ವಿದ್ಯಾರ್ಥಿ. ಅದು 1968 ಇರಬಹುದು. ಬಿ. ಹೆಚ್. ರಸ್ತೆಯ ಒಂದು ಸಭಾಂಗಣದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆಂದೇ ನಡೆದ ಬೈಠಕ್ ಅದು. ಸುಮಾರು 80 ವಿದ್ಯಾರ್ಥಿಗಳು ಸೇರಿದ್ದಿರಬಹುದು. ಶೇಷಾದ್ರಿಗಳು ಅಂದಿನ ವಿಷಯವಾದ ''ಯುವಕರಿಗೆ ಸಂಘದ ಬಗ್ಗೆ ಆಕರ್ಷಣೆ ಏಕೆ? '' ಎಂಬುದನ್ನು ಮಂಡನೆ ಮಾಡಿ, ಒಬ್ಬೊಬ್ಬರದೇ ಪ್ರತಿಕ್ರಿಯೆ ಕೇಳುತ್ತಿದ್ದರು. ಇಬ್ಬರು ಅಥವಾ ಮೂರು ಯುವಕರು ತಮ್ಮ ವಿಚಾರವನ್ನು ಹೇಳಿದ್ದಿರಬಹುದು. ಆಗ ನಾನು ಎದ್ದು ನಿಂತೆ. ನನ್ನ ಮನಸ್ಸಿನಲ್ಲಿ ''ಆಕರ್ಷಣೆ'' ಎಂದರೆ ಆಯಸ್ಕಾಂತವು ಕಬ್ಬಿಣದ ಚೂರುಗಳನ್ನು ಆಕರ್ಷಿಸಿದಾಗ ಅವು ತುಪತುಪನೇ ಬಂದು ಅಂಟಿಕೊಳ್ಳುವಂತೆ ಎಂದಿತ್ತು. ನಾನು ಹೇಳಿದೆ ''ಸಂಘದಲ್ಲಿ ಅಂತಹ ಆಕರ್ಷಣೆ ಏನೂ ಇಲ್ಲ!''. ವಿಷಯವನ್ನೇ ಪೂರ್ತಿ ನಿರರ್ಥಕಗೊಳಿಸಿ, ಶೇಷಾದ್ರಿಗಳನ್ನೇ ಅವಕ್ಕಾಗಿಸ ಬಹುದಾಗಿದ್ದ ''ಗೂಗ್ಲಿ'' ಇದಾಗಿತ್ತು. ಶೇಷಾದ್ರಿಗಳು ಕಿಂಚಿತ್ತೂ ವಿಚಲಿತರಾಗಲಿಲ್ಲ. ಅವರ ಸಮಯ ಪ್ರಜ್ಞೆ (ಪ್ರೆಸೆನ್ಸ್ ಆಫ್ ಮೈಂಡ್) ಅದ್ಭುತ ! '' ಸರಿಯಪ್ಪಾ, ಹೇಳು. 'ಸಂಘದಲ್ಲಿ ಏನೂ ಆಕರ್ಷಣೆ ಇಲ್ಲ. ಇದಕ್ಕೆ ನಾನೇ ಸಾಕ್ಷಿ. ನಾನು ಸಂಘದ ಬೈಠಕ್‌ಗೆ ಬಂದಿದ್ದೀನಿ ನೋಡಿ' ಅಂತ ಎಲ್ಲರಿಗೂ ಹೇಳಿ ಬಿಡಪ್ಪ'' ಅಂದರು ಶೇಷಾದ್ರಿಗಳು. ಬೌಂಡರಿ ಆಚೆ ಅಲ್ಲ, ಸ್ಟೇಡಿಯಂ ಆಚೆಗೇ ಬೀಳುವಂತೆ ಕ್ರಿಸ್ ಗೇಲ್ ಹೊಡೆದ ಸಿಕ್ಸರ್ ನಂತೆ ಸಿಡಿದ ಈ ಮಾತಿನಿಂದ ನಾನು ಮಂಕಾಗಿಬಿಟ್ಟೆ !




ಒಂದು ಲೇಖನಕ್ಕೆ ಪ್ರೇರಣೆಯಾದ ಆ ಮಾತು

ನಾನು 1970 – 71 ರಲ್ಲಿ, ಒಂದು ವರ್ಷ ಕೇಶವ ಕೃಪಾದಲ್ಲಿದ್ದೆ. ನನ್ನ ಕೈಬರಹ ದುಂಡಾಗಿದ್ದುದರಿಂದ ನನಗೆ ಸಾಕಷ್ಟು ಬರೆಯುವ ಕೆಲಸ ಸಿಗುತ್ತಿತ್ತು. ಶೇಷಾದ್ರಿಗಳು ಉತ್ಥಾನಕ್ಕಾಗಿ ಪೆನ್ಸಿಲ್ ನಲ್ಲಿ ಬರೆದ ಲೇಖನಗಳ ಅಂದವಾದ ಪ್ರತಿ ತಯಾರಿಸಿ ಕೊಡಬೇಕಾಗುತ್ತಿತ್ತು. ಶೇಷಾದ್ರಿಗಳ ಕೈಬರಹ ಸುಂದರವಾಗಿಯೇ ಇತ್ತು. ಆದರೆ ಅವರ ಲೇಖನದ ಕರಡು ಪ್ರತಿಯಲ್ಲಿ ಸಾಕಷ್ಟು ತಿದ್ದುಪಡಿ ಇರುತ್ತಿತ್ತು. ಹಾಗೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸಬೇಕಾದ ಪದಗಳು ಹಾಗೂ ವಾಕ್ಯಗಳು, ಬಾಣದ ಗುರುತಿನಿಂದ ಸೂಚಿಸಲ್ಪಡುತ್ತಿದ್ದವು. ಶೇಷಾದ್ರಿಗಳು ತಾವು ಉಪಯೋಗಿಸುವ ಒಂದೊಂದು ಪದವನ್ನೂ ಅಳೆದೂ ತೂಗಿ ಉಪಯೋಗಿಸುತ್ತಿದ್ದರು.



ಗುರೂಜಿಯವರ ವಿಚಾರಗಳ ಸಂಗ್ರಹವಾದ ''ಬಂಚ್ ಆಫ್ ಥಾಟ್ಸ್'' ಅನ್ನು ಹಿರಿಯ ಕನ್ನಡ ಲೇಖಕರೊಬ್ಬರು ಕನ್ನಡಕ್ಕೆ ಭಾಷಾಂತರಿಸಿದ್ದರು. ಆ ಭಾಷಾಂತರವನ್ನು ಶೇಷಾದ್ರಿಗಳು ಮತ್ತು ಶಿವರಾಮು ಒಟ್ಟಿಗೆ ಕುಳಿತು, ಒಂದೊಂದೇ ವಾಕ್ಯ ಹಾಗೂ ಪದಗಳ ಕುರಿತು ವಿಮರ್ಶೆ ಮಾಡಿ, ತಿದ್ದುತ್ತಿದ್ದರು. ಅದರ ಅಂದವಾದ, ಮುದ್ರಣಕ್ಕೆ ಕಳಿಸುವ ಪ್ರತಿಯನ್ನು ತಯಾರಿಸುವ ಕೆಲಸವು ನನ್ನ ಪಾಲಿಗೇ ಬಂದಿತ್ತು. ಅದರಲ್ಲಿ ಎಷ್ಟು ನನ್ನ ತಲೆಯೊಳಗೆ ಇಳಿದಿದೆಯೋ ಗೊತ್ತಿಲ್ಲ, ಆದರೆ ನಾನು ''ಚಿಂತನಗಂಗಾ'' ಪುಸ್ತಕ ಮುದ್ರಣಕ್ಕೆ ಹೋಗುವ ಇಡೀ ಪ್ರತಿಯನ್ನು ನನ್ನ ಕೈಬರಹದಲ್ಲೇ ಬರೆದಿದ್ದೇನೆ . (ಇಂದಿನಂತೆ ಆಗ ''ವಾಯ್ಸ್ ಟು ಟೆಕ್ಸ್ಟ್'' ಇರಲಿಲ್ಲ !)

ಸದಾ ಕೆಲಸದ ಒತ್ತಡದಲ್ಲಿರುತ್ತಿದ್ದ ಶ್ರೀ ಅಜಿತ್ ಕುಮಾರರ ಅನೇಕ ಲೇಖನಗಳ ಅಂದವಾದ ಪ್ರತಿ ಮಾಡುವುದೂ ನನ್ನ ಕೆಲಸವೇ ಆಗಿತ್ತು. ಮಾನನೀಯ ಶ್ರೀ ಯಾದವರಾವ್ ಜಿ ಯವರು ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಬರೆಯುತ್ತಿದ್ದ ಪತ್ರಗಳನ್ನು ನಾನು ಸುಂದರವಾಗಿ ಬರೆದುಕೊಡುತ್ತಿದ್ದೆ. ನನಗೆ ಚೆನ್ನಾಗಿ ನೆನಪಿದೆ. ಅವರು ಹೇಳುತ್ತಿದ್ದರು ''ಇಷ್ಟು ಸುಂದರವಾದ ಅಕ್ಷರಗಳ ಪತ್ರಕ್ಕೆ ಸಹಿ ಮಾಡಲು ನನಗೆ ನಾಚಿಕೆ ಆಗುತ್ತದೆ ಎಂದು !''

ಆಗ ಚೆನ್ನೇನಹಳ್ಳಿ ಯಲ್ಲಿ ಜನ ಸೇವಾ ವಿದ್ಯಾ ಕೇಂದ್ರದ ಕಟ್ಟಡ ನಿರ್ಮಾಣ ಆಗುತ್ತಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ಮತ್ತು ಹೊರಗಿನಿಂದಲೂ ಬ್ಯಾಂಕ್ ಚೆಕ್ ರೂಪದಲ್ಲಿ ದಾನ ಬರುತ್ತಿತ್ತು. ಪ್ರತಿದಿನ ಸುಮಾರು 20 – 30 ಚೆಕ್ ಗಳು ಇರುತ್ತಿದ್ದವು. ನಾನು ಮತ್ತು ಈಗ ಉಡುಪಿಯಲ್ಲಿರುವ ಶ್ರೀ ಹರಿದಾಸ್ ನಾಯಕ್ (ಆಗ ಅವರು ಪ್ರಚಾರಕ್) ಸೇರಿ ಚೆಕ್ ಗಳನ್ನು ಬ್ಯಾಂಕಿಗೆ ಪ್ರೆಸೆಂಟ್ ಮಾಡಲು ಚಲನ್ ಗಳನ್ನು ಬರೆಯುತ್ತಿದ್ದೆವು. ಬರೆಯುವುದು ಹೆಚ್ಚಾಗಿ ಕೆಲವು ಬಾರಿ ಬೆನ್ನು ನೋವು ಕಾಣಿಸಿಕೊಳ್ಳುತ್ತಿತ್ತು.

ಇಷ್ಟೆಲ್ಲಾ ಪುರಾಣ ಏಕೆ ಎಂದು ನಿಮಗೆ ಖಂಡಿತಾ ಅನ್ನಿಸಿರುತ್ತದೆ. ಆದರೆ ಮುಂದಿನ ಕಥನಕ್ಕೆ ಇದು ಕೇವಲ ಪೀಠಿಕೆ ಅಷ್ಟೇ.

1971 ರ ಜೂನ್ ತಿಂಗಳಲ್ಲಿ ನನ್ನನ್ನು ಗೌರಿಬಿದನೂರಿಗೆ ಸಂಘ ಕಾರ್ಯಕ್ಕಾಗಿ ನಿಯೋಜನೆ ಮಾಡಲಾಯಿತು. ನನಗಾಗಿ ಕೇಶವಕೃಪಾದಲ್ಲಿ ಒಂದು ಪುಟ್ಟ ಬೀಳ್ಕೊಡುಗೆ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಇದು ನಡೆದಿದ್ದು ಈಗ ಕೇಶವ ಕೃಪಾದಲ್ಲಿ ಅಭಿಲೇಖಾಗಾರದ ಕೊಠಡಿ ಆಗಿರುವ, ಆದರೆ ಹಿಂದೆ ಶೇಷಾದ್ರಿಗಳದ್ದಾಗಿದ್ದ ಕೊಠಡಿಯಲ್ಲಿ, ಆ ದಿನ ಶೇಷಾದ್ರಿಗಳು ಪ್ರವಾಸದಲ್ಲಿದ್ದರು. ಅಂದು ಇದ್ದ ಪ್ರಮುಖರೆಂದರೆ ಶ್ರೀ ಅಜಿತ್ ಕುಮಾರ್. ಒಂದಿಷ್ಟು ತಿನಿಸು, ಸಿಹಿ ಸೇವನೆ ಆದಮೇಲೆ ಲೋಕಾಭಿರಾಮವಾಗಿ ಮಾತನಾಡುತ್ತಾ ''ಈಗ ನೀನು ಕಾರ್ಯಕ್ಷೇತ್ರಕ್ಕೆ ಹೋಗುತ್ತಿದ್ದೆಯಲ್ಲ, ಹೊರಡುವ ಮುನ್ನ ಏನಾದರೂ ಸಂದೇಶ ನೀಡು'' ಎಂದು ಎಲ್ಲರೂ ನನ್ನನ್ನು ಒತ್ತಾಯಿಸಿದರು. ನಾನು ಲಘು ಧಾಟಿಯಲ್ಲೇ ತಮಾಷೆಗಾಗಿ ''ನಾವು ಸಂಘದ ಕೆಲಸ ಚೆನ್ನಾಗಿ ಮಾಡಬೇಕು ಎಂದಿದ್ದರೆ ನಮ್ಮ ಕೈಬರಹ ದುಂಡಾಗಿರ ಬಾರದು!'' ಎಂದು ಹೇಳಿದೆ. ಹಿನ್ನೆಲೆಯ ಅರಿವಿದ್ದ ಅಲ್ಲಿನ ಎಲ್ಲರೂ ಘೊಳ್ಳೆಂದು ನಕ್ಕರು.

ಈ ನನ್ನ ಸಂದೇಶವು, ಈಗಿನ ಭಾಷೆಯಲ್ಲಿ ಹೇಳುವುದಾದರೆ, ತುಂಬಾ ''ವೈರಲ್'' ಆಯಿತು. ಅದು ಶೇಷಾದ್ರಿಗಳ ಕಿವಿಗೂ ಬಿತ್ತು. ಅವರು ಆ ವಿಷಯವಾಗಿಯೇ ಸಾಕಷ್ಟು ಚಿಂತಿಸಿ, ಒಂದು ಲೇಖನವನ್ನೇ ಬರೆದರು ''ವರವೇ ಶಾಪವಾದಾಗ ''. ದುಂಡಾಗಿ ಅಕ್ಷರ ಬರೆಯುವ ಅಥವಾ ಇನ್ನೂ ಯಾವುದೇ ''ವರ'' ವೂ ಸಂಘ ಕಾರ್ಯಕ್ಕೆ ಪೂರಕವಾಗದಿದ್ದರೆ ''ಶಾಪ'' ಆಗಬಹುದು ಎಂಬುದೇ ಆ ಲೇಖನದ ಸಾರಾಂಶ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಯಾರೋ ಆಡಿದ ಮಾತೊಂದು ಶೇಷಾದ್ರಿಗಳ ಲೇಖನದ ''ವಸ್ತು'' ಆಗುತ್ತಿತ್ತು !




ಸಾಹಿತ್ಯ ಕೇಸರಿ, ಸಾಹಿತ್ಯಕ್ಕೇ ಸರಿ

1973 ರಲ್ಲಿ ನಾನು ನಾಗಪುರದ ತೃತೀಯ ವರ್ಷದ ಶಿಕ್ಷಣವನ್ನು ಮುಗಿಸಿ ಗೌರಿಬಿದನೂರಿಗೆ ಹಿಂತಿರುಗಿದ್ದೆ. ಅಂದಿನ ಅವಿಭಜಿತ ಕೋಲಾರ ಜಿಲ್ಲೆಯ ಜಿಲ್ಲಾ ಬೈಠಕ್ ಚಿಕ್ಕಬಳ್ಳಾಪುರದ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ನಡೆದಿತ್ತು. ಮಾನನೀಯ ಶ್ರೀ ಶೇಷಾದ್ರಿಗಳು ಬೈಠಕ್ ತೆಗೆದುಕೊಂಡಿದ್ದರು. ಅಷ್ಟು ಹೊತ್ತಿಗೆ, ನಾನು ''ನುಡಿದಂತೆ ನಡೆದವನ ಅಡಿಗೆನ್ನ ನಮನ'' ಎಂಬ ಡಾಕ್ಟರ್ ಜಿ ಯವರ ಕುರಿತು ಬರೆದ ಗೀತೆ, ವಿಕ್ರಮದಲ್ಲಿ ಯುಗಾದಿಯ ದಿನವೇ ಪ್ರಕಟವಾಗಿತ್ತು. ''ಪ್ರಜಾಮತ'' ಎಂಬ ಆಗಿನ ವಾರಪತ್ರಿಕೆಯಲ್ಲಿ ನಾನು ಬರೆದ ''ಓದೋ ಹಾಗೆ ಮಾಡೋದು ಹೇಗೆ?'' ಎಂಬ ಲೇಖನ ಪ್ರಕಟವಾಗಿತ್ತು. ಶೇಷಾದ್ರಿಗಳ ಉತ್ಥಾನದ ಅಂಕಣ 'ಪರಿಪ್ರಶ್ನ' ಕ್ಕೆ ನಾನು ಕೇಳಿದ ಎರಡು ಮೂರು ಪ್ರಶ್ನೆಗಳಿಗೆ ಶೇಷಾದ್ರಿಗಳ ಉತ್ತರ ಪ್ರಕಟವಾಗಿತ್ತು. ಜಿಲ್ಲಾ ಬೈಠಕ್ ನ ಕಡೆಯ ಹಂತದಲ್ಲಿ ನನ್ನನ್ನು ಎದ್ದು ನಿಲ್ಲಲು ಹೇಳಿ ''ಇವರು 'ಸಾಹಿತ್ಯ ಕೇಸರಿ', 'ಸಾಹಿತ್ಯಕ್ಕೇ ಸರಿ' (ಅಂದರೆ ಸಂಘ ಕಾರ್ಯಕ್ಕೆ ಸೂಕ್ತವಲ್ಲವೇ? ನನಗೆ ಗೊತ್ತಿಲ್ಲ!). ಆದ್ದರಿಂದ ಇವರು ಇನ್ನು ಮುಂದೆ ಕೇಶವಕೃಪಾಗೆ ಬಂದಿರುತ್ತಾರೆ'' ಎಂದು ಪ್ರಕಟಿಸಿದರು.

ನನ್ನಲ್ಲಿನ ಲೇಖನ ಕಲೆ ಗುರುತಿಸಿದ್ದ ಶೇಷಾದ್ರಿಗಳ ಗುಣಗ್ರಾಹಕತೆ ಮತ್ತು ಅದನ್ನು ಪ್ರಕಟಿಸಿದ ಶೇಷಾದ್ರಿಗಳ ವಿಶೇಷ ಹಾಸ್ಯ ಶೈಲಿ ಇಲ್ಲಿ ಗಮನಾರ್ಹ.



ನಾನೂ ಮೂರು ಪತ್ರ ಬರೆಯಬೇಕೆಂದಿದ್ದೇನೆ

1973ರಲ್ಲಿ ನಾಗಪುರದ ತೃತೀಯ ವರ್ಷದ ಶಿಕ್ಷಣ ಮುಗಿಸಿ, ಗೌರಿಬಿದನೂರಿಗೆ ಹೋಗುವ ಮೊದಲು ಎರಡು ದಿನ ನಾನು ಕೇಶವ ಕೃಪಾದಲ್ಲೇ ಇದ್ದೆ. ಆ ದಿನಗಳಲ್ಲಿ ಶೇಷಾದ್ರಿಗಳಿಗೆ ಅನಾರೋಗ್ಯ ಕಾಡುತ್ತಿತ್ತು. ಅವರು ಒಂದು ದಿನ ಕೇಶವಕೃಪಾದಲ್ಲೇ ಅತ್ತಿಂದಿತ್ತ ಓಡಾಡುತ್ತಿದ್ದರು.
'' ಹೇಗಿದ್ದೀರಿ ಶೇಷಾದ್ರಿಗಳೇ? '' ಎಂದು ಒಬ್ಬ ಹಿರಿಯ ಕಾರ್ಯಕರ್ತರು ಅವರ ಯೋಗಕ್ಷೇಮ ವಿಚಾರಿಸಿದರು.
'' ನಾನೂ ಮೂರು ಪತ್ರಗಳನ್ನು ಬರೆಯಬೇಕೆಂದಿದ್ದೇನೆ!'' ಥಟ್ಟನೆ ಹೇಳಿದರು ಶೇಷಾದ್ರಿಗಳು.
ಹಿನ್ನೆಲೆ : ಆಗ ತಾನೇ ಪೂಜನೀಯ ಗುರೂಜಿ ನಿಧನರಾಗಿದ್ದರು. ತಮ್ಮ ಸಾವನ್ನು ಮೊದಲೇ ನಿರೀಕ್ಷಿಸಿದ್ದ ಗುರೂಜಿ, ಮೂರು ಪತ್ರಗಳನ್ನು ಬರೆದು, ತಮ್ಮ ಸಾವಿನ ನಂತರ ಅವನ್ನು ತೆರೆಯಬೇಕೆಂದು ಸೂಚಿಸಿದ್ದರು. ಆ ಮೊದಲ ಪತ್ರದಲ್ಲಿ, ಮುಂದಿನ ಸರಸಂಘಚಾಲಕರ ನಿಯುಕ್ತಿ, ಎರಡನೇ ಪತ್ರದಲ್ಲಿ ತಮಗೆ ಯಾವ ಸ್ಮಾರಕವೂ ಬೇಡ ಎಂಬ ನಿರಾಕರಣೆ ಮತ್ತು ಮೂರನೇ ಪತ್ರದಲ್ಲಿ ತಮ್ಮ ಮಾತುಕತೆಯಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮಾಯಾಚನೆ ಇದ್ದವು. ಶೇಷಾದ್ರಿಗಳ ಹಾಸ್ಯ ಪ್ರಜ್ಞೆ ಯಾವ ಮಟ್ಟದಲ್ಲಿ ಇರುತ್ತಿತ್ತು ಎಂಬುದಕ್ಕೆ ಥಟ್ಟನೆ ಅವರ ಬಾಯಿಂದ ಹೊರಬಂದ ಉದ್ಗಾರವೇ ಸಾಕ್ಷಿ. ನಾನು ಇನ್ನೂ ಹಲವಾರು ಪ್ರಸಂಗಗಳನ್ನು ಪೋಣಿಸುತ್ತಾ ಹೋದರೆ ಲೇಖನ ತುಂಬಾ ದೀರ್ಘವಾದೀತು. ''ಅತಿ ಸರ್ವತ್ರ ವರ್ಜಯೇತ್'' ಅಲ್ಲವೇ?




ಸಂಪಾದಕೀಯ

ಪ್ರಜಾಪ್ರಭುತ್ವದ ನಿಜವಾದ ಹಬ್ಬ

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಎರಡನೇ ಹಾಗೂ ಅಂತಿಮ ಹಂತದ ಮತದಾನದಲ್ಲಿ ದಾಖಲಾಗಿರುವ ಭಾರೀ ಪ್ರಮಾಣದ ಪಾಲ್ಗೊಳ್ಳಿಕೆ, ಜನತಂತ್ರದ ಜೀವಂತಿಕೆಯನ್ನು ಮತ್ತೊಮ್ಮೆ ನೆನಪಿಸಿದೆ. ಸ್ವಾತಂತ್ರ್ಯಾನಂತರದ ಅತ್ಯಧಿಕ ಮತದಾನವೆಂದು ಚುನಾವಣಾ ಆಯೋಗ ಹೇಳಿರುವುದು ಕೇವಲ ಅಂಕಿಅಂಶವಲ್ಲ, ಅದು ರಾಜ್ಯದ ರಾಜಕೀಯ ಬಿಸಿ, ಜನರ ತೊಡಗಿಸಿಕೊಳ್ಳುವಿಕೆ ಮತ್ತು ಭವಿಷ್ಯದ ಕುರಿತು ಇರುವ ನಿರೀಕ್ಷೆಗಳ ಪ್ರತಿಫಲವೂ ಆಗಿದೆ.

ಈ ಬಾರಿ ಒಟ್ಟು ಮತದಾನದ ಪ್ರಮಾಣವು ಶೇ.92ಕ್ಕೂ ಮೀರಿರುವುದು, ಪ್ರಜಾಪ್ರಭುತ್ವದಲ್ಲಿ ಜನರ ನಂಬಿಕೆ ಇನ್ನೂ ಅಚಲವಾಗಿದೆ ಎಂಬುದನ್ನು ಸೂಚಿಸುತ್ತದೆ. ಆದರೆ ಈ ಅಂಕಿಯ ಹಿಂದೆ ಇರುವ ವಾಸ್ತವಿಕತೆಯನ್ನು ವಿಶ್ಲೇಷಿಸುವುದು ಅಷ್ಟೇ ಮುಖ್ಯ. ಮತದಾನದ ಹೆಚ್ಚಳವನ್ನು ಎಲ್ಲಾ ಪಕ್ಷಗಳು ತಮ್ಮದೇ ರೀತಿಯಲ್ಲಿ ವ್ಯಾಖ್ಯಾನಿಸುತ್ತಿವೆ. ಆಡಳಿತ ಪಕ್ಷಕ್ಕೆ ಇದು ತನ್ನ ಕಲ್ಯಾಣ ರಾಜಕಾರಣದ ಬೆಂಬಲವಾಗಿದ್ದರೆ, ವಿರೋಧ ಪಕ್ಷಕ್ಕೆ ಇದು ಬದಲಾವಣೆಯ ಸಂಕೇತ. ಹೀಗಾಗಿ, ಸಂಖ್ಯೆಗಳ ರಾಜಕಾರಣ ಚುನಾವಣೆಯ ನಂತರವೂ ಮುಂದುವರಿಯಲಿದೆ.

ಇಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಯ ಪರಿಣಾಮವನ್ನು ಕಡೆಗಣಿಸಲು ಸಾಧ್ಯವಿಲ್ಲ. ಲಕ್ಷಾಂತರ ಹೆಸರುಗಳು ಪಟ್ಟಿಯಿಂದ ತೆಗೆದುಹಾಕುವ ಮೂಲಕ ಮತಪಟ್ಟಿಗೆ ಜರಡಿ ಹಿಡಿದಿರುವುದು ಶೇಕಡಾವಾರು ಏರಿಕೆಗೆ ಕಾರಣವಾಗಿರಬಹುದು.

ಚುನಾವಣಾ ದಿನದ ಚಿತ್ರಣವು ಸಹ ಬಂಗಾಳದ ಪರಿಚಿತ ರಾಜಕೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದೆ. ಉದ್ದ ಸಾಲುಗಳು, ಸ್ಥಳೀಯ ಮಟ್ಟದ ಉದ್ವಿಗ್ನತೆ, ಆರೋಪ-ಪ್ರತ್ಯಾರೋಪಗಳು ಕಾಣಿಸಿವೆ. ಆದರೂ, ಹಿಂದಿನ ಚುನಾವಣೆಯೊಂದಿಗೆ ಹೋಲಿಸಿದರೆ ವ್ಯಾಪಕ ಹಿಂಸಾಚಾರ ಕಡಿಮೆ ಎನ್ನುವ ಅಂಶ ಗಮನಾರ್ಹ. ಭಾರೀ ಪ್ರಮಾಣದಲ್ಲಿ ಕೇಂದ್ರ ಭದ್ರತಾ ಪಡೆಯ ನಿಯೋಜನೆ ಇದಕ್ಕೆ ಕಾರಣವಾಗಿದೆ. ಇದನ್ನೇ ಅಲ್ಲಿನ ಆಡಳಿತ ಪಕ್ಷ ಪ್ರಮುಖವಾಗಿ ಟೀಕಿಸಿದೆ. ಆದರೆ, ಕೇಂದ್ರ ಚುನಾವಣಾ ಆಯೋಗ ಕೇಂದ್ರ ಪಡೆಗಳ ನಿಯೋಜನೆಯನ್ನು ಸಮರ್ಥನೆಯನ್ನೂ ಮಾಡಿಕೊಂಡಿದೆ.

ಒಟ್ಟಿನಲ್ಲಿ, ಈ ಬಾರಿ ಮತದಾನವು ಎರಡು ಸ್ಪಷ್ಟ ಸಂದೇಶಗಳನ್ನು ನೀಡುತ್ತದೆ. ಮೊದಲನೆಯದು ಜನರು ತಮ್ಮ ಹಕ್ಕನ್ನು ಬಳಸಲು ಉತ್ಸುಕರಿದ್ದಾರೆ. ಎರಡನೆಯದು ಜನತಂತ್ರದ ಪ್ರಕ್ರಿಯೆಯ ಮೇಲಿನ ವಿಶ್ವಾಸ ಉಳಿದಿದ್ದರೂ, ಅದರ ಪಾರದರ್ಶಕತೆ ಮತ್ತು ನ್ಯಾಯತೆಯ ಬಗ್ಗೆ ಪ್ರಶ್ನೆಗಳು ಇನ್ನೂ ಜೀವಂತವಾಗಿವೆ.

ಅಂತಿಮವಾಗಿ, ಫಲಿತಾಂಶ ಏನೇ ಬಂದರೂ, ಈ ಚುನಾವಣೆಯ ಪಾಠ ಸ್ಪಷ್ಟವಾಗಿದೆ. ಪ್ರಜಾಪ್ರಭುತ್ವದ ಬಲವು ಕೇವಲ ಹೆಚ್ಚಿನ ಮತದಾನದಲ್ಲಿಲ್ಲ, ಅದು ಸಮಾನ ಅವಕಾಶ, ನ್ಯಾಯಯುತ ಪ್ರಕ್ರಿಯೆ ಮತ್ತು ಜನರ ನಂಬಿಕೆಯನ್ನು ಉಳಿಸುವಲ್ಲಿ ಇದೆ. ಬಂಗಾಳದ ಈ ಮಹಾಮತದಾನ, ಭಾರತದ ಜನತಂತ್ರಕ್ಕೆ ಮತ್ತೊಂದು ಪರೀಕ್ಷೆಯಾಗಿ ಪರಿಣಮಿಸಿದೆ.

ಸದ್ಯ ಪಂಚರಾಜ್ಯಗಳ ಮತದಾನ ಪ್ರಕ್ರಿಯೆ ಮುಗಿದಿದ್ದು ಮೇ 4ಕ್ಕೆ ಫಲಿತಾಂಶ ಹೊರಬೀಳಲಿದೆ. ಆದರ ನಡುವೆ ಮತಗಟ್ಟೆ ಸಮೀಕ್ಷೆಗಳ ವರದಿಯೂ ಹೊರಬಿದ್ದಿದ್ದು, ಇಲ್ಲಿಂದಲೇ ಲೆಕ್ಕಾಚಾರವೂ ನಡೆಯಲಿದೆ.

ಗೂಂಡಾ ರಾಜ್‌ಗೆ ಹೆದರದ ಬಂಗಾಳ ಮತದಾರ

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಪ್ರಜಾಪ್ರಭುತ್ವ ಎಂದರೆ ಮತದಾರ ಮಹಾಶಯ ತನ್ನ ಮನಸ್ಸಿನ ಮಾತನ್ನು ಮತಪೆಟ್ಟಿಗೆ ಮೂಲಕ ಹೇಳುವ ಅವಕಾಶ. ಆದರೆ ಪಶ್ಚಿಮ ಬಂಗಾಳದಲ್ಲಿ ಆ ಅವಕಾಶವನ್ನು ಬಲಪ್ರಯೋಗದಿಂದ, ಭಯ ಹುಟ್ಟಿಸುವುದರಿಂದ, ರಕ್ತಪಾತದಿಂದ ಕಿತ್ತುಕೊಳ್ಳಲಾಗುತ್ತಿದೆ ಎಂಬ ಆರೋಪ ಮತ್ತೆ ಮತ್ತೆ ಕೇಳಿಬರುತ್ತಿದೆ. ಈ ಬಾರಿ ಎರಡು ಹಂತಗಳಲ್ಲಿ ನಡೆದ ವಿಧಾನಸಭಾ ಚುನಾವಣೆ ಮತ್ತೊಮ್ಮೆ ಆ ಮಾತನ್ನು ಸಾಬೀತು ಮಾಡಿದೆ.

ಇತಿಹಾಸವನ್ನು ಒಮ್ಮೆ ನೋಡಬೇಕು. ಏಕೆಂದರೆ, ಪಶ್ಚಿಮ ಬಂಗಾಳದ ಚುನಾವಣಾ ಇತಿಹಾಸ ಎಂದಿಗೂ ರಕ್ತಸಿಕ್ತವಾಗಿಯೇ ಇದೆ. ಮೊದಲು ಸಿಪಿಎಂ ಆಳ್ವಿಕೆಯಲ್ಲಿ ನಡೆಯುತ್ತಿದ್ದ ರಾಜಕೀಯ ಹಿಂಸೆ, ನಂತರ ಟಿಎಂಸಿ ಅಧಿಕಾರಕ್ಕೆ ಬಂದ ಮೇಲೆ ಮತ್ತಷ್ಟು ಉಗ್ರ ಸ್ವರೂಪ ತಾಳಿದೆ. ಎನ್‌ಸಿಆರ್‌ಬಿ ದಾಖಲೆಗಳ ಪ್ರಕಾರ, 1999ರಿಂದ 2016ರ ನಡುವೆ ಪ್ರತಿ ವರ್ಷ ಸರಾಸರಿ 20 ರಾಜಕೀಯ ಹತ್ಯೆಗಳು ಪಶ್ಚಿಮ ಬಂಗಾಳದಲ್ಲಿ ನಡೆದಿವೆ. ಇದು ಭಾರತದ ಯಾವ ರಾಜ್ಯಕ್ಕೂ ಹೋಲಿಸಲಾಗದ ದುರ್ದೈವದ ದಾಖಲೆ.

2021ರ ವಿಧಾನಸಭಾ ಚುನಾವಣೆ ಫಲಿತಾಂಶ ಬಂದ ತಕ್ಷಣ ಬಂಗಾಳದಲ್ಲಿ ರಕ್ತದ ಕೋಡಿ ಹರಿಯಿತು. ಬಿಜೆಪಿ ಕಾರ್ಯಕರ್ತರ ಕುಟುಂಬಗಳು ಜೀವ ಭಯದಿಂದ ನೆರೆಯ ಅಸ್ಸಾಮ್‌ನಲ್ಲಿ ಆಶ್ರಯ ಪಡೆದ ಘಟನೆಗಳು ವರದಿಯಾಗಿದ್ದವು. ಇದು ಸ್ವಾತಂತ್ರ್ಯ ಸಿಕ್ಕ ಭಾರತದಲ್ಲಿ ಒಂದು ರಾಜ್ಯದ ಒಳಗೆ ನಡೆದ ನಿರಾಶ್ರಿತ ಪ್ರಕರಣ. ಅದು ರಾಜ್ಯ ಪ್ರಾಯೋಜಿತ ಭಯೋತ್ಪಾದನೆ ಎಂದೂ ಕರೆಯಬಹುದು. 2018ರ ಪಂಚಾಯತ್ ಚುನಾವಣೆಯಲ್ಲಿ ಶೇ.34ರಷ್ಟು ಸ್ಥಾನಗಳಲ್ಲಿ ಟಿಎಂಸಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು. ವಿರೋಧ ಪಕ್ಷದ ಅಭ್ಯರ್ಥಿಗಳನ್ನು ನಾಮಪತ್ರ ಸಲ್ಲಿಸದಂತೆ ಬೆದರಿಸಲಾಗಿತ್ತು.

ಹಾಗಂತ, ಬಂಗಾಳದ ರಾಜಕೀಯ ಹಿಂಸೆ 2011ರಲ್ಲಿ ಟಿಎಂಸಿ ಬಂದಾಗ ಶುರುವಾಗಿದ್ದಲ್ಲ, ಸಿಪಿಎಂ ಆಳ್ವಿಕೆಯ 34 ವರ್ಷಗಳಲ್ಲಿ ಕೂಡ ರಾಜಕೀಯ ಹತ್ಯೆ, ಬೂತ್ ಕ್ಯಾಪ್ಚರಿಂಗ್, ವಿರೋಧಪಕ್ಷದ ಕಾರ್ಯಕರ್ತರ ಮೇಲೆ ದಮನ ಸಾಮಾನ್ಯ ಸಂಗತಿಯಾಗಿತ್ತು. ನಂದಿಗ್ರಾಮ, ಸಿಂಗೂರ್ ಹೋರಾಟಗಳಲ್ಲಿ ರೈತರ ಮೇಲೆ ಗೋಲಿಬಾರ್ ಮಾಡಿದ ಸರ್ಕಾರವನ್ನು ಸ್ವತಃ ಮಮತಾ ಬ್ಯಾನರ್ಜಿ ವಿರೋಧಿಸಿ ಅಧಿಕಾರಕ್ಕೆ ಬಂದರು. ಆದರೆ ಅಧಿಕಾರ ಸಿಕ್ಕ ಮೇಲೆ ಅದೇ ಹಿಂಸೆಯ ಮಾರ್ಗವನ್ನು ಇನ್ನಷ್ಟು ಸಂಘಟಿತವಾಗಿ ಬಳಸಿಕೊಂಡರು. ಬಂಗಾಳದ ದುರಂತ ಇದೇ. ಒಂದು ಗೂಂಡಾ ಸಂಸ್ಕೃತಿ ಮುಗಿಯಲಿಲ್ಲ, ಮತ್ತೊಂದು ಅದರ ಸ್ಥಾನ ತೆಗೆದುಕೊಂಡಿತು. ಇದರ ನಡುವೆ, ಇಡೀ ಸಿಪಿಎಂ ನಾಶವಾಗಿ ಹೋದರೆ, ಕಾಂಗ್ರೆಸ್ ತನ್ನ ನೆಲೆ ಕಳೆದುಕೊಂಡಿದೆ. ಇಲ್ಲಿ ಟಿಎಂಸಿಗೆ ಪರ್ಯಾಯವಾಗಿ ಬಿಜೆಪಿ ಬೆಳೆಯತೊಡಗಿತು. ಆದರೆ ಇದರ ಹಾದಿಗಳೂ ಸುಲಭವಾಗಿಯೇನೂ ಇಲ್ಲ. ಪಶ್ಚಿಮ ಬಂಗಾಳದ ಈ ರಕ್ತಸಿಕ್ತ ಮತ್ತು ಅಕ್ರಮ ರಾಜಕಾರಣ ಕೊನೆಗಾಣಿಸುವ ವಿಚಾರದಲ್ಲಿ ಅಲ್ಲಿ ಪ್ರಯತ್ನ ನಡೆಯುತ್ತಲೇ ಇದೆ.

ಹಾಗೆಯೇ, ಟಿಎಂಸಿ ರಾಜಕೀಯಕ್ಕೆ ಹೆಚ್ಚು ಪುಷ್ಟಿ ಕೊಟ್ಟಿದ್ದು ನೆರೆಯ ಬಾಂಗ್ಲಾ ಅಕ್ರಮ ನುಸುಳುಕೋರರು. ಭಾರೀ ಸಂಖ್ಯೆಯಲ್ಲಿ ಸೇರಿಕೊಂಡು, ಕ್ಷೇತ್ರಗಳಲ್ಲಿ ತಮ್ಮ ಓಟುಗಳೇ ಪ್ರಭಾವಿ ಎನ್ನಿಸಿಕೊಳ್ಳುವಷ್ಟು ಬೆಳೆದರು. ಇದನ್ನು ತಪ್ಪಿಸುವ ಸಲುವಾಗಿ ಮತ್ತು ಅಕ್ರಮ ಮತದಾರರನ್ನು ಹೊರಗಟ್ಟುವ ನಿಟ್ಟಿನಲ್ಲಿ ಬಂದದ್ದೇ ಎಸ್‌ಐಆರ್. ಮೊದಲೇ ಹೇಳಿದ ಉದ್ದೇಶ ಒಂದೇ ನಕಲಿ ಮತದಾರರನ್ನು ತೆಗೆದುಹಾಕುವುದು, ನಿಜವಾದ ಫಲಾನುಭವಿ ಎಲ್ಲರ ಹೆಸರೂ ಇರುವಂತೆ ನೋಡಿಕೊಳ್ಳುವುದು. ಆದರೆ ಟಿಎಂಸಿ ಇದನ್ನು ವಿರೋಧಿಸಿ ನ್ಯಾಯಾಲಯದ ಮೆಟ್ಟಿಲು ಹತ್ತಿತು. ಇದರ ಅರ್ಥ ಏನು? ಅಸಲಿ ಮತದಾರ ಪಟ್ಟಿ ಬಯಲಾದರೆ, ತಮ್ಮ ಭದ್ರಕೋಟೆ ಕುಸಿಯಬಹುದು ಎಂಬ ಭಯ ಟಿಎಂಸಿಗಿದೆ ಎಂದೇ ಅರ್ಥ. ಮತದಾರರ ಪಟ್ಟಿ ಶುದ್ಧೀಕರಣವನ್ನೇ ವಿರೋಧಿಸುವ ಪಕ್ಷ ಅಧಿಕಾರದಲ್ಲಿ ಇರಬಾರದು ಇದು ಸ್ಪಷ್ಟ ನೈತಿಕ ನ್ಯಾಯ.

ಟಿಎಂಸಿ ಹಿಂಸಾಚಾರವನ್ನು ಮಾತ್ರ ಅವಲಂಬಿಸಿಲ್ಲ, ರಾಜ್ಯದ ಮುಸ್ಲಿಂ ಮತದಾರರನ್ನು ಒಂದು ಬ್ಯಾಂಕ್ ಆಗಿ ಒಟ್ಟುಗೂಡಿಸಿ, ಅವರ ಓಲೈಕೆಯ ಮೂಲಕ ಅಧಿಕಾರ ಉಳಿಸಿಕೊಳ್ಳುವ ರಾಜಕಾರಣ ಟಿಎಂಸಿಯ ಮೂಲ ತಂತ್ರ. ರಾಜ್ಯದ ಜನಸಂಖ್ಯೆಯ ಶೇ.27ಕ್ಕೂ ಹೆಚ್ಚು ಮುಸ್ಲಿಂ ಸಮುದಾಯ ಇರುವ ಬಂಗಾಳದಲ್ಲಿ ಈ ಓಲೈಕೆ ಚುನಾವಣಾ ಲೆಕ್ಕಾಚಾರದಲ್ಲಿ ನಿರ್ಣಾಯಕ. ಆದರೆ ಇದರ ಪ್ರತಿಫಲ ಏನು? ಹಿಂದೂ-ಮುಸ್ಲಿಂ ಸಮಾಜಗಳ ನಡುವೆ ಕಂದಕ ಆಳವಾಗಿ ಬಿದ್ದಿದೆ. ಇದು ಅಭಿವೃದ್ಧಿ ರಾಜಕಾರಣವಲ್ಲ, ಒಡೆದಾಳುವ ರಾಜಕೀಯವೆಂದೇ ಹೇಳಬಹುದು.



ಇಷ್ಟೆಲ್ಲಾ ಮಾಡಿದ ಮೇಲೂ ಹಿಂಸಾಚಾರ ನಿಂತಿದೆ ಅಂದರೆ ತಪ್ಪಾದೀತು. ಈ ಬಾರಿಯೂ ರಾಜಕೀಯ ಹಿಂಸಾಚಾರಗಳು ನಡೆದೇ ಇವೆ. ಬಿಜೆಪಿ ಮತಗಟ್ಟೆ ಏಜೆಂಟ್ ಮೊಷಾರಫ್ ಮಿರ್ ಅವರನ್ನು ಕಬ್ಬಿಣದ ರಾಡ್ ಮತ್ತು ಆಯುಧಗಳಿಂದ ಹಲ್ಲೆ ಮಾಡಲಾಯಿತು. ಅವರ ತಲೆಗೆ ಆರು ಹೊಲಿಗೆ ಹಾಕಬೇಕಾಯಿತು. ದಕ್ಷಿಣ 24 ಪರಗಣಾ ಬಸಂತಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿಕಾಶ್ ಸರ್ದಾರ್, 200-250 ಟಿಎಂಸಿ ಗೂಂಡಾಗಳು ತಮ್ಮ ಕಾರಿನ ಮೇಲೆ ದಾಳಿ ಮಾಡಿ ಚಾಲಕನಿಗೆ ಹಲ್ಲೆ ಮಾಡಿದರು ಎಂದು ಆರೋಪಿಸಿದ್ದಾರೆ. ಭಾನ್ಗರ್‌ನಲ್ಲಿ ಐಎಸ್‌ಎಫ್ ಪ್ರತಿನಿಧಿಗಳನ್ನು ಮತಗಟ್ಟೆಯೊಳಕ್ಕೆ ಬಿಡಲಿಲ್ಲ. ಶಾಂತಿಪುರದಲ್ಲಿ ಬಿಜೆಪಿ ಶಿಬಿರ ಕಚೇರಿ ನುಚ್ಚುನೂರಾಯಿತು. ಇಷ್ಟೆಲ್ಲ ಹಿಂಸಾಚಾರ ನಡೆಯುತ್ತಿದ್ದರೂ ಮಮತಾ ಬ್ಯಾನರ್ಜಿ ಬಂಗಾಳದ ಚುನಾವಣೆಗಳು ಯಾವಾಗಲೂ ಶಾಂತಿಯುತ, ಇಲ್ಲಿ ಯಾವ ಗೂಂಡಾರಾಜ್ ಇದೆ? ಎಂದು ಪ್ರಶ್ನಿಸಿ, ಬಿಜೆಪಿ ಚುನಾವಣೆ ಕದ್ದುಕೊಳ್ಳಲು ಕೇಂದ್ರ ಪಡೆಗಳನ್ನು ಬಳಸುತ್ತಿದೆ ಎಂದು ಆರೋಪಿಸಿದರು. ಪಶ್ಚಿಮ ಬಂಗಾಳದಲ್ಲಿ ಆಡಳಿತ ಪಕ್ಷ ವಿರೋಧ ಅಭ್ಯರ್ಥಿಗಳನ್ನು ನಾಮಪತ್ರ ಸಲ್ಲಿಸದಂತೆ ತಡೆದು ಅವಿರೋಧ ಗೆಲ್ಲುವ ಉದ್ದೇಶದಿಂದ ಹಿಂಸೆ ಒಂದು ಸ್ಥಾಪಿತ ತಂತ್ರವಾಗಿ ಬಳಕೆಯಾಗಿದೆ ಎಂಬ ಸಂಶೋಧನಾ ದಾಖಲೆಗಳಿವೆ. ರಾಜ್ಯ ಸರ್ಕಾರದ ಕೃಪಾಶ್ರಯ ಇಲ್ಲದೆ ಇದು ನಡೆಯಲು ಸಾಧ್ಯವೇ ಇಲ್ಲ.

ಮಮತಾ ಸರ್ಕಾರ ಕೇವಲ ಹಿಂಸಾಚಾರ ಮತ್ತು ಓಲೈಕೆ ರಾಜಕಾರಣಕ್ಕೆ ಮಾತ್ರ ಕುಖ್ಯಾತಿ ಪಡೆದಿಲ್ಲ, ಶಿಕ್ಷಕ ನೇಮಕಾತಿ ಹಗರಣದಲ್ಲಿ ಕೋಟ್ಯಂತರ ರೂಪಾಯಿ ಲಂಚ ಪಡೆದ ಆರೋಪ ಸ್ವತಃ ಟಿಎಂಸಿ ಮಂತ್ರಿಗಳ ಮೇಲಿದ್ದು ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಬೇಕಾಯಿತು. ಅಂಗನವಾಡಿ ಕಾರ್ಯಕರ್ತೆಯರ ವೇತನದಿಂದ ಹಿಡಿದು ರಾಜ್ಯ ಗ್ರಂಥಾಲಯ ನಿಧಿಯ ವರೆಗೂ ಭ್ರಷ್ಟಾಚಾರ ಹರಡಿದೆ. ರಾಜ್ಯದ ನಿರುದ್ಯೋಗ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿದೆ. ವ್ಯಾಪಾರ ಉದ್ಯಮ ವ್ಯವಸ್ಥೆ ಹದಗೆಟ್ಟಿದ್ದರಿಂದ ಹೂಡಿಕೆದಾರರು ಬಂಗಾಳ ಬಿಟ್ಟು ಹೋಗಿದ್ದಾರೆ. ಒಂದು ಕಾಲದಲ್ಲಿ ದೇಶದ ಆರ್ಥಿಕ ರಾಜಧಾನಿಯಾಗಿದ್ದ ಕೋಲ್ಕತ್ತಾ ಇಂದು ಹಿಂದುಳಿದ ನಗರವಾಗಿ ಪರಿವರ್ತನೆಯಾಗಿದೆ.

ಕಳೆದ ಒಂದು ವರ್ಷ ಬಂಗಾಳದ ಜನ ಟಿಎಂಸಿ ಸರ್ಕಾರ ನಡೆಸಿದ ಆಡಳಿತ ವೈಫಲ್ಯಗಳನ್ನು ಒಂದೊಂದಾಗಿ ಎದುರಿಸಿದ್ದಾರೆ. ಶಿಕ್ಷಕ ನೇಮಕಾತಿ ಹಗರಣ, ರೇಶನ್ ಭ್ರಷ್ಟಾಚಾರ, ಮತ್ತು ಎಲ್ಲಕ್ಕೂ ಮಿಗಿಲಾಗಿ ಆರ್‌ಜಿ ಕರ್ ವೈದ್ಯ ವಿದ್ಯಾರ್ಥಿನಿ ಅಭಯಾಳ ಮೇಲೆ ನಡೆದ ಅತ್ಯಾಚಾರ-ಹತ್ಯೆ ಈ ಎಲ್ಲ ಪ್ರಕರಣಗಳು ಮಮತಾ ಸರ್ಕಾರದ ವಿರುದ್ಧ ಜನಾಕ್ರೋಶ ಭುಗಿಲೆಬ್ಬಿಸಿದ್ದವು. ಅಭಯಾಳ ತಾಯಿ ರತ್ನಾ ದೇಬ್‌ನಾಥ್ ಈ ಬಾರಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಅವರ ವಾಹನವನ್ನು ಟಿಎಂಸಿ ಕಾರ್ಯಕರ್ತರು ತಡೆದ ಆರೋಪ ಕೇಳಿಬಂದಿದೆ.

ಬಿಜೆಪಿ ಬಂಗಾಳದಲ್ಲಿ ಕಟ್ಟಿ ನಿಲ್ಲಿಸುತ್ತಿರುವ ಪ್ರತಿರೋಧ ಸಾಮಾನ್ಯವಾದುದಲ್ಲ, ರಾಜ್ಯಾದ್ಯಂತ ನೂರಾರು ಕಾರ್ಯಕರ್ತರ ಪ್ರಾಣ ತೆತ್ತು, ಮನೆಮಾರು ಕಳೆದುಕೊಂಡು ಹೋರಾಡುತ್ತಿರುವ ಕಾರ್ಯಕರ್ತರ ಬಲದ ಮೇಲೆ ಪಕ್ಷ ಬೆಳೆದಿದೆ. 2019ರ ಲೋಕಸಭಾ ಚುನಾವಣೆಯಲ್ಲಿ 18 ಸ್ಥಾನ ಗೆದ್ದು, 2021ರಲ್ಲಿ 77 ಸ್ಥಾನ ಪಡೆದ ಬಿಜೆಪಿ ತ್ವರಿತ ಗತಿಯಲ್ಲಿ ಬಂಗಾಳದ ಮನೆ ಮನ ತಲುಪುತ್ತಿದೆ. ಈ ಬಾರಿ ದಕ್ಷಿಣ ಬಂಗಾಳದ ಟಿಎಂಸಿ ಭದ್ರಕೋಟೆಯಲ್ಲಿ ಬಿಜೆಪಿ ನುಗ್ಗಲು ಪ್ರಯತ್ನ ಮಾಡುತ್ತಲೇ ಇದೆ.

ಬಂಗಾಳದ ಈ ಸ್ಥಿತಿ ಕೇವಲ ಒಂದು ರಾಜ್ಯದ ಆಂತರಿಕ ವಿಚಾರವಲ್ಲ, ಬಾಂಗ್ಲಾದೇಶದ ಗಡಿ ಹಂಚಿಕೊಂಡ ರಾಜ್ಯದಲ್ಲಿ ದಶಕಗಳಿಂದ ಅಕ್ರಮ ನುಸುಳುಕೋರರ ಸಮಸ್ಯೆ ತೀವ್ರವಾಗಿದ್ದು, ಅದನ್ನು ಮತ ಬ್ಯಾಂಕ್‌ಗಾಗಿ ಬಳಸಿಕೊಳ್ಳುತ್ತಿರುವ ಟಿಎಂಸಿ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಕೂಡ ಅಪಾಯ. ಸಂಘ ಪರಿವಾರ ಸಂಘಟನೆಗಳ ಮೇಲಿನ ನಿರಂತರ ದಾಳಿ, ದುರ್ಗಾಪೂಜೆ ಮೆರವಣಿಗೆಗೆ ತಡೆ, ರಾಮ ನವಮಿ ಮೆರವಣಿಗೆಯಲ್ಲಿ ಹಿಂಸೆ, ಇವೆಲ್ಲ ಒಂದು ಸಂಘಟಿತ ಕ್ಷೇತ್ರ ದಬ್ಬಾಳಿಕೆಯ ಭಾಗ.

ಕೇಂದ್ರ ಚುನಾವಣಾ ಆಯೋಗ ಸಿಆರ್‌ಪಿಎಫ್ ನಿಯೋಜಿಸಿದ್ದೇ ಪರಿಸ್ಥಿತಿ ಎಷ್ಟು ಗಂಭೀರ ಎಂಬುದರ ಸ್ಪಷ್ಟ ಸಂದೇಶ. ಸ್ವತಂತ್ರ ಮತ್ತು ನ್ಯಾಯಸಮ್ಮತ ಚುನಾವಣೆಗಾಗಿ ಕೇಂದ್ರ ಸಶಸ್ತ್ರ ಪಡೆ ಬೇಕಾಗುವ ಪ್ರಜಾಪ್ರಭುತ್ವ ಆರೋಗ್ಯಕರ ಸ್ಥಿತಿಯಲ್ಲಿಲ್ಲ. ಬಂಗಾಳದ ಮತದಾರ ಭಯ ಕಳೆದುಕೊಂಡು ಮತಪೆಟ್ಟಿಗೆ ಮುಂದೆ ನಿಲ್ಲಲು, ರಾಜ್ಯದಲ್ಲಿ ನಿಜವಾದ ರಾಜಕೀಯ ಪ್ರಜಾಪ್ರಭುತ್ವ ಮರುಸ್ಥಾಪನೆಯಾಗಬೇಕಾಗಿದೆ. ಇಲ್ಲಿ ಯಾರು ಗೆಲ್ಲುತ್ತಾರೆ, ಸೋಲುತ್ತಾರೆ ಎಂಬುದು ಸಂಗತಿಯಲ್ಲ, ರಾಜಕೀಯ ಹಿಂಸೆಗಳು ತಪ್ಪಿ, ಇಲ್ಲೊಂದು ಶಾಂತಿಪೂರ್ಣ ಸಮಾಜ ನಿರ್ಮಾಣವಾಗಬೇಕು. ಅಕ್ರಮ ನಿರಾಶ್ರಿತರನ್ನು ಹೊರಗಟ್ಟಿ, ಸ್ಥಳೀಯರಿಗೇ ಸರ್ಕಾರದ ಫಲಾನುಭವಗಳು ಸಿಗುವಂತೆ ಆಗಬೇಕು.

ದುರ್ಬಲರು ಕೂಡಿ ಒಟ್ಟಾದರೆ....

ಸರ್ವಥಾ ಸಂಹತೈರೇವ ದುರ್ಬಲೈರ್ಬಲವಾನಪಿ ।
ಅಮಿತ್ರಃ ಶಕ್ಯತೇ ಹಂತುಂ ಮಧುಹಾ ಭ್ರಮರೈರಿವ ॥ -ಮಹಾಭಾರತ

ಜೇನುಹುಳುಗಳು ಒಟ್ಟಾಗಿ ಜೇನನ್ನು ಅಳೆಯಲು ಬಂದವರನ್ನು ಮುತ್ತಿ ಕೊಲ್ಲುವಂತೆ ದುರ್ಬಲರೂ ಕೂಡ ಒಗ್ಗಟ್ಟಾಗಿದ್ದರೆ ಮಾತ್ರ ಬಲಿಷ್ಠರನ್ನು ಕೂಡ ಮುರಿದಿಕ್ಕಬಹುದು – ಎಂಬುದು ಶ್ಲೋಕಾರ್ಥ.

ಸಂಘಟನೆಯಲ್ಲಿ ಶಕ್ತಿಯಿದೆ. ವಿಘಟನೆಯಲ್ಲಿ ದುರ್ಬಲತೆಯಿದೆ. ಯಾವುದೇ ಸಮೂಹದ ಶಕ್ತಿಯನ್ನು ಮುರಿಯಲು ವಿಘಟಿಸುವ ತಂತ್ರವನ್ನು ಬಳಸಬೇಕು. ಹೀಗೆ ಮಾಡುವುದರಿಂದ ಶತ್ರುಗಳು ದುರ್ಬಲರಾಗುತ್ತಾರೆ. ಒಂದೊಮ್ಮೆ ಶತ್ರುಗಳು ಒಟ್ಟಾಗಿ ಬಂದರೆ ನಾಲ್ಕಾರು ದಿಕ್ಕಿನಿಂದ ಆಕ್ರಮಣ ಮಾಡಬೇಕು. ಆಗ ಒಂದಾದ ಸೈನ್ಯ ನಾಲ್ಕಾರು ಕಡೆಯ ಆಕ್ರಮಣವನ್ನು ಎದುರಿಸಲು ವಿಭಜಿತಗೊಳ್ಳಬೇಕಾಗುತ್ತದೆ.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್



1965ರಲ್ಲಿ ಪಾಕಿಸ್ತಾನ ಭಾರತದ ಮೇಲೆ ಆಕ್ರಮಣ ಮಾಡಿತು. ಆಗ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನಿಯಾಗಿದ್ದರು. 1950ರಲ್ಲಿ ಚೀನಾ ದೇಶ ಟಿಬೆಟನ್ನು ಆಕ್ರಮಿಸಿಕೊಂಡಾಗ ಆರ್.ಎಸ್.ಎಸ್.ನ ಎರಡನೆ ಸರಸಂಘಚಾಲಕರಾಗಿದ್ದ ಗುರೂಜಿಯವರು 'ಚೀನಾವನ್ನು ನಂಬಬಾರದು, ಅದು ಎಂದಿದ್ದರೂ ಅಪಾಯ' ಎಂದು ಅಂದಿನ ಪ್ರಧಾನಿಯಾದ ನೆಹರೂರವರಲ್ಲಿ ಹೇಳಿದಾಗ 'ನೀವು ಸುಮ್ಮನೇ ಆರೋಪ ಮಾಡುತ್ತೀರಿ. ಸುಳ್ಳನ್ನೇ ಹೇಳುತ್ತೀರಿ. ಚೀನಾ ಭಾರತ ಬಾಯಿ ಬಾಯಿ' ಎಂದು ಹೇಳಿ ಗುರೂಜಿಯವರ ಮಾತನ್ನು ಕಡೆಗಣಿಸಿದರು. ಅದೇ ಚೀನಾ 1962ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿತ್ತು. ಭಾರತ ಸೋಲನ್ನು ಅನುಭವಿಸಿತ್ತು. ಅತ್ಯಂತ ದೊಡ್ಡದಾದ ಹಿಮಾಲಯನ್ ಭೂಭಾಗವನ್ನು ಆಕ್ರಮಿಸಿಕೊಂಡಿತ್ತು.

ಇದರ ಅರಿವಿದ್ದ ಶಾಸ್ತ್ರೀಜಿಯವರು ಪಾಕಿಸ್ತಾನ ಆಕ್ರಮಣ ಮಾಡಿದಾಗ ಗುರೂಜಿಯವರನ್ನು ಕರೆಸಿ ಸಲಹೆ ಕೇಳಿದರು. ಆಗ ಅವರು 'ಶತ್ರುಗಳಿಗೆ ಪ್ರತ್ಯಾಕ್ರಮಣವೇ ಉತ್ತರ. ನಾವು ನಾಲ್ಕು ಕಡೆಗಳಿಂದ ಆಕ್ರಮಣ ಮಾಡಿ ಶತ್ರುಗಳಿಗೆ ಆಘಾತವನ್ನುಂಟು ಮಾಡಬೇಕು' ಅಂದರು. ಅದೇ ತರ ಮಾಡಿದಾಗ ನಮಗೆ ಜಯ ದೊರೆಯಿತು. ಒಟ್ಟಾಗಿ ಆಕ್ರಮಣ, ತಂತ್ರಕ್ಕೆ ಪ್ರತಿತಂತ್ರವೇ ಗೆಲುವಿನ ಗುಟ್ಟು.

ನಾವೆಂದೂ ದುರ್ಬಲರೆಂದುಕೊಳ್ಳಬಾರದು. ದುರ್ಬಲರೂ ಒಟ್ಟಾಗಿ ಮುನ್ನುಗ್ಗಿದರೆ ಜಯವನ್ನು ಪಡೆಯಲು ಸಾಧ್ಯ. ಇತ್ತೀಚೆಗೆ ಬಂಗಾಳದ ಸಂದೇಶಖಾಲಿಯಲ್ಲಿ ನಡೆದ ಘಟನೆ ಇದಕ್ಕೆ ಸಾಕ್ಷಿ. ನಿರಂತರ ತಮ್ಮ ಮೇಲೆ ಅತ್ಯಾಚಾರ ಎಸಗುತ್ತಿದ್ದ ಟಿಎಂಸಿ ಶಾಸಕ ಹಾಗೂ ಅವರ ಸಹಚರರ ಮೇಲೆ ಮಹಿಳೆಯರು ಸಿಡಿದೆದ್ದ ಪರಿಣಾಮವಾಗಿ ಅವನನ್ನು ಬಂಧಿಸಿದರು. ದುರ್ಬಲರು ಎಂದು ಕುಳಿತುಕೊಳ್ಳದೇ ಒಟ್ಟಾದರೆ ಜಯ ಸಾಧ್ಯ. ಬಲಿಷ್ಠರನ್ನೂ ಮಣಿಸಬಹುದು.


ಜೇನು ತೆಗೆಯಲು ಬಂದವನನ್ನು ಮುತ್ತಿ ಸಣ್ಣ ಸಣ್ಣ ಜೇನುಹುಳುಗಳು ಆಕ್ರಮಣವನ್ನು ಮಾಡಿ ಅವನನ್ನೇ ಕೊಲ್ಲುತ್ತವೆ. ಸಂಘಟಿತರಾದಾಗ ಅಂತಹ ಶಕ್ತಿ ಬರುತ್ತದೆ.

ಈಗಂತೂ ಕರ್ನಾಟಕದಲ್ಲಿ ನಿರಂತರ ಹಿಂದುಗಳನ್ನು ತುಳಿಯುವ ಕೆಲಸ ಸಾಗಿದೆ. ಅಲ್ಪಸಂಖ್ಯಾತರನ್ನು ಓಲೈಸುವುದಕ್ಕೆ ಸರಕಾರ ಮುಂದಾಗಿದೆ. ನಾವು ಸುಮ್ಮನೇ ಕುಳಿತರೆ ಪ್ರಯೋಜನವಿಲ್ಲ. ಹಿಂದೂ ಸಮಾಜ ಒಟ್ಟಾಗಿ ಇದನ್ನು ಒಕ್ಕೊರಲಿನಿಂದ ವಿರೋಧಿಸಬೇಕು. ಸಂಘಟಿತ ನಿರ್ಣಯಕ್ಕೆ ಬದ್ಧರಾಗಬೇಕು. ಆಗ ಸರಕಾರವೂ ತಲೆಬಾಗುತ್ತದೆ.

'ಎಲ್ ನಿನೋ'ದಿಂದ ಮಳೆ ಕಡಿಮೆಯಾಗುವುದು ನಿಜವೇ?

'ಎಲ್-ನಿನೋ'ದಿಂದಾಗಿ ಭಾರತದಲ್ಲಿ ಮುಂಗಾರು ದುರ್ಬಲವಾಗಲೇ ಬೇಕೆಂದಿಲ್ಲ, ಮುಂಗಾರು ಮೇಲೆ ಪ್ರಭಾವ ಬೀರುವ ಬೇರೆ ಅಂಶಗಳೂ ಇವೆ.

▸ ದಿನೇಶ



ಭಾರತವು ಈಗ ಬಿಸಿಲ ಧಗೆಯಲ್ಲಿ ಬೇಯುತ್ತಿದೆ. ದೇಶಾದ್ಯಂತ ತಾಪಮಾನ ವಿಪರೀತಕ್ಕೇರಿದೆ. ಉಷ್ಣಹವೆ ಜನರನ್ನು ಕಂಗೆಡಿಸುತ್ತಿದೆ.

ದೇಶದಲ್ಲಿ ಹಲವಾರು ಪ್ರದೇಶಗಳು ಅತಿಯಾದ ಉಷ್ಣತೆಯನ್ನು ದಾಖಲಿಸಿವೆ. ಏಪ್ರಿಲ್ 25ರಂದು ಉತ್ತರಪ್ರದೇಶದ ಪಟ್ಟಣವೊಂದರಲ್ಲಿ ಅತ್ಯಧಿಕ, ಅಂದರೆ 47.4ಡಿಗ್ರಿ ಸೆಲ್ಸಿಯಸ್ ಉಷ್ಣತೆ ದಾಖಲಾಯಿತು. 40 ಡಿಗ್ರಿಯಿಂದ 45 ಡಿಗ್ರಿ ಉಷ್ಣತೆ ಬಹಳಷ್ಟು ನಗರಗಳಲ್ಲಿ ದಾಖಲಾಗಿದೆ.

ಈ ಬಾರಿಯ ಬೇಸಿಗೆಯು ಅವಧಿಗೆ ಮುಂಚಿತವಾಗಿಯೇ ಆಗಮಿಸಿರುವುದಲ್ಲದೆ, ಅತಿ ಉಷ್ಣತೆಯನ್ನು ತುಂಬಿಕೊಂಡು ಜನಜೀವನ ಅಸಹನೀಯಗೊಳಿಸಿರುವುದನ್ನು ಎಲ್ಲರೂ ಅನುಭವಿಸುತ್ತಿದ್ದಾರೆ.

ಅದು ಸಾಲದೆಂಬಂತೆ ಈ ಬಾರಿ "ಸೂಪರ್ ಎಲ್-ನಿನೋ" ಕುರಿತಂತೆ ಎಲ್ಲೆಡೆ ಮಾತುಗಳು ಕೇಳಿಬರುತ್ತಿವೆ. ಮಾಧ್ಯಮಗಳೂ ಅದನ್ನು ಅತಿರೇಕವಾಗಿ ಪ್ರಚಾರ ಮಾಡುತ್ತಿವೆ. ಎಲ್-ನಿನೋ ಕಾರಣದಿಂದಾಗಿಯೇ ದೇಶದಲ್ಲಿ ಉಷ್ಣಹವೆ ಮತ್ತು ತಾಪಮಾನ ಏರಿಕೆಯಾಗಿದೆ ಎಂಬ ವಾದಗಳೂ ಕೇಳುತ್ತಿವೆ.

ಅತಿ ಉಷ್ಣತೆ, ಎಲ್ ನಿನೋ ಪ್ರಭಾವ ಸೇರಿದ ಮೇಲೆ ಮಳೆಯ ಕುರಿತಂತೆ ಮಾತು ಬರದಿದ್ದೀತೆ? ಎಲ್ ನಿನೋ ಪ್ರಭಾವದಿಂದಾಗಿ ಈ ಬಾರಿ ದೇಶದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಬಹುದು ಎಂಬ ಮಾತೂ ಎಂದಿನಂತೆ ಚಾಲ್ತಿಯಲ್ಲಿದೆ. ಮಳೆಯ ಕೊರತೆಯಿಂದಾಗಿ ಬರಗಾಲದ ಪರಿಸ್ಥಿತಿ ಬರಬಹುದು, ದೇಶದ ಕೃಷಿಗೆ ಪ್ರತಿಕೂಲವಾಗಬಹುದು, ಆ ಮೂಲಕ ದೇಶದ ಅಭಿವೃದ್ಧಿಗೂ ಹೊಡೆತ ಬೀಳಬಹುದು ಎಂಬಂತಹ ಲೆಕ್ಕಾಚಾರಗಳೂ ನಡೆಯುತ್ತಿವೆ.

ಎಲ್-ನಿನೋ ಪರಿಣಾಮ ಉಂಟಾದಾಗಲೆಲ್ಲ ಭಾರತದಲ್ಲಿ ಮಳೆ ಕಡಿಮೆಯಾಗುತ್ತದೆ, ಮುಂಗಾರು ದುರ್ಬಲವಾಗುತ್ತದೆ ಎನ್ನಲಾಗುತ್ತದೆ. ಇದು ನಿಜವೇ? ಈ ಹಿಂದೆ ಹಲವು ಬಾರಿ ಎಲ್-ನಿನೋ ಕಾರಣದಿಂದ ಮುಂಗಾರು ದುರ್ಬಲವಾಗಿರುವುದು ನಿಜವಾದರೂ ಅದಕ್ಕೆ ವಿರುದ್ಧವಾದ ವಿದ್ಯಮಾನ ಸಂಭವಿಸಿರುವುದೂ ಅಷ್ಟೇ ಸತ್ಯ.

"ಸೂಪರ್ ಎಲ್ ನಿನೋ ಕಾರಣದಿಂದಾಗಿ ತೀವ್ರ ಬರಗಾಲ ಉಂಟಾಗುವುದೆಂದು ಖಾತರಿಯಾಗಿ ಹೇಳುವಂತಿಲ್ಲ, ಬಲವಾದ ಎಲ್-ನಿನೋದಿಂದಾಗಿ ಮಳೆ ಕಡಿಮೆಯಾಗುವ ಸಾಧ್ಯತೆ ಇರುವುದು ನಿಜವಾದರೂ ಅದುವೇ ನಿರ್ಣಾಯಕವಲ್ಲ" ಎನ್ನುತ್ತಾರೆ ಐಐಟಿ ಪ್ರೊಫೆಸರ್ ಪ್ರೀತಾ ದತ್ತಾ ಎಂಬವರು. ಕೆಲ ವರ್ಷಗಳಲ್ಲಿ ಎಲ್ ನಿನೋ ಇದ್ದಾಗಲೂ ಭಾರತದಲ್ಲಿ ಉತ್ತಮ ಮಳೆಯಾಗಿದೆ ಎನ್ನುತ್ತಾರವರು.

ಏನಿದು ಎಲ್-ನಿನೋ ?

ಎಲ್ ನಿನೋ ಎಂಬುದು ಕಾಲಕಾಲಕ್ಕೆ ಕೇಂದ್ರ ಮತ್ತು ಪೂರ್ವ ಪೆಸಿಫಿಕ್ ಸಾಗರದ ಮೇಲ್ಮೈಯಲ್ಲಿ ಉಂಟಾಗುವ ನೀರಿನ ಬಿಸಿಯೇರುವಿಕೆಯ ಪ್ರಕ್ರಿಯೆ. ಇದರಿಂದಾಗಿ ಗಾಳಿಯ ದಿಕ್ಕು ಬದಲಾಗುತ್ತದೆ. ಇದು ದಕ್ಷಿಣ ಅಮೆರಿಕದಿಂದ ಹಿಡಿದು ದಕ್ಷಿಣ ಏಷ್ಯಾದ ತನಕ ಮಳೆಯ ಮೇಲೂ ಪರಿಣಾಮ ಬೀರುತ್ತದೆ.

ಎಲ್ ನಿನೋ ಪರಿಣಾಮವನ್ನು ಸಮುದ್ರದ ನೀರಿನ ಉಷ್ಣತೆಯ ಆಧಾರದಲ್ಲಿ ವಿಂಗಡಿಸಲಾಗಿದೆ. 0.5 ಡಿಗ್ರಿಗಿಂತ ಹೆಚ್ಚಿನದ್ದನ್ನು ದುರ್ಬಲವೆಂದು, 1 ಡಿಗ್ರಿಗಿಂತ ಹೆಚ್ಚಿನದ್ದನ್ನು ಸಾಧಾರಣವೆಂದು, 1.5 ಡಿಗ್ರಿಗಿಂತ ಹೆಚ್ಚಿನದ್ದನ್ನು ಬಲಿಷ್ಠವೆಂದು, 2.5 ಡಿಗ್ರಿಗಿಂತ ಹೆಚ್ಚಿನದ್ದನ್ನು ಮಹಾಬಲಿಷ್ಠವೆಂದು ಪರಿಗಣಿಸಲಾಗುತ್ತದೆ. ಸುಪರ್ ಎಲ್ ನಿನೋ ಎಂಬುದಾಗಿ ವೈಜ್ಞಾನಿಕವಾಗಿಯೇನೂ ವಿಂಗಡಣೆ ಮಾಡಿಲ್ಲ, ಆದರೆ ಈ ಬಾರಿ ದೇಶದಲ್ಲಿ ವ್ಯಾಪಿಸಿರುವ ಅತಿ ಉಷ್ಣತೆಯ ಕಾರಣದಿಂದಾಗಿ ಕೆಲವರು ಆ ರೀತಿ ಬಣ್ಣಿಸುತ್ತಿದ್ದಾರೆ.

ಎಲ್-ನಿನೋ ಮತ್ತು ಮಳೆ

ಎಲ್-ನಿನೋ ಕಾರಣದಿಂದಾಗಿ ದೇಶದಲ್ಲಿ ಮಳೆ ಕಡಿಮೆಯಾಗಲಿದೆ ಎಂದು ಹೇಳಲಾಗುತ್ತದಾದರೂ ಎಲ್ ನಿನೋ ಮತ್ತು ಮಳೆಗೆ ನೇರ ಸಂಬಂಧವಿಲ್ಲ ಎಂದು ಹವಾಮಾನ ತಜ್ಞರು ಹೇಳುತ್ತಾರೆ. 1950ರಿಂದ ಆರಂಭಿಸಿ ಈವರೆಗೆ 16 ಬಾರಿ ಎಲ್ ನಿನೋ ಉಂಟಾಗಿದ್ದರೂ 7 ಎಲ್ ನಿನೋ ವರ್ಷಗಳಲ್ಲಿ ಮಾತ್ರ ಮಳೆಯು ಕಡಿಮೆಯಾಗಿತ್ತು. ಉಳಿದ ಸಂದರ್ಭಗಳಲ್ಲಿ ವಾಡಿಕೆಯಷ್ಟೇ ಮಳೆ ಸುರಿದಿತ್ತು. 1982, 1997 ಮತ್ತು 2015ರಲ್ಲಿ ಎಲ್-ನಿನೋ ಅತ್ಯಂತ ಬಲಿಷ್ಠವಾಗಿತ್ತು. 1982 ಮತ್ತು 20157ರಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾದುದು ನಿಜವಾದರೂ, 1997ರಲ್ಲಿ ಮಳೆಯು ವಾಡಿಕೆಯಯಷ್ಟೇ ಬಂದಿತ್ತು ಹಾಗೂ ದೇಶವು ಬರಗಾಲದ ಪರಿಸ್ಥಿತಿ ಎದುರಿಸಿರಲಿಲ್ಲ ಎನ್ನುತ್ತಾರೆ ತಜ್ಞರು.

1997ರಲ್ಲಿ ಮುಂಗಾರು ದುರ್ಬಲವಾಗದಿರಲು ಮುಖ್ಯ ಕಾರಣವೆಂದರೆ ಅತ್ತ ಎಲ್ ನಿನೋ ಜತೆಗೇ ಇತ್ತ ಹಿಂದೂ ಮಹಾಸಾಗರದಲ್ಲಿ ಉಂಟಾದ ಬಲಿಷ್ಠ ಪಾಸಿಟಿವ್ ಡೈಪೋಲ್. ಆ ಮೂಲಕ ಎಲ್ ನಿನೋ ಪರಿಣಾಮವು ನಗಣ್ಯವಾಯಿತು. ಹಾಗಾಗಿ ಮುಂಗಾರು ಮಾರುತವು ಯಾವುದೇ ಒಂದು ಅಂಶದಿಂದಷ್ಟೇ ನಿರ್ಧರಿಸಲ್ಪಡುವುದಿಲ್ಲ, ಇನ್ನೂ ಹಲವಾರು ವಿಷಯಗಳು ಮುಂಗಾರು ದುರ್ಬಲತೆ ಯಾ ಪ್ರಭಾವವನ್ನು ನಿರ್ಧರಿಸುತ್ತವೆ.

ಎಲ್ ನಿನೋ ನಗಣ್ಯಗೊಳಿಸುವ 'ಐಒಡಿ'

ಭಾರತದ ಮುಂಗಾರಿನ ಮೇಲೆ ಕೇವಲ ಎಲ್ ನಿನೋ ಪರಿಣಾಮ ಬೀರುವುದಲ್ಲ, ಇನ್ನೂ ಕೆಲವು ವಿಷಯಗಳು ಪ್ರಭಾವ ಬೀರುತ್ತವೆ. ಹಿಂದೂ ಮಹಾಸಾಗರದಲ್ಲಿ ಎಲ್‌ನಿನೋ ದಂತೆಯೆ ಉಂಟಾಗುವ ಉಷ್ಣತೆಯ ಬದಲಾವಣೆಯು ಎಲ್ ನಿನೋ ಪರಿಣಾಮವನ್ನು ಹಿಂದಕ್ಕೆ ತಳ್ಳಿ ಉತ್ತಮ ಮಳೆಗೆ ಕಾರಣವಾಗುವುದೂ ಇದೆ. 'ಹಿಂದೂ ಮಹಾಸಾಗರ ಡೈಪೋಲ್' (ಐಒಡಿ) ಎಂಬ ಈ ಪ್ರಕ್ರಿಯೆಯನ್ನು 'ಹಿಂದೂ ಮಹಾಸಾಗರದ ಎಲ್ ನಿನೋ' ಎಂದೂ ಕರೆಯುವುದಿದೆ. ಹಿಂದೂ ಮಹಾಸಾಗರ ಡೈಪೋಲ್‌ನಿಂದಾಗಿ ಬದಲಾಗುವ ಸಾಗರದ ಉಷ್ಣತೆಯ ಪ್ರಮಾಣ ಮತ್ತು ಅದು ಉಂಟಾಗುವ ಸಮಯಸಂದರ್ಭ ಕೂಡಾ ಮುಂಗಾರಿನ ಮೇಲೆ ಪರಿಣಾಮ ಬೀರುವುದು.

ಹಿಂದೂ ಮಹಾಸಾಗರ ಡೈಪೋಲ್ ಉಂಟಾದರೆ ದಕ್ಷಿಣ ಭಾರತ ಮತ್ತು ಕೇಂದ್ರ ಭಾರತಕ್ಕೆ ಉತ್ತಮ ಮಳೆಯಾಗಲಿದೆ ಎಂದು ಪರಿಣತರು ಹೇಳುತ್ತಾರೆ.

ಸದ್ಯದ ಪರಿಸ್ಥಿತಿಯಲ್ಲಿ ಐಒಡಿ ಉಂಟಾಗುವ ಸಾಧ್ಯತೆ ಹೆಚ್ಚಿದೆ ಎನ್ನುತ್ತಾರವರು. ಹಿಂದೂ ಮಹಾಸಾಗರದ ಪಶ್ಚಿಮ ಭಾಗವು ಪೂರ್ವ ಭಾಗಕ್ಕಿಂತ ಹೆಚ್ಚು ಉಷ್ಣತೆ ಹೊಂದಿರುವುದು ಇದನ್ನು ಸೂಚಿಸುತ್ತದೆ ಎನ್ನುತ್ತಾರೆ.

ಅದೇರೀತಿ, ತೇವಾಂಶವನ್ನು ಹೊತ್ತು ತರುವ 'ಸೋಮಾಲಿ ಜೆಟ್' ಎಂಬ ಕಡಿಮೆ ಸ್ತರದ ಗಾಳಿ ಕೂಡಾ ಮುಂಗಾರಿನ ಮೇಲೆ ಪ್ರಭಾವ ಬೀರುವುದು. ಈ ಪರಿಣಾಮವು ಭಾರತೀಯ ಉಪಖಂಡವನ್ನು ಎಷ್ಟು ತೇವಾಂಶವು ತಲುಪುತ್ತದೆ ಎಂಬುದನ್ನು ನಿರ್ಧರಿಸುತ್ತದೆ.

ಪುಣೆಯ ಹವಾಮಾನ ಸಂಸ್ಥೆಯು ಇನ್ನೂ ಒಂದು ಸಂಶೋಧನೆಯ ಅಂಶವನ್ನು ಹೊರಗೆಡವಿದೆ. ಎಲ್ ನಿನೋ ಮತ್ತು ಮುಂಗಾರು ನಡುವಿನ ಸಂಬಂಧವು ದೇಶಾದ್ಯಂತ ಒಂದೇ ತೆರನಾಗಿರುವುದಿಲ್ಲ, ದಕ್ಷಿಣ ಭಾರತ, ಮಧ್ಯ ಭಾರತ ಮತ್ತು ಉತ್ತರ ಭಾರತದ ಮೇಲೆ ವಿಭಿನ್ನ ರೀತಿಯ ಪರಿಣಾಮ ಬೀರುತ್ತದೆ ಎಂದು ಹೇಳಿದೆ.

'ಸೂಪರ್ ಎಲ್ ನಿನೋ' ಖಾತರಿಯೇನಲ್ಲ

ಈ ವರ್ಷದ ಮಧ್ಯಭಾಗದಲ್ಲಿ ಸೂಪರ್ ಎಲ್ ನಿನೋ ವಕ್ಕರಿಸಬಹುದು ಎಂದು ಹೇಳಲಾಗುತ್ತದಾದರೂ ಅದು ಪೂರ್ಣ ಖಾತರಿಯಲ್ಲ ಎಂದೂ ಹವಾಮಾನ ತಜ್ಞರು ನುಡಿಯುತ್ತಾರೆ.

ಎಲ್ ನಿನೋ ಬರುವ ಸಂಕೇತಗಳೇನೋ ಬಲವಾಗಿವೆ. ಆದರೆ ಕೆಲವೊಮ್ಮೆ ಅದು ದಿಕ್ಕು ತಪ್ಪುವುದೂ ಇದೆ. ಸಮುದ್ರದ ಗತಿ ಯಾವತ್ತೂ ಸ್ಥಿರವಲ್ಲ, ಅನಿರೀಕ್ಷಿತ ಬದಲಾವಣೆಗಳು ಉಂಟಾಗುವುದು ಸಹಜ. ಹಠಾತ್ತನೆ ಬೀಸುವ ಗಾಳಿ, ಸಾಗರದ ಮೇಲಿನ ಇನ್ನಿತರ ಕೆಲವು ಅಂಶಗಳು ಎಲ್ ನಿನೋವನ್ನು ದುರ್ಬಲಗೊಳಿಸುವ ಸಾಧ್ಯತೆಗಳೂ ಇವೆ. ವಿಶ್ವದ ಇನ್ನಿತರ ಸಾಗರಗಳಲ್ಲಿನ ಬೆಳವಣಿಗೆಗಳೂ ಎಲ್ ನಿನೋ ಮೇಲೆ ಪರಿಣಾಮ ಬೀರುವುದಿದೆ.

ಹಾಗಾಗಿಯೇ ಕೆಲವರು ಈಗಲೇ 'ಎಲ್ ನಿನೋ'ದ ಕುರಿತಂತೆ ಪ್ರಳಯಕಾರಿಯಾಗಿ ಮಾತನಾಡುವುದು ತರವಲ್ಲವೆಂದು ಎಚ್ಚರಿಸುತ್ತಿದ್ದಾರೆ.

"ಕೇವಲ ಎಲ್ ನಿನೋ ಆಧರಿಸಿ ದೇಶದ ಮಳೆಯನ್ನು ನಿರ್ಧರಿಸುವುದು ತರವಲ್ಲ, ಸ್ಥಳೀಯ ಮಳೆಯ ಸ್ವರೂಪ, ಅದನ್ನು ಪ್ರಭಾವಿಸುವ ಸ್ಥಳೀಯ ಅಂಶಗಳನ್ನು ಆಧರಿಸಿ ಮಳೆಯ ಭವಿಷ್ಯ ನುಡಿಯಬೇಕು. ಅಲ್ಲೂ ದೀರ್ಘಾವಧಿಯ ಅಂದಾಜು ನಿರ್ಧರಿಸುವ ಬದಲಾಗಿ ಅಲ್ಪಾವಧಿಗೆ ಮಳೆಯ ಅಂದಾಜು ಲೆಕ್ಕ ಹಾಕಬೇಕು" ಎಂದು ಹವಾಮಾನ ತಜ್ಞರೊಬ್ಬರು ಎಚ್ಚರಿಸುತ್ತಾರೆ.

ಪತ್ರ ಮಿತ್ರ

ರಾಜಕಾರಣವೆಂದರೆ ಹಾಗೆಯೆ...

ಕೆಲದಿನಗಳ ಹಿಂದೆ ಹೊಸದಿಗಂತದ ಸಂಪಾದಕೀಯವು 'ಪದಬಳಕೆ ಮತ್ತು ರಾಜಕಾರಣದ ಸಭ್ಯತೆ' ವಿಷಯದ ಮೇಲೆ ಬೆಳಕು ಚೆಲ್ಲಿದೆ. ಹೌದು, ರಾಜಕಾರಣಿ, ರಾಜಕೀಯ ಎಂಬುದೆಲ್ಲ ಈಗ ಯಾವುದೇ ಸಾಮಾನ್ಯ ಎನ್ನುವ ಸಂಗತಿಗಳಿಗೆ ಹೊರತಾದವು ಎಂಬಂತೆ ಪರಿಗಣಿಸಲ್ಪಡುತ್ತಿದೆ. ರಾಜಕಾರಣಿ ಎಂಬ ಬಿರುದು ಹೊತ್ತ ಮೇಲೆ, ಅವರನ್ನು ಯಾರೂ ಪ್ರಶ್ನಿಸುವಂತೆಯೂ ಇಲ್ಲ ಎಂಬಂತಾಗಿದೆ. ಇದೇಕೆ ಹೀಗೆ? ಅಂದರೆ, ಅದಿರುವುದೇ ಹಾಗೆ!

ನಮ್ಮ ರಾಜಕಾರಣಿಗಳು ಬಳಸುವ ಭಾಷೆ ಹಾಗೆಯೆ. ಯಾವಾಗ, ಯಾರಿಗೆ ಬೇಕಾದರೂ, ಏನನ್ನಾದರೂ ಹೇಳಬಹುದು. ಅದೊಂದು ರೀತಿ ಅವರ ವಿಶೇಷಾಧಿಕಾರ. ಅದನ್ನು ಪ್ರಶ್ನಿಸುವಂತೆ ಇಲ್ಲ. ಆ ರಾಜಕಾರಣಿ ಅದೆಷ್ಟೇ ಹಿರಿಯವನಾಗಲಿ ಅಥವಾ ಕಿರಿಯವನಾಗಲಿ, ಅವನಾಡುವ ಮಾತನ್ನು ಅಲ್ಲಗಳೆಯಲೇ ಬಾರದು. ಕಾಂಗ್ರೆಸ್ ಹಿರಿಯ ನಾಯಕ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ದೇಶದ ಪ್ರಧಾನಿಯನ್ನೇ 'ಭಯೋತ್ಪಾದಕ' ಎಂದು ಟೀಕಿಸಿರುವುದು ಅದಕ್ಕೆ ನೂತನ ನಿದರ್ಶನ. ಪ್ರಾಯಶಃ, ಖರ್ಗೆಯವರಿಗೆ ಈ ಪದದ ನಿಜವಾದ ಅರ್ಥವೇ ತಿಳಿದಿಲ್ಲ ಅನ್ನಬೇಕೋ ಅಥವಾ ಟೀಕೆ ಮಾಡುವ ಭರದಲ್ಲಿ ಪ್ರಜ್ಞೆ ತಪ್ಪಿರಬಹುದೋ ಎಂಬುದೇ ಅರ್ಥವಾಗುತ್ತಿಲ್ಲ.

ಮಲ್ಲಿಕಾರ್ಜುನ ಖರ್ಗೆ ಅತ್ಯಂತ ಹಿರಿಯ ಕಾಂಗ್ರೆಸ್ ನಾಯಕ. ತೀರಾ ದಮನಿತ ವರ್ಗದಿಂದ ಮೇಲೆ ಬಂದವರು. ಭಾರತದ ಸಂವಿಧಾನದ ಪೂರಾ ಅರಿವೂ ಇದ್ದಂಥವರು. ಸಂಪಾದಕೀಯದಲ್ಲಿ ಹೇಳಿದಂತೆ ಅವರು ಬೆಂಕಿಯಿಂದ ಅರಳಿಬಂದ ಮುಖಂಡರು. ಯಾವ ಸಮಯದಲ್ಲಿ ಯಾವ ರೀತಿ ಮಾತಾಡಬೇಕು, ಮಾತಾಡುವಾಗ ಯಾವ ಯಾವ ಪದಗಳ ಬಳಕೆ ಆಗಕೂಡದು ಎಂಬೆಲ್ಲ ಅರಿವಿರುವವರು. ಇಷ್ಟಾಗಿಯೂ ಪ್ರಧಾನಿಯನ್ನು 'ವಿಷಸರ್ಪ', 'ಭಯೋತ್ಪಾದಕ' ಎಂದೆಲ್ಲ ಹೇಳಿರುವ ಹಿಂದೆ ಏನೋ ಒಂದು ಅನಿವಾರ್ಯತೆ ಇದ್ದಿರಬಹುದೆ ? ಅವರು ಬಳಸಿದ ಪದಗಳೆಲ್ಲ ಅವರ ಸ್ವಂತದ್ದಾಗಿರದೆ, ಇನ್ಯಾರನ್ನೋ ಓಲೈಸಲು ಈ ರೀತಿ ಬಳಸಿದ್ದಾಗಿರಬಹುದೆ ? ಇಂದು ಅವರು ಹೆಸರಿಗಷ್ಟೇ ಎಐಸಿಸಿ ಅಧ್ಯಕ್ಷ. ಮಾಡುವ ಕೆಲಸಗಳೆಲ್ಲ ಇನ್ಯಾರದೋ ಆಣತಿಯಂತೆ ಎಂಬುದು ರಹಸ್ಯವೇನಲ್ಲ. ಟೀಕೆ ಆರೋಗ್ಯಪೂರ್ಣವಾಗಿರಬೇಕು ಎಂಬ ಜ್ಞಾನವಿದ್ದೂ ಯಾಕಿಷ್ಟು ಬದಲಾವಣೆ ಅಂತ ಕೇಳಿದರೆ ಅನಿವಾರ್ಯತೆ!? ಅಸಹಾಯಕತೆಯೋ, ತನ್ನ ಸ್ಥಾನ ಉಳಿಸಿಕೊಳ್ಳುವ ವ್ಯರ್ಥ ಪ್ರಯತ್ನವೋ, ಒಟ್ಟಾರೆ ಇಂತಹ ಕೆಲ ಪದಗಳನ್ನು ಬಳಸಿ ಕಾಂಗ್ರೆಸ್ ಅಧಿನಾಯಕನನ್ನು ಮೆಚ್ಚಿಸಲು ಯತ್ನಿಸುತ್ತಿರುವುದಂತೂ ಸತ್ಯ.

ಬಳಿಕ, ತಾನು ಹೇಳಿದ್ದನ್ನು ತಪ್ಪಾಗಿ ಅರ್ಥೈಸಲಾಗಿದೆ, ನಾನು ಹಾಗೆ ಹೇಳಲೇ ಇಲ್ಲ ಎನ್ನುವುದೆಲ್ಲ ರಾಜಕೀಯದ ಗಿಲೀಟಿನ ಮಾತುಗಳು. ಅದರಲ್ಲಿ ತಪ್ಪೊಪ್ಪಿಗೆಯ, ಪಶ್ಚಾತ್ತಾಪದ ಸೋಂಕೇ ಇಲ್ಲ.

-ಶಂಕರನಾರಾಯಣ ಭಟ್, ಮಾಡಗೇರಿ

ಸ್ವಾಗತಾರ್ಹ

ಶಾಲೆಗಳಲ್ಲಿ ಪತ್ರಿಕೆ ಓದುವ ಅಭ್ಯಾಸವನ್ನು ಕಡ್ಡಾಯಗೊಳಿಸಿರುವ ಸರ್ಕಾರದ ಕ್ರಮವು ಸ್ತುತ್ಯಾರ್ಹವಾಗಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಸ್ಕ್ರೀನ್ ಟೈಮ್ ಹೆಚ್ಚಾಗಿ ಮಕ್ಕಳ ಏಕಾಗ್ರತೆ ಮತ್ತು ಸೃಜನಶೀಲತೆ ಸುಮಾರು 40% ರಷ್ಟು ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಮುದ್ರಿತ ಮಾಧ್ಯಮದತ್ತ ಮಕ್ಕಳನ್ನು ಸೆಳೆಯುವುದು ಬೌದ್ಧಿಕ ಕ್ರಾಂತಿಗೆ ಮುನ್ನುಡಿಯಾಗಲಿದೆ. ದಿನಕ್ಕೆ ಕನಿಷ್ಠ 20 ನಿಮಿಷ ಪತ್ರಿಕೆ ಓದುವುದರಿಂದ ವಿದ್ಯಾರ್ಥಿಗಳಲ್ಲಿ ಭಾಷಾ ಪ್ರೌಢಿಮೆ ಹೆಚ್ಚುವುದಲ್ಲದೆ ದೇಶ-ವಿದೇಶಗಳ ವಿದ್ಯಮಾನಗಳ ಬಗ್ಗೆ ಆಳವಾದ ಜ್ಞಾನ ಲಭಿಸುತ್ತದೆ.

ಈ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಗೊಳಿಸಲು ಶಾಲೆಗಳಲ್ಲಿ ಸುದ್ದಿ ಸಂಕ್ಷೇಪಣೆ ಸಂವಾದಗಳನ್ನು ಏರ್ಪಡಿಸುವುದು ಮತ್ತು ಪತ್ರಿಕೆಯಲ್ಲಿನ ಕ್ಲಿಷ್ಟ ಪದಗಳನ್ನು ಬಳಸಿ ಮಕ್ಕಳೇ ಸ್ವತಃ ಶಬ್ದ ಭಂಡಾರ, ಗೋಡೆ ಪತ್ರಿಕೆ ಸಿದ್ಧಪಡಿಸುವಂತಹ ನವೀನ ಕ್ರಮಗಳನ್ನು ಅಳವಡಿಸಿಕೊಳ್ಳಬಹುದು. ಅಲ್ಲದೆ ಲೇಖನಗಳ ವಿಮರ್ಶೆ ಮಾಡುವ ಮೂಲಕ ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ ಬೆಳೆಸಲು ಸಾಧ್ಯವಿದೆ. ಪತ್ರಿಕೆಯ ಓದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಮಾರ್ಗವಾಗಲಿ.

-ಡಾ. ವಿಜಯಕುಮಾರ್, ರಾಯಚೂರು

ಅಶ್ಲೀಲ ಕುಣಿತಕ್ಕೆ ತಡೆ

ಶಾಲೆಗಳಲ್ಲಿ ಅಶ್ಲೀಲ ಹಾಡುಗಳಿಗೆ ಮಕ್ಕಳು ನರ್ತಿಸುವಂತೆ ಮಾಡುವುದಕ್ಕೆ ಸರಕಾರವು ನಿಷೇಧ ಹೇರಿರುವುದು ಅತ್ಯಂತ ಸೂಕ್ತ ಕ್ರಮವಾಗಿದೆ. ಹಾಡಿನ ಹೆಸರಿನಲ್ಲಿ ಅಸಭ್ಯ ಪದಪ್ರಯೋಗ, ನೃತ್ಯದ ಹೆಸರಿನಲ್ಲಿ ಅಂಗಾಂಗ ಕುಣಿತ ಮುಂತಾದವು ಹೆಚ್ಚು ಪ್ರಚಾರ ಪಡೆಯುತ್ತಿರುವ ಈ ಸನ್ನಿವೇಶದಲ್ಲಿ ಸರಕಾರವು ಶಾಲಾ ಮಕ್ಕಳಿಂದ ಇಂತಹ ಅಸಭ್ಯ ಹಾಡುಗಳಿಗೆ ಅಶ್ಲೀಲ ಕುಣಿತವನ್ನು ನಿರ್ಬಂಧಿಸಲು ಹೊರಟಿರುವುದು ಶ್ಲಾಘನೀಯ ಕ್ರಮವಾಗಿದೆ.

ಶಾಲಾ ಕಾಲೇಜುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇಂತಹ ಅಶ್ಲೀಲ ಕುಣಿತಗಳ ಪ್ರಸಂಗಗಳು ಹೆಚ್ಚುತ್ತಿವೆ. ಸಿನಿಮಾ ಹಾಡುಗಳಿಗೆ ಮೈ ಕುಣಿಸುವುದು ಕಾಣುತ್ತಿದೆ. ಬಹುತೇಕ ಬಾರಿ ಪುಟ್ಟ ಮಕ್ಕಳಿಗೆ ಈ ಹಾಡುಗಳ ಅರ್ಥವೂ ತಿಳಿದಿರುವುದಿಲ್ಲ, ತಾವು ಮಾಡುವ ಕುಣಿತವು ಅಸಭ್ಯವಾದುದೆಂದೂ ತಿಳಿದಿರುವುದಿಲ್ಲ, ಅವರು ಸಿನಿಮಾದ ಕುಣಿತಗಳನ್ನು ಅನುಕರಿಸುತ್ತಾರಷ್ಟೆ. ಆದರೆ ಶಾಲಾ ಕಾಲೇಜುಗಳ ಶಿಕ್ಷಕ ವೃಂದದವರಿಗಾದರೂ ಇಂತಹ ಅಶ್ಲೀಲ ಹಾಡು, ಕುಣಿತಗಳು ಸಲ್ಲದು ಎಂಬ ಅರಿವಿರಬೇಕಲ್ಲವೆ. ಆದರೆ ಅಂತಹ ಜಾಗೃತಿ ಇರುವಂತೆ ತೋರುತ್ತಿಲ್ಲ, ಹಾಗಾಗಿ ಸರಕಾರವೇ ಇಂತಹ ಕ್ರಮಕ್ಕೆ ಮುಂದಾಗಿರುವುದು ಸ್ತುತ್ಯ ಕ್ರಮ.

-ಚಿದಾನಂದ ರಾವ್, ಕುಂದಾಪುರ

ಖಂಡನೀಯ

ಸಿಇಟಿ ಪರೀಕ್ಷೆಯ ವೇಳೆ ವಿದ್ಯಾರ್ಥಿಗಳ ಜನಿವಾರವನ್ನು ಕಿತ್ತು ತೆಗೆದ ಘಟನೆಯು ವರದಿಯಾಗಿರುವುದು ಅತ್ಯಂತ ಖಂಡನೀಯ. ಬೆಂಗಳೂರು ಮತ್ತು ಚಿಕ್ಕಬಳ್ಳಾಪುರದಲ್ಲಿ ಇಂತಹ ಘಟನೆಗಳು ನಡೆದಿವೆ. ಇದು ಪರೀಕ್ಷಾ ನಿಯಮಗಳನ್ನು ಅನುಸರಿಸಿ ನಡೆಸಿರುವ ಕೃತ್ಯ ಎನ್ನುವುದಕ್ಕಿಂತಲೂ ಬ್ರಾಹ್ಮಣ ದ್ವೇಷದಿಂದಲೇ ನಡೆದಿರುವ ಕೃತ್ಯ ಎನ್ನುವುದು ಸುಸ್ಪಷ್ಟ. ಪೂರ್ವಗ್ರಹ ಪೀಡಿತರಾದ ಕೆಲವು ಸಿಬ್ಬಂದಿಗಳು ಜನಿವಾರವನ್ನು ಕಿತ್ತಿರುವುದು ನಿಚ್ಚಳವಾಗಿದೆ. ದುರಂತವೆಂದರೆ ಕೆಲವು ಕುತ್ಸಿತ ಮತಿಗಳು ಇಂತಹ ಕುಕೃತ್ಯವನ್ನೂ ಸಮರ್ಥಿಸುತ್ತಿದ್ದಾರೆ. ಬೇರೆ ಜಾತಿ ಧರ್ಮಗಳವರ ಧಾರ್ಮಿಕ ಸಂಕೇತಗಳನ್ನು ತೆಗೆಸುವ ಧೈರ್ಯ ತೋರಿಯಾರೆ? ಸರಕಾರವು ಇಂತಹ ನಡೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು.

-ಮಹದೇವಪ್ಪ, ಮೈಸೂರು

ವರಿಷ್ಠರ ತೀರ್ಮಾನಕ್ಕೆ ಬದ್ಧ: ಸಚಿವ

• **ಬೆಂಗಳೂರು:** ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ, ಪಕ್ಷದ ವರಿಷ್ಠರು ವಿಚಾರ ಮಾಡಿ ನಿರ್ಧಾರ ಮಾಡಲಿದ್ದು, ಅವರ ತೀರ್ಮಾನಕ್ಕೆ ನಾವು ತಲೆಬಾಗುತ್ತೇವೆ. ಬಹಿರಂಗವಾಗಿ ನಾನು ಏನು ಹೇಳಲ್ಲ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.



ನಗರದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ನಾಯಕತ್ವ ವಿಚಾರ ಪ್ರತಿದಿನ ಚರ್ಚೆಯಾಗುತ್ತಿದೆ. ಡೇಟ್ ಕೊಡುವಷ್ಟು ದೊಡ್ಡವರು ನಾನಲ್ಲ, ಡೇಟ್ ಕೊಟ್ಟ ಶಾಸಕರ ಬಗ್ಗೆ ಹೈಕಮಾಂಡ್ ಗಮನಿಸುತ್ತೆ. ಜಾರಕಿಹೊಳಿ ಸೇರಿ ಎಲ್ಲರಿಗೂ ಹೈಕಮಾಂಡ್ ಭೇಟಿ ಮಾಡಿ ಚರ್ಚೆ ಮಾಡಲು ಅಧಿಕಾರ ಇದೆ. ನಾನು ವಿಜಯಪುರ ಹೋಗುತ್ತಿದ್ದೇನೆ. ಖರ್ಗೆ ಅವರು ರಾಜ್ಯಕ್ಕೆ ಬಂದಾಗ ಭೇಟಿಯಾಗುತ್ತೇನೆ ಎಂದರು. ದಲಿತ ಸಿಎಂ ಕೂಗಿಗೆ ಹೈಕಮಾಂಡ್ ಉತ್ತರ ನೀಡುತ್ತೆ, ಲಿಂಗಾಯತ ಸಮುದಾಯ ಕೂಡಾ ಬೇಡಿಕೆ ಇಡಬಹುದು ಆದರೆ ಹೈಕಮಾಂಡ್ಎಲ್ಲ ತೀರ್ಮಾನ ಮಾಡುತ್ತೆ. ವೀರೇಂದ್ರ ಪಾಟೀಲ್ ಬಳಿಕ ಈ ಬಾರಿ ಲಿಂಗಾಯತ ಸಮುದಾಯ ಈ ಬಾರಿ ಕಾಂಗ್ರೆಸ್ ಪರವಾಗಿ ನಿಂತಿದೆ 35 ಶಾಸಕರು ಗೆದ್ದಿದ್ದೇವೆ ಎಂದರು. ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷ ಬೇಡಿಕೆ ಇಟ್ಟಿದ್ದಾರೆ. ಅವರಿಗೆ ಆ ಸಾಮರ್ಥ್ಯ ಇದೆ, ಉತ್ತಮ ಸಂಘಟನೆಗಾರರು. ಸಿದ್ದರಾಮಯ್ಯ ನಾಯಕತ್ವ, ಡಿಕೆಶಿ ಸಂಘಟನೆ ಇದೆ. ನಾಯಕರು ಕಾರ್ಯಕರ್ತರು ಶ್ರಮಪಟ್ಟಿದ್ದಾರೆ. ಬೂತ್ ಏಜೆಂಟ್ ಕೂಡಾ ಶ್ರಮಪಟ್ಟಿದ್ದಾರೆ ಎಂದು ಹೇಳಿದರು.

ಈ ಬಾರಿ ಗಂಭೀರ ಬರ ಬರುವ ಸಾಧ್ಯತೆ ಇದೆ. ಇದಕ್ಕೆ ನಾವು ಸಿದ್ದರಾಗಬೇಕು. ಜುಲೈ ಅಂತ್ಯದವರೆಗೆ ಡ್ಯಾಮ್‌ನಲ್ಲಿ ನೀರು ಇಡಬೇಕಾಗುತ್ತೆ. ಕುಡಿಯುವ ನೀರಿಗೆ ಆದ್ಯತೆ ನೀಡಬೇಕಿದೆ. ಈ ಬಾರಿ ಹೆಚ್ಚು ನೀರು ಉಳಿಸಬೇಕಿದೆ. ನಾನು ಕೂಡ ವಿಜಯಪುರ ಜಿಲ್ಲೆಯಲ್ಲಿ ಸಭೆ ಮಾಡಿದ್ದೇನೆ ಎಂದರು.

ರಾಮ ಬಾಣ



ಶಾಸಕ ಸ್ಥಾನ ಅನರ್ಹತೆಯಲ್ಲಿ ತಾರತಮ್ಯವಿಲ್ಲ: ಖಾದರ್

• **ಬೆಂಗಳೂರು:** ಕೊಲೆ ಆರೋಪದ ಮೇಲೆ ಶಿಕ್ಷೆಗೆ ಒಳಪಟ್ಟಿರುವ ವಿನಯ್ ಕುಲಕರ್ಣಿ ಶಾಸಕ ಅನರ್ಹತೆಯಲ್ಲಿ ಯಾವುದೇ ತಾರತಮ್ಯವಿಲ್ಲ, ನಿಯಮದ ಪ್ರಕಾರ ಯಾರೇ ಶಿಕ್ಷೆಗೆ ಒಳಪಟ್ಟಾಗ ಅನರ್ಹರಾಗುತ್ತಾರೆ. ಅದು ತನ್ನಿಂದತಾನೇ ರದ್ದಾಗಲಿದೆ. ಇಲ್ಲಿ ಬಿಜೆಪಿ, ಕಾಂಗ್ರೆಸ್ ತಾರತಮ್ಯ ಮಾಡಿಲ್ಲ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಯಾವೊಬ್ಬ ಸದಸ್ಯನ ಸದಸ್ಯತ್ವ ರದ್ದು ಮಾಡುವ ಅಧಿಕಾರ ಸ್ಪೀಕರ್‌ಗೆ ಇಲ್ಲ, ವಿಧಾನಸಭೆ ವ್ಯಾಪ್ತಿಯಲ್ಲಿ ಏನಾದ್ರೂ ಆದಾಗ ಮಾತ್ರ ಅದು ಅಧಿಕಾರ ಇದೆ. ಕಾರ್ಯದರ್ಶಿಗೆ ಇದನ್ನ ನೋಡಲು ಹೇಳಿದ್ದೇನೆ. ನಾವು ಮಾಹಿತಿ ಕೊಡಲು ಮಾತ್ರ ಇರೋದು, ಕಾನೂನು ವ್ಯಾಪ್ತಿಯಲ್ಲಿ ಆದೇಶ ಮಾಡಿದಾಗ ತನ್ನಿಂದ ತಾನೇ ರದ್ದು ಆಗಿದೆ ಎಂದರು.

ವಿಜಯಪುರ: ಬಿಸಿಲಿಗೆ ಬಾಲಕ ಸಾವು

• **ವಿಜಯಪುರ:** ರಣಭಯಂಕರ ಬಿಸಿಲಿಗೆ ಓರ್ವ ಬಾಲಕ ಸಾವಿಗೀಡಾದ ಘಟನೆ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಇಂಗಳಗಿ ಗ್ರಾಮದಲ್ಲಿ ನಡೆದಿದೆ ಎನ್ನಲಾಗಿದೆ. ಇಲ್ಲಿನ ಶ್ರೀಶೈಲ ಬಿರಾದಾರ (15) ಮೃತ ಪಟ್ಟ ಬಾಲಕ. ಶ್ರೀಶೈಲ ಬಿರಾದಾರ ಬೇಸಿಗೆ ರಜೆ ಹಿನ್ನೆಲೆ ಬಿಸಿಲಿನಲ್ಲಿ ಆಟ ಆಡಿ ಅನಾರೋಗ್ಯಕ್ಕೆ ತುತ್ತಾಗಿದ್ದು, ಚಿಕಿತ್ಸೆ ಫಲಿಸದೆ ಅಸುನೀಗಿದ್ದಾನೆ ಎಂದು ಹೇಳಲಾಗುತ್ತಿದೆ. 8 ನೇ ತರಗತಿ ಪಾಸಾಗಿದ್ದ ಶ್ರೀಶೈಲ, ತಾಲೂಕು ಮಟ್ಟದ ಕಬಡ್ಡಿ, ಖೋಖೋ ಚಾಂಪಿಯನ್ ಆಗಿದ್ದ. ಮುದ್ದೇಬಿಹಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಬಾಲಕ ಶ್ರೀಶೈಲ ಬಿರಾದಾರ ಬಿಸಿಲಿನ ತಾಪದಿಂದ ಸಾವಿಗೀಡಾಗಿಲ್ಲ, ಆತನಿಗೆ ಕ್ಯಾನ್ಸರ್ ಇತ್ತು, ಅದು ಗುಣವಾಗದೇ ಮೃತಪಟ್ಟಿದ್ದಾನೆ ಎಂದು ಡಿಎಚ್ಒ ಸಂಪತ್ತಕುಮಾರ ಗುಣಾರಿ ತಿಳಿಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಜಾತಿಗಳೆಲ್ಲ ನಮ್ಮ ನಮ್ಮ ಮನೆಯ ಒಳಗಡೆ ಇರಲಿ, ಹೊರಗಡೆ ಬಂದಾಗ ನಾವೆಲ್ಲ ಹಿಂದುಗಳೆಂಬ ಒಗ್ಗಟ್ಟು ಬರಲಿ
-ಚಕ್ರವರ್ತಿ ಸೂಲಿಬೆಲೆ
-ಹಿಂದೂ ಎಂಬ ಸುಂದರ ಉದ್ಯಾನವನ ಉಳಿದರೆ ಮಾತ್ರ ಜಾತಿಗಳೆಂಬ ವಿವಿಧ ಪುಷ್ಪಗಳು ಆರಳಿ ಪರಿಮಳ ಬೀರಲು ಸಾಧ್ಯ!

ದಿನ ಭವಿಷ್ಯ

ಮೇಷ ನಿರೀಕ್ಷಿತ ಕೆಲಸ ಪೂರ್ತಿಯಾಗದು. ಕೆಲಸದಲ್ಲಿ ಸಣ್ಣ ಲೋಪ ಉಂಟಾದೀತು. ಮನೆಯಲ್ಲಿ ಸ್ವಲ್ಪ ಕಿರಿಕಿರಿ ಅನುಭವಿಸುವಿರಿ.

ವೃಷಭ ಕೌಟುಂಬಿಕ ಹೊಣೆ ಹೆಚ್ಚಳ. ಹತ್ತಿರದವರೊಬ್ಬರ ವರ್ತನೆ ನಿಮಗೆ ಅಸಹನೆ ತರಲಿದೆ. ಸಂಘರ್ಷ ಬೇಡ, ಹೊಂದಾಣಿಕೆಯ ವರ್ತನೆ ಒಳ್ಳೆಯದು.

ಮಿಥುನ ಅಭದ್ರತೆಯ ಭಾವ ಕಾಡಬಹುದು. ಕೆಲವು ಬೆಳವಣಿಗೆ ಮನಸ್ಸಿಗೆ ಅಹಿತಕಾರಿಯಾದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿಯಾಗುವಿರಿ.

ಕಟಕ ಸ್ವ-ಪರಾಮರ್ಶೆ ನಡೆಸಿ. ನಿಮ್ಮ ಕೆಲವಾರು ಪ್ರಶ್ನೆಗಳಿಗೆ ಉತ್ತರ ಸಿಗಬಹುದು. ನಿಮ್ಮ ಲೋಪ ಮುಚ್ಚಿ ಹಾಕಲು ಪ್ರಯತ್ನಿಸಬೇಡಿ.

ಸಿಂಹ ಆತ್ಮೀಯರ ಸಂಗಡ ಕಾಲ ಕಳೆಯುತ್ತಾ ಇನ್ನಿತರ ಉದ್ವಿಗ್ನತೆ ಮರೆಯುವಿರಿ. ಆದರೆ ಕೆಲಸ ಬಾಕಿ ಉಳಿಸದಿರಿ. ಅದನ್ನು ಪೂರೈಸಿ. ಬಂಧು ಭೇಟಿ.

ಕನ್ಯಾ ಪ್ರತಿಕೂಲ ಪರಿಸ್ಥಿತಿ ಉದ್ಭವಿಸಿದರೂ ಪಾಸಿಟಿವ್ ಚಿಂತನೆ ಬಿಡಬೇಡಿ. ವಿಳಂಬವಾದರೂ ಉದ್ದೇಶ ಸಾಧಿತವಾಗಲಿದೆ. ಆರ್ಥಿಕ ಪರಿಸ್ಥಿತಿ ತೃಪ್ತಿಕರ.

ತುಲಾ ಬಾಕಿ ಇದ್ದ ಕೆಲಸ ಮುಗಿಸಲು ಗಮನ ಕೊಡಿ. ವ್ಯವಹಾರದಲ್ಲಿ ಸಣ್ಣ ಅಡ್ಡಿ. ಆಪ್ತರ ಜತೆ ಮುನಿಸು ಸಂಭವ. ತಾಳ್ಮೆಯಿಂದ ವ್ಯವಹರಿಸಿ.

ವೃಶ್ಚಿಕ ವೃತ್ತಿಯ ಒತ್ತಡ ಹೆಚ್ಚು. ಹಾಗೆಂದು ಕೌಟುಂಬಿಕ ವ್ಯವಹಾರ ಕಡೆಗಣಿಸಬೇಡಿ. ಕುಟುಂಬಸ್ಥರ ಬೇಡಿಕೆಗೆ ಕಿವಿಗೊಡಿ. ಧನವ್ಯಯ.

ಧನು ಆರಂಭದಲ್ಲಿ ಹಿನ್ನಡೆಯಾಗಿ ಕಂಡ ವಿಷಯ ಬಳಿಕ ನಿಮ್ಮ ಪಾಲಿಗೆ ಒಳಿತು ತಂದೀತು. ಅನಿರೀಕ್ಷಿತ ಧನಲಾಭ. ಹಳೆಯ ಸ್ನೇಹಿತರ ಭೇಟಿ.

ಮಕರ ಹೆಚ್ಚು ಹೊಣೆ- ನಿಮ್ಮ ಮನೆಯಲ್ಲೂ, ವೃತ್ತಿಯಲ್ಲೂ. ಹಿಡಿದ ಕೆಲಸ ಅಚ್ಚುಕಟ್ಟಾಗಿ ಪೂರೈಸಿ. ಟೀಕೆಗೆ ಆಸ್ಪದ ಕೊಡಬೇಡಿ. ವಾಗ್ವಾದ ನಡೆಸದಿರಿ.

ಕುಂಭ ಹರ್ಷದ ದಿನ. ಪ್ರೀತಿಪಾತ್ರರ ಜತೆ ಆತ್ಮೀಯ ಕಾಲಕ್ಷೇಪ. ಹಳೆ ನಿರ್ಧಾರವೊಂದು ಈಗ ಕೆಟ್ಟ ಫಲ ನೀಡಬಹುದು. ಎಚ್ಚರದ ನಡೆಯಿರಲಿ.

ಮೀನ ಎಲ್ಲ ಸುಸೂತ್ರವಾಗಿ ಸಾಗುವುದು. ಆದರೆ ಸಂಗಾತಿ ಜತೆ ಭಿನ್ನಮತ. ಇತರರ ಟೀಕಿಸದಿರಿ. ನಿಮ್ಮ ನಡೆನುಡಿ ಪರಾಮರ್ಶಿಸಿ. ನಿಮ್ಮಲ್ಲೇ ತಪ್ಪಿರಬಹುದು.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 8,3,9,4

ದಕ್ಷಿಣ ಮಧ್ಯ ಕ್ಷೇತ್ರದ ಬೌದ್ಧಿಕ ಪ್ರಮುಖ್ ಪ್ರೊ.ಬಿ.ವಿ.ಶ್ರೀಧರಸ್ವಾಮಿ

ಗೌರವಿಸುವ ಪದ್ಧತಿ ನಮ್ಮದು

• **ದೇವನಹಳ್ಳಿ:** ಜಗತ್ತಿಗೆ ವಿಜ್ಞಾನ ಸೇರಿದಂತೆ ಅನೇಕ ಕೊಡುಗೆಯನ್ನು ನೀಡಿದ ಶ್ರೇಷ್ಠ ಪರಂಪರೆ ನಮ್ಮದು. ಇದರ ಜತೆಗೆ ಬದುಕಿನ ಸಾರ್ಥಕತೆ ಎಲ್ಲಿದೆ ಎಂದು ದಕ್ಷಿಣ ಮಧ್ಯ ಕ್ಷೇತ್ರದ ಬೌದ್ಧಿಕ ಪ್ರಮುಖ್ ಪ್ರೊ.ಬಿ.ವಿ.ಶ್ರೀಧರಸ್ವಾಮಿ ಹೇಳಿದರು.

ದೇವನಹಳ್ಳಿಯ ಅನಂತ ವಿದ್ಯಾನಿಕೇತನದಲ್ಲಿ ಸೋಮವಾರ ಸಂಜೆ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ಸಂಘ ಶಿಕ್ಷಾ ವರ್ಗದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಸಂಘದ ಒಂದು ಚಟುವಟಿಕೆಯಲ್ಲಿ ಸಂಘ ಶಿಕ್ಷಾ ವರ್ಗ. 15ದಿನಗಳ ಕಾಲ ನಡೆದ ಈ ಸಂಘ ಶಿಕ್ಷಾ ವರ್ಗದಲ್ಲಿ ತಪಸ್ಸಿನಂತೆ ಸ್ವಯಂಸೇವಕರು ಕಲಿತಿದ್ದಾರೆಂದರು.

ಸಮಾಜ ಮತ್ತು ದೇಶದ ಕುರಿತು ಹಾಗೂ ಸಂಘಟನೆಯ ಕುಶಲತೆಯನ್ನು ಕಲಿತುಕೊಳ್ಳುವರು. ಅದರ ಜತೆಗೆ ರಾಷ್ಟ್ರಭಕ್ತಿಯ ಸಂಸ್ಕಾರವನ್ನು ಜಾಗೃತ ಗೊಳಿಸಿಕೊಳ್ಳುತ್ತಾರೆ. ಸಮಾಜವನ್ನು ಮುನ್ನಡೆಸುವ ವ್ಯಕ್ತಿಗಳ ನಿರ್ಮಾಣ ಕೇಂದ್ರವಾಗಿ ಶಾಖೆಗಳು ನಡೆಯುತ್ತಿವೆಂದು ಹೇಳಿದರು. ಶಾಖೆಯ ಪ್ರಾರ್ಥನೆಯಲ್ಲಿ ತಾಯಿ ಭಾರತೀಯ ಕೆಲಸಕ್ಕಾಗಿ ತನ್ನ ಜೀವನವನ್ನು ಮುಡಿಪಿಡುವಂತಹ ಕಾರ್ಯಕ್ಕೆ ಸಿದ್ದಗೊಳ್ಳುತ್ತಾರೆ. ಸಂಘಟನೆಗಿಂತ ಉನ್ನತವಾದದ್ದು ಎಂಬ ಭಾವ ಸಂಘಟನೆಯ ಸ್ವಯಂಸೇವಕರಲ್ಲಿ ಮೂಡುತ್ತದೆ. ಈ ಭಾವನೆಯನ್ನು ಸಂತರು ಮಹಂತರು ಸಹಸ್ರಾರು ವರ್ಷಗಳಿಂದ ದೇಶದ ಜನರಲ್ಲಿ ಬೆಳೆಸಿದ್ದಾರೆ. ಅದನ್ನೇ ಸಂಘ ಮುಂದುವರೆಸಿದೆ ಎಂದು ಅಭಿಪ್ರಾಯಪಟ್ಟರು.

ಅನೇಕರು ಜಗತ್ತನ್ನು ಶಕ್ತಿಯ ಬಲದಿಂದ ಜಗತ್ತನ್ನು ಗೆಲ್ಲುವ ಪ್ರಯತ್ನ ಮಾಡಿದರು. ಆದರೆ ಭಾರತ ಇಡೀ ವಿಶ್ವವೇ ಒಂದು ಕುಟುಂಬ ಎಂಬ ವಿಶಾಲ ಭಾವದ ಕಾರಣದಿಂದ ಜಗತ್ತಿನ ಮನಸ್ಸನ್ನು ಗೆಲ್ಲುವ ಕಾರ್ಯ ಮಾಡಿದ್ದೇವೆ. ಜಗತ್ತು ಭಾರತವನ್ನು ಭಕ್ತಿಯಿಂದ ಗೌರವದಿಂದ ಕಾಣಬಹುದಾಗಿದೆ. ಆದರೆ ನಾವು ಜಾತಿಯನ್ನು ಮೀರಿ ಹಿಂದುಗಳು, ಭಾರತೀಯರು ಎಂದು ಹೇಳಿಕೊಳ್ಳುವ ಭಾವ ನಮ್ಮಲ್ಲಿ ಮೂಡಬೇಕು. ನಮ್ಮ ದೇಶದ ಪರಂಪರೆಯ ಮೌಲ್ಯಗಳನ್ನು ಪ್ರಕಟಿಸುವ ಸಮಾಜ ನಮ್ಮದಾಗಬೇಕು. ಹೇಗೆ ಶರೀರದ ಎಲ್ಲಾ ಅಂಗಗಳು ಸಬಲವಾಗಬೇಕೋ, ಜೊತೆಗೆ ಸಮಾಜದ ಎಲ್ಲಾ ವರ್ಗಗಳು ಸಶಕ್ತವಾಗಬೇಕು. ಅವರೆಲ್ಲರಲ್ಲೂ ರಾಷ್ಟ್ರಭಕ್ತಿಯ ಜಾಗರಣವಾಗಬೇಕಿದೆ ಎಂದರು.

ಜಾಗತಿಕ ಸ್ಥಿತಿಯಲ್ಲಿ ಆತ್ಮನಿರ್ಭರವಾಗಬೇಕಿದೆ. ನಮ್ಮ ದೇಶಕ್ಕೆ ಬೇಕಾಗುವ ಎಲ್ಲವನ್ನೂ ನಾವೇ ನಿರ್ಮಿಸಿಕೊಳ್ಳಬೇಕು. ನಮ್ಮಲ್ಲಿ ನಮ್ಮ ಸಹಿ ಇರಬೇಕು, ಮನೆಯಲ್ಲಿ ಸ್ವಭಾಷೆಯನ್ನು ಬಳಸಬೇಕು, ಹುಟ್ಟುಹಬ್ಬದ ಆಚರಣೆ ನಮ್ಮತನದಿಂದ ಕೂಡಿರಬೇಕು. ಪರಿಸರ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆ ನಿಷೇಧ, ಇತರರಿಗೆ ತೊಂದರೆಯಾಗದಂತೆ ನಮ್ಮ ಜೀವನಶೈಲಿ ಇರಬೇಕು. ನಮ್ಮ ಮನೆಯ ಸಾಮಾಜಿಕ ಸಾಮರಸ್ಯವನ್ನು ಸಾರುವ, ನಮ್ಮ ಪರಂಪರೆಯನ್ನು ಮಕ್ಕಳಿಗೆ ತಿಳಿಸುವ ಪರಿವರ್ತನಾ ಕೇಂದ್ರಗಳಾಗಬೇಕು ಎಂದರು.

15 ದಿನಗಳ ಕಾಲ ನಡೆದ ವರ್ಗಗಳ ಬಗ್ಗೆ ವರ್ಗದ ವರ್ಗಾಧಿಕಾರಿ ಮಿಲಿಂದ ಗೋಖಲೆ ಅವರು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಹಾಗೂ ಪ್ರಾಂತ ಸಂಘಚಾಲಕ ಜಿ.ಎಸ್.ಉಮಾಪತಿ ಉಪಸ್ಥಿತರಿದ್ದರು. ವರ್ಗದ 350ಕ್ಕೂ ಹೆಚ್ಚು ಶಿಕ್ಷಾರ್ಥಿಗಳಿಂದ ಶಾರೀರಿಕ ಪ್ರದರ್ಶನ ಸೇರಿದಂತೆ ಸಾಹಿತ್ಯ ಮಾರಾಟ ವ್ಯವಸ್ಥೆ ಮಾಡಲಾಯಿತು.



ಭಾರತದಲ್ಲಿ ಬದಲಾವಣೆ ಪರ್ವ

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಕೈವಾರದ ಧರ್ಮಾಧಿಕಾರಿ ಎಂ.ಆರ್. ಜಯರಾಂ ಮಾತನಾಡಿ, ಪ್ರಪಂಚ ಬದಲಾಗುತ್ತಿದೆ. ಭಾರತವೂ ಬದಲಾವಣೆಯ ಪರ್ವವನ್ನು ಕಾಣುತ್ತಿದೆ. ಪ್ರಪಂಚದಲ್ಲಿ ಧರ್ಮಸ್ಥಾಪನೆಯಾಗಬೇಕಾದರೆ ಭಾರತ ಮಾರ್ಗದರ್ಶನ ಮಾಡಬೇಕು. ನಾವು ಯಾರು, ನಮ್ಮ ಕರ್ತವ್ಯ ಏನು ಎನ್ನುವುದನ್ನು ನಾವು ಅರಿಯಬೇಕು. ನಾವು ನಮ್ಮ ದೇಶದ ಬಗ್ಗೆ ಚಿಂತನೆ ಮಾಡಬೇಕಾದರೆ, ನಮ್ಮ ದೇಶದ ಕೊರತೆಗಳನ್ನು ಮರೆತು ಸಮಭಾವ ಮತ್ತು ಸಾಮರಸ್ಯದ ಮೂಲಕ ನೋಡಬೇಕು. ಆಗ ಮುಂದಿನ ಯಾವುದೇ ಸವಾಲುಗಳನ್ನೂ ತಡೆಯಲು ನಾವು ಸಿದ್ಧರಾಗಿರುತ್ತೇವೆ ಎಂದರು.

ಮೇ 9ಕ್ಕೆ ಬಿಎಸ್‌ವೈ ಅಭಿಮಾನೋತ್ಸವ

ಬಡವರ ಕಷ್ಟಗಳಿಗೆ ಮಿಡಿದ ಮುತ್ಸದ್ದಿ

• **ವಿಜಯನಗರ:** ರಾಜ್ಯದ ಗುಣಾತ್ಮಕ ಬದಲಾವಣೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಸಿದ ಮಹಾನ್ ನಾಯಕನಿಗೆ ಅಭಿನಂದನೆ ಸಲ್ಲಿಸಲು ಚಿತ್ರದುರ್ಗದಲ್ಲಿ ಮೇ 9ರಂದು ಏರ್ಪಡಿಸಿರುವ ಬಿಎಸ್‌ವೈ ಅಭಿಮಾನೋತ್ಸವಕ್ಕೆ ಪಕ್ಷದ ಕಾರ್ಯಕರ್ತರು ಹಾಗೂ ನಾಡಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅಭೂತಪೂರ್ವವಾಗಿ ಯಶಸ್ವಿಗೊಳಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದರು.

ಬಿಎಸ್‌ವೈ ಅಭಿಮಾನೋತ್ಸವದ ನಿಮಿತ್ತ ಹೊಸಪೇಟೆಯಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಬುಧವಾರ ಏರ್ಪಡಿಸಿದ್ದ ವಿಜಯನಗರ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳ ಪ್ರಮುಖರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರ 50 ವರ್ಷಗಳ ನಿಸ್ವಾರ್ಥತೆಯಿಂದ ಜನ ಸೇವೆಯ ಸಲ್ಲಿಸಿದ್ದಾರೆ. ರಾಜ್ಯದಲ್ಲಿ ಎಲ್ಲಿ ಬಡವರು ಕಣ್ಣೀರು ಹಾಕುತ್ತಿದ್ದಾರೋ ಅಲ್ಲಿ ಯಡಿಯೂರಪ್ಪನರು ಇರುತ್ತಿದ್ದರು. ರೈತರು ಎಲ್ಲ ಸಂಕಷ್ಟದಲ್ಲಿದ್ದರೂ ಅಲ್ಲಿ ಯಡಿಯೂರಪ್ಪನವರು ಇರುತ್ತಿದ್ದರು. ರಾಜ್ಯದಲ್ಲಿ ಹೋರಾಟ ಮತ್ತು ಪರಿಶ್ರಮಕ್ಕೆ ಯಡಿಯೂರಪ್ಪ ಹೊರತಾಗಿ ಮತ್ತೊಂದು ಹೆಸರಿಲ್ಲ, ಅವರು ಶಾಸಕನಾಗಿ, ವಿಪಕ್ಷ ನಾಯಕನಾಗಿ, ಸಚಿವರಾಗಿ ಹಾಗೂ ಮುಖ್ಯಮಂತ್ರಿ ಅಧಿಕಾರದಲ್ಲಿದ್ದಾಗ ನಾಡಿನ ಪ್ರತಿ ಜಿಲ್ಲೆಗೂ ಒಂದಿಲ್ಲೊಂದು ಕೊಡುಗೆಯನ್ನು ಅವರು ನೀಡಿದ್ದಾರೆ. ಅವರು ಸವೆಸಿದ ರಾಜಕೀಯ ಹಾದಿ, ಕೈಗೊಂಡ ಪ್ರಗತಿ ರಾಜ್ಯದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವಂತದ್ದು, ಅಂತಹ ಒಬ್ಬ ಪುಣ್ಯಾತ್ಮ ಹೋರಾಟಗಾರರ 50 ವರ್ಷಗಳ ರಾಜಕೀಯ ಪಯಣವನ್ನು ಅರ್ಥಪೂರ್ಣವಾಗಿ ಆಚರಿಸಿ, ಸಂಭ್ರಮಿಸಲು ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.



ಮಳೆಗೆ ವ್ಯಕ್ತಿ ಸಾವು

• **ಚಿಕ್ಕನಾಯಕನಹಳ್ಳಿ:** ತಾಲೂಕಿನ ಬಿರುಗಾಳಿ ಮಳೆಗೆ ಮರದ ಕೊಂಬೆ ಬಿದ್ದು ಓರ್ವ ವ್ಯಕ್ತಿ ಹಾಗೂ ಹಸು ಮೃತಪಟ್ಟಿರುವ ಘಟನೆ ವರದಿಯಾಗಿದೆ. ಪಟ್ಟಣವಾಸಿ ಖಾಸಗಿ ಬಸ್ ಮಾಲೀಕ ಪುಟ್ಟಣ್ಣ(68) ಮೃತ ದುರ್ದೈವಿ. ತಾಲೂಕಿನ ಹಾಲುಗೊಣ ಗ್ರಾಮದ ಸುನೀಲ್ ಎಂಬುವರ ತೋಟದಲ್ಲಿದ್ದ ಹಸುವಿನ ಮೇಲೆ ತೆಂಗಿನಮರಬಿದ್ದ ಪರಿಣಾಮ ಹಸು ಸ್ಥಳದಲ್ಲಿಯೇ ಮೃತಪಟ್ಟಿದೆ. ತಾಲ್ಲೂಕಿನ ವಮಲಗೊಂಡನಹಳ್ಳಿ, ಮದನಮಡು, ಚಿಕ್ಕರಾಂಪುರ ಮುಂತಾದಡೆ ವಿದ್ಯುತ್ ಕಂಬಗಳು ಜಖಂಗೊಂಡಿದ್ದರೆ, ಹಲವು ಗ್ರಾಮಗಳಲ್ಲಿ ಮನೆಗಳ ಛಾವಣಿ ಹಾರಿಹೋಗಿದೆ ಎಂದು ತಹಸೀಲ್ದಾರ್ ಮಮತಾ ತಿಳಿಸಿದ್ದಾರೆ.

ಸಿಡಿಲು ಬಡಿದು ಎರಡು ಹಸುಗಳ ಸಾವು

• **ದೊಡ್ಡಬಳ್ಳಾಪುರ:** ಮಂಗಳವಾರ ರಾತ್ರಿ ಸುರಿದ ಮಳೆಯಿಂದಾಗಿ ಸಿಡಿಲು ಬಡಿದ ಪರಿಣಾಮ ಎರಡು ಸೀಮೆ ಹಸುಗಳು ಮೃತಪಟ್ಟಿರುವ ಘಟನೆ ತಾಲೂಕಿನ ತೂಬಗೆರೆ ಹೋಬಳಿ ಕಾವಲಹಳ್ಳಿ ಅಂಜನೇಯ ಸ್ವಾಮಿ ದೇವಸ್ಥಾನ ಸಮೀಪ ನಡೆದಿದೆ. ಗಂಟಿಗಾನಹಳ್ಳಿ ಗ್ರಾಮದ ರತ್ನಮ್ಮ ಚಿಕ್ಕ ಹೊನ್ನಪ್ಪ ಅವರು ತಮ್ಮ ಹಸುಗಳನ್ನು ತೋಟದಲ್ಲಿರುವ ಮರದ ಕೆಳಗೆ ಕಟ್ಟಿದ್ದರು. ಮಳೆ ಸಂದರ್ಭದಲ್ಲಿ ಸಿಡಿಲು ಬಡಿದ ಪರಿಣಾಮವಾಗಿ ಸ್ಥಳದಲ್ಲೇ 2 ಹಸುಗಳು ಮೃತಪಟ್ಟಿವೆ. ಈ ಘಟನೆ ಸ್ಥಳೀಯ ರೈತರಿಗೆ ಆತಂಕ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಸಂಬಂಧಿತ ಇಲಾಖೆ ತಕ್ಷಣ ಸ್ಪಂದಿಸಿ, ಸಂತ್ರಸ್ತರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಕಾಶಿ ವಿಶ್ವನಾಥನಿಗೆ ಮೋದಿ ಪೂಜೆ

ಪುಟ ೩➔ ದೇಶದ ಪ್ರತಿ ಪ್ರಜೆಗೂ ನೆಮ್ಮದಿ, ಸಂಪನ್ನತೆ ಮತ್ತು ಆರೋಗ್ಯಪೂರ್ಣ ಬದುಕಿಗಾಗಿ ನಾನು ಭಗವಾನ್ ಬೋಲೆನಾಥನಲ್ಲಿ ಪ್ರಾರ್ಥಿಸಿದೆ. ತಾಯಿ ಅನ್ನಪೂರ್ಣೆ ಮತ್ತು ಗಂಗಾಮಾತೆಯ ದರುಶನದಿಂದ ನನಗೆ ಅನೂಹ್ಯ ಶಾಂತಿ ದೊರೆಯಿತು. ಅಮ್ಮನವರ ಅನುಗ್ರಹವು ಪ್ರತಿಯೊಬ್ಬರಲ್ಲೂ ಧನಾತ್ಮಕ ಶಕ್ತಿ ತುಂಬುವಂತಾಗಲಿ, ಮಗದೊಮ್ಮೆ ಕಾಶಿಯ ಎಲ್ಲಾ ಜನತೆಗೆ ನನ್ನ ನಮನಗಳು ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಬರೆದಿದ್ದಾರೆ. ಮೋದಿಯವರು ದೇವಾಲಯದಿಂದ ಹೊರಬರುತ್ತಲೇ ಅಪಾರ ಭಕ್ತಸ್ತೋಮದಿಂದ ಹರ ಹರ ಮಹಾದೇವ್, ಜೈ ಶ್ರೀರಾಮ್ ಘೋಷಣೆಗಳು ಮೊಳಗಿದವು. ಪ್ರಧಾನಿಯವರು ಎಲ್ಲರತ್ತ ಪ್ರೀತಿಯಿಂದ ಕೈಬೀಸಿದರು, ವಿನೀತರಾಗಿ ಎಲ್ಲರಿಗೂ ನಮಸ್ಕರಿಸಿದರು.

ಚಿಣ್ಣರೊಂದಿಗೆ ಬೆರೆತ ಪ್ರಧಾನಿ: ವಿಶ್ವನಾಥ ಕಾರಿಡಾರ್‌ನಲ್ಲಿ ಚಿಣ್ಣರ ಜತೆ ಪ್ರಧಾನಿ ಬೆರೆತರು, ಸಂವಾದ ನಡೆಸಿದರು. ವಾರಾಣಸಿಯ ಜನತೆ ಪ್ರಧಾನಿ ಮೋದಿ ಅವರನ್ನು ಕಾಣಲು, ಒಂದು ಕ್ಷಣ ಕಣ್ತುಂಬಿಕೊಳ್ಳಲು ತುದಿಗಾಲಲ್ಲಿದ್ದರು. ಪ್ರಧಾನಿ ರೋಡ್ ಶೋ ನಡೆದ ರಸ್ತೆಯುದ್ದಕ್ಕೂ ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು, ಸ್ಥಳೀಯ ಜನರು ಅಪಾರ ಸಂಖ್ಯೆಯಲ್ಲಿ ಪ್ರವಾಹದೋಪಾದಿಯಲ್ಲಿ ಸೇರಿದ್ದರೆಂದು ಬಿಜೆಪಿ ಮಾಧ್ಯಮ ಉಸ್ತುವಾರಿ ಅರವಿಂದ ಮಿಶ್ರಾ ಹೇಳಿದ್ದಾರೆ.

ಶಂಖ ಊದಿ ಗುಲಾಬಿ ದಳಗಳ ಸ್ವಾಗತ

ರೋಡ್ ಶೋ ಹಾದಿಯುದ್ದಕ್ಕೂ ಅಲ್ಲಲ್ಲಿ ಸ್ವಾಗತ ಕೇಂದ್ರಗಳನ್ನು ರಚಿಸಲಾಗಿತ್ತು. ಅಭಿಮಾನಿಗಳು, ಕಾರ್ಯಕರ್ತರು, ಸ್ಥಳೀಯ ಜನತೆ ಗುಲಾಬಿದಳ ವೃಷ್ಟಿ, ಡ್ರಮ್‌ವಾದನ ಮತ್ತು ಶಂಖನಾದಗಳಿಂದ ಪ್ರಧಾನಿ ಮೋದಿ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಸುಮಾರು 14ಕಿಮೀ ವ್ಯಾಪ್ತಿವರೆಗೆ ನಡೆದ ರೋಡ್ ಶೋ, ನಗರದಲ್ಲಿ ನಡೆದ ಪ್ರಥಮ ಬೃಹತ್ ರೋಡ್ ಶೋ ಎಂದು ಬಿಜೆಪಿ ನಾಯಕರು ಬಣ್ಣಿಸಿದ್ದಾರೆ. ತಮ್ಮ ಲೋಕಸಭಾ ಕ್ಷೇತ್ರ, ವಾರಾಣಸಿಗೆ ಭೇಟಿ ಮುಗಿಸಿದ ಬಳಿಕ ಉತ್ತರಪ್ರದೇಶದಲ್ಲಿ ಗಂಗಾ ಎಕ್ಸ್‌ಪ್ರೆಸ್‌ವೇಗೆ ಪ್ರಧಾನಿ ಮೋದಿ ಚಾಲನೆ ನೀಡಿದರು.

ಜಲ್ ಜೀವನ್‌ಗಿಲ್ಲ ಕೇಂದ್ರದ ಹಣ

ಪುಟ ೩➔ ದೇಶದಲ್ಲಿಯೇ ಎರಡನೇ ಅತ್ಯಂತ ಹೆಚ್ಚಿನ ಒಣಭೂಮಿ ಹೊಂದಿರುವ ರಾಜ್ಯವಾದ ಕರ್ನಾಟಕದಲ್ಲಿ ನೀರಿಗಾಗಿ ಪರದಾಟವಿದೆಯಲ್ಲದೆ ಇದರೊಂದಿಗೆ ರಾಜ್ಯದ ಹಲವು ಭಾಗಗಳಲ್ಲಿ ಆರ್ಸೆನಿಕ್ ಹಾಗೂ ಫ್ಲೋರೈಡ್ ಮಿಶ್ರಣದ ಸಮಸ್ಯೆಯಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಗ್ರಾಮೀಣ ಕುಟುಂಬಗಳಿಗೆ ಕುಡಿಯಲು ಯೋಗ್ಯವಾದ ನೀರನ್ನು ಒದಗಿಸುವ ನಿಟ್ಟಿನಲ್ಲಿ ಜಲಮೂಲಗಳ ಸುಧಾರಣೆ ಮತ್ತು ಬೃಹತ್ ನೀರಿನ ಸರಬರಾಜು ವ್ಯವಸ್ಥೆಗೆ ಆದ್ಯತೆ ನೀಡಿದ್ದೇವೆ ಎಂದರು.

1.51 ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ ನೀರಿನ ಗುಣಮಟ್ಟ ಪರೀಕ್ಷೆ ಮಾಡುವ ವಿಧಾನದ ಬಗ್ಗೆ ತರಬೇತಿ ನೀಡುವ ಮೂಲಕ ಸಮುದಾಯದ ಮಾಲೀಕತ್ವವನ್ನು ಸುಭದ್ರಪಡಿಸಲಾಗಿದೆ. 259 ಗ್ರಾಮಗಳಿಗೆ ಈಗಾಗಲೇ 24/7 ನೀರಿನ ಸರಬರಾಜು ಸಾಧಿಸಲಾಗಿದ್ದು, ಈ ಮಿಷನ್‌ಗಿರುವ ಪರಿವರ್ತನಾ ಸಾಮರ್ಥ್ಯವನ್ನು ಸಾಬೀತುಪಡಿಸಿದೆ ಎಂದು ಮುಖ್ಯಮಂತ್ರಿಗಳು ಉಲ್ಲೇಖಿಸಿದರು. ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನದಲ್ಲಿ, ಕರ್ನಾಟಕ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಗುಣಮಟ್ಟವನ್ನು ಕಾಯ್ದುಕೊಂಡಿದೆ. ಈ ಯೋಜನೆಯ ಪ್ರತಿ ಕಾಮಗಾರಿಗಳನ್ನು ಮೂರನೇ ಏಜೆನ್ಸಿ ಮೂಲಕ ಪರಿಶೀಲನೆ ನಡೆಸಲಾಗುತ್ತಿದ್ದು, ಪಾರದರ್ಶಕತೆಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದರು. ಕೇಂದ್ರ ಸಚಿವ ವಿ.ಸೋಮಣ್ಣ ಅವರು ದೆಹಲಿಯಿಂದ ಸಭೆಯಲ್ಲಿ ಪಾಲ್ಗೊಂಡರು. ಮುಖ್ಯಮಂತ್ರಿಗಳ ಜತೆಗೆ ಸಭೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ, ಅವರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಹಾಗೂ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಶೇ.86.93ರಷ್ಟು ಪ್ರಗತಿ

ನಾವು ಇದುವರೆಗೆ 101.31 ಲಕ್ಷ ಗ್ರಾಮೀಣ ಕುಟುಂಬಗಳ ಪೈಕಿ 88.06 ಲಕ್ಷ ಮನೆಗಳಿಗೆ ನಳಸಂಪರ್ಕ ಕಲ್ಪಿಸಿದ್ದು, ಶೇ.86.93 ರಷ್ಟು ಪ್ರಗತಿ ಸಾಧಿಸಿದ್ದೇವೆ. ಈಗಾಗಲೇ ಕೈಗೊಳ್ಳಲಾಗಿರುವ 66,344 ಕಾಮಗಾರಿಗಳ ಪೈಕಿ ಸುಮಾರು 48,789 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿವೆ. ಇದರಲ್ಲಿ ಗ್ರಾಮಗಳಲ್ಲಿ 28,809 ಕಾಮಗಾರಿಗಳು ಗ್ರಾಮಗಳಲ್ಲಿ ಹಾಗೂ 19,980 ಕಾಮಗಾರಿಗಳು ಶಾಲೆ, ಅಂಗನವಾಡಿಗಳಲ್ಲಿ ಕೈಗೊಳ್ಳಲಾಗಿದ್ದು, ಗ್ರಾಮೀಣ ಮಟ್ಟದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿದ್ದೇವೆ.

17,554 ಕೋಟಿ ರೂ. ಹೂಡಿಕೆ

ಕಳೆದ 2 ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ, ಜಲ್ ಜೀವನ್ ಯೋಜನೆಗೆ ಕರ್ನಾಟಕ 17,554.63 ಕೋಟಿ ರೂ. ಬಂಡವಾಳ ಹೂಡಿದೆ. ಇದರಲ್ಲಿ ಕೇಂದ್ರದ ಪಾಲಿನ ನಿರೀಕ್ಷೆಯಲ್ಲಿ ಹೂಡಲಾಗಿರುವ 8,880.71 ಕೋಟಿ ರೂ. ಸೇರಿದ್ದು, ಯೋಜನೆಗಳ ಪೂರ್ಣಗೊಳಿಸುವ ನಿಟ್ಟಿನಲ್ಲಿ ನಮ್ಮ ಬದ್ಧತೆಯನ್ನು ತೋರಿಸುತ್ತದೆ. ಯೋಜನೆ ಅನುಷ್ಠಾನದಲ್ಲಿ ರಾಜ್ಯ ಯಾವುದೇ ರಾಜಿ ಮಾಡದೆ, ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದ್ದರೂ, ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವುದು ದುರದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು.

ಮೇ 20ರಿಂದ ಮುಷ್ಕರ

ಪುಟ ೩➔ ಸಚಿವರೊಂದಿಗೆ ನಡೆದ ಸಭೆ ಬಳಿಕ ಸಾರಿಗೆ ನೌಕರರು ಸಭೆ ನಡೆಸಿ ಮುಷ್ಕರ ನಡೆಸಲು ತೀರ್ಮಾನಿಸಿದ್ದಾರೆ.

ನೌಕರರ ಬೇಡಿಕೆ: ಬಾಟಾ ಮತ್ತಿತರ ಭತ್ಯೆಗಳನ್ನು ಹೆಚ್ಚಿಸಬೇಕು, 12 ತಿಂಗಳ ಉಳಿದಿರುವ ಬಾಕಿ ಹಣವನ್ನು ಸೇವೆಯಲ್ಲಿರುವ ಹಾಗೂ ನಿವೃತ್ತ ನೌಕರರಿಗೆ ಪಾವತಿಸಬೇಕು. 26 ತಿಂಗಳ ಬಾಕಿ ಹಣ 1272 ಕೋಟಿ ರೂ.ಒಂದೇ ಕಂತಿನಲ್ಲಿ ಪಾವತಿಸಬೇಕು.

₹450 ಕೋಟಿ ಬಿಡುಗಡೆ

ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ 2021 ಜ.1ರಿಂದ 2023 ಫೆ.28ರವರೆಗಿನ 26 ತಿಂಗಳ ವೇತನ ಪರಿಷ್ಕರಣೆ ಬಾಕಿ ಹಣದಲ್ಲಿ ಮೊದಲ ಕಂತಾಗಿ 450 ಕೋಟಿ ರೂ. ಬಿಡುಗಡೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಇದರಲ್ಲಿ ಕೆಎಸ್‌ಆರ್‌ಟಿಸಿ 143 ಕೋಟಿ ರೂ., ಬಿಎಂಟಿಸಿ 137 ಕೋಟಿ ರೂ., ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 87 ಕೋಟಿ ರೂ. ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 81 ಕೋಟಿ ರೂ. ಸೇರಿದಂತೆ ಒಟ್ಟು 140 ಕೋಟಿ ರೂ. ನಾಲ್ಕು ಸಂಸ್ಥೆಯ ಅಧಿಕಾರಿ/ನೌಕರರಿಗೆ ಈ ಅನುದಾನ ವಿತರಣೆಯಾಗಲಿದೆ.

ಆಸ್ಪತ್ರೆ ಕಾಂಪೌಂಡ್ ಕುಸಿದು ಏಳು ಸಾವು

ಪುಟ ೩➔ ಘಟನೆ ನಡೆದ ಕೆಲ ಹೊತ್ತಿನಲ್ಲಿಯೇ ಸ್ಥಳಕ್ಕೆ ಭೇಟಿ ನೀಡಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು, ಘಟನೆ ಸಂಪೂರ್ಣ ಮಾಹಿತಿ ಪಡೆದುಕೊಂಡರಲ್ಲದೆ, ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಘಟನಾ ಸ್ಥಳಕ್ಕೆ ಜಿಬಿಎ ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಕರೆಸಿ ತೀವ್ರ ತರಾಟೆಗೆ ತೆಗೆದುಕೊಂಡ ಅವರು, ಹಳೆಯ ಗೋಡೆಗಳನ್ನು ಗುರುತಿಸಿ ಕ್ರಮ ಕೈಗೊಳ್ಳಲು ನಿಮಗೇನು ತೊಂದರೆ? ನಿಮ್ಮ ನಡುವೆ ಸಮನ್ವಯದ ಕೊರತೆ ಎದ್ದು ಕಾಣುತ್ತಿದೆ.

5 ಲಕ್ಷ ರೂ. ಪರಿಹಾರ

ಕಾಂಪೌಂಡ್ ಕುಸಿತದಿಂದ ಸಾವನ್ನಪ್ಪಿದ ಏಳು ಮಂದಿಯ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ಮುಖ್ಯಮಂತ್ರಿಗಳು ಸ್ಥಳದಲ್ಲೇ ಘೋಷಿಸಿದ್ದಾರೆ. ಗೋಡೆ ಕುಸಿದು ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಬಲಿಯಾಗಿದ್ದಾರೆ. ಈ ದುರಂತ ಕುರಿತು ತಕ್ಷಣವೇ ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ. ಬೌರಿಂಗ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಅವರಿಗೆ ಅತ್ಯುತ್ತಮ ಮತ್ತು ಸಂಪೂರ್ಣ ಉಚಿತ ಚಿಕಿತ್ಸೆ ನೀಡುವಂತೆ ಆಸ್ಪತ್ರೆಯ ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ.

ಆಸ್ಪತ್ರೆ ಆವರಣದಲ್ಲಿ ಆಕ್ರಂದನ

ಏಳು ಗಾಯಾಳುಗಳಿಗೆ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅತ್ತ ಶವಾಗಾರದ ಮುಂದೆ ಜಮಾಯಿಸಿರುವ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ನಮ್ಮ ಕುಟುಂಬಕ್ಕೆ ಆಧಾರವಾಗಿದ್ದವರನ್ನು ಕಳೆದುಕೊಂಡೆವು. ಇನ್ನುಮುಂದೆ ನಮಗ್ಯಾರು ದಿಕ್ಕು ಎಂದು ಸಂಬಂಧಿಕರು ಕಣ್ಣೀರಿಡುತ್ತಿದ್ದರು.

ಸ್ಥಳೀಯರ ಕಣ್ಣೀರು

ಬೌರಿಂಗ್ ಆಸ್ಪತ್ರೆಯ ಈ ಕಾಂಪೌಂಡ್ ಗೋಡೆ ಹಳೆಯದಾಗಿತ್ತು ಮತ್ತು ದುರ್ಬಲಗೊಂಡಿತ್ತು ಎಂದು ಸ್ಥಳೀಯರು ಆರೋಪಿಸಿದ್ದಾರೆ. ಸರಿಯಾದ ನಿರ್ವಹಣೆ ಇಲ್ಲದೆ ಮತ್ತು ಮಳೆಯ ಒತ್ತಡದಿಂದಾಗಿ ಈ ಗೋಡೆ ಕುಸಿದಿದೆ ಎನ್ನಲಾಗಿದೆ. ಕಣ್ಣೆದುರೇ ಆಟವಾಡುತ್ತಿದ್ದ ಮಕ್ಕಳು ಮತ್ತು ವ್ಯಾಪಾರ ಮಾಡುತ್ತಿದ್ದವರು ಜೀವ ಕಳೆದುಕೊಂಡಿದ್ದನ್ನು ಕಂಡು ಸ್ಥಳೀಯರು ಕಣ್ಣೀರಿಟ್ಟರು.

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ

ಘಟನಾ ಸ್ಥಳಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಜಮೀರ್ ಅಹಮ್ಮದ್ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಕೂಡಲೇ ಇಂತಹ ಶಿಥಿಲ ಕಟ್ಟಡಗಳ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ. ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿ ಘಟನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

> ಮಳೆಗಾಲದ ಸಂದರ್ಭದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ನಗರದಾದ್ಯಂತ ಇರುವ ದುರ್ಬಲ, ಹಳೆಯ ಗೋಡೆಗಳನ್ನು ಗುರುತಿಸಿ, ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಬಿಎ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

> ರಾಜ್ಯ ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು, ಮಳೆಗೆ ಇನ್ನೊಂದು ಅವಘಡ ಸಂಭವಿಸದಂತೆ ಶಿಥಿಲ ನಿರ್ಮಾಣಗಳ ದುರಸ್ತಿ ಸೇರಿದಂತೆ ಎಲ್ಲ ಅಗತ್ಯ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು.
> ■ ಬಿ.ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

1,092 ರೊಬೊಟಿಕ್ ಶಸ್ತ್ರಚಿಕಿತ್ಸೆ

ಪುಟ ೩➔ ಕಿದ್ವಾಯಿ ಸಂಸ್ಥೆಯಲ್ಲಿ ರೋಬೋಟಿಕ್ ಶಸ್ತ್ರಚಿಕಿತ್ಸಾ ಸೇವೆಗಳನ್ನು 2015ರಲ್ಲಿ ಡಾ ವಿನ್ಸಿ ರೋಬೋಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆಯ ಸ್ಥಾಪನೆಯೊಂದಿಗೆ ಪ್ರಾರಂಭಿಸಲಾಯಿತು. ಇದನ್ನು ಕಾರ್ಯಾರಂಭ ಮಾಡಿದಾಗಿನಿಂದ ವಿವಿಧ ವಿಶೇಷತೆಗಳಲ್ಲಿ ವ್ಯಾಪಕ ಶ್ರೇಣಿಯ ಪ್ರಮುಖ, ಸಂಕೀರ್ಣ ಮತ್ತು ಕನಿಷ್ಠ ಆಕ್ರಮಣಕಾರಿ ಆಂಕೊಲಾಜಿಕಲ್ ಕಾರ್ಯವಿಧಾನಗಳನ್ನು ನಿರ್ವಹಿಸಲು ಈ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ಮತ್ತು ವ್ಯಾಪಕವಾಗಿ ಬಳಸಿಕೊಳ್ಳಲಾಗಿದೆ. ರೋಬೋಟಿಕ್ ನೆರವಿನ ಶಸ್ತ್ರಚಿಕಿತ್ಸೆಯ ಪರಿಚಯವು ಶಸ್ತ್ರಚಿಕಿತ್ಸಾ ನಿಖರತೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಆರಂಭದಿಂದ ಈವರೆಗೆ ಒಟ್ಟು 1,092 ರೋಬೋಟಿಕ್ ನೆರವಿನ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ.

ಪ್ರಾಸ್ಟೇಟ್ (ಮೂತ್ರನಾಳ) ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್, ತಲೆ ಮತ್ತು ಕುತ್ತಿಗೆ ಕ್ಯಾನ್ಸರ್, ಎದೆಗೂಡಿನ ಕ್ಯಾನ್ಸರ್‌ಗಳು ಸೇರಿ ಆಯ್ದ ಕ್ಯಾನ್ಸರ್ ಪ್ರಕರಣಗಳಲ್ಲಿ ರೋಗಿಗಳಿಗೆ ಈ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ.

> ರೊಬೊಟಿಕ್ ಶಸ್ತ್ರಚಿಕಿತ್ಸೆಯ ಕಾರ್ಯವಿಧಾನಗಳಲ್ಲಿ ಗಣನೀಯ ಪ್ರಮಾಣವನ್ನು ಆಯುಷ್ಮಾನ್ ಭಾರತ್ -ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಉಚಿತವಾಗಿ ನಡೆಸಲಾಗಿದೆ. ಇದರಿಂದಾಗಿ ಆರ್ಥಿಕವಾಗಿ ಹಿಂದುಳಿದ ರೋಗಿಗಳಿಗೆ ಸುಧಾರಿತ ರೊಬೊಟಿಕ್ ಶಸ್ತ್ರಚಿಕಿತ್ಸೆಯ ಪ್ರಯೋಜನಗಳನ್ನು ವಿಸ್ತರಿಸಲಾಗಿದೆ.
> ■ ಡಾ. ಟಿ. ನವೀನ್, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಕಿರುಸುದ್ದಿ

ಕೆಡಿಪಿ ಸಭೆ ಮೊಟಕು

• **ಕನಕಪುರ:** ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ಬಿದ್ದು ಹಲವಾರು ಮಂದಿ ದುರ್ಮರಣ ಹೊಂದಿದ್ದಾರೆ, ಎಂಬ ಸಂದೇಶ ರವಾನೆಯಾಗುತ್ತಿದ್ದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೆಡಿಪಿ ಸಭೆಯನ್ನು ಅರ್ಧಕ್ಕೆ ಮೊಟಕುಗೊಳಿಸಿ ತರಾತುರಿಯಲ್ಲಿ ಬೆಂಗಳೂರಿನತ್ತ ನಡೆದರು. ಬೆಂಗಳೂರು ಮಳೆ ಅವಾಂತರದ ಬಗ್ಗೆ ಈಗಾಗಲೇ ಹಿರಿಯ ಅಧಿಕಾರಿಗಳ ಜೊತೆ ದೂರವಾಣಿ ಮೂಲಕ ಮಾತನಾಡಿದ್ದೇನೆ. ಕೂಡಲೇ ನಗರಕ್ಕೆ ತೆರಳಿ ಸ್ಥಳ ಪರಿಶೀಲನೆ ಮಾಡಿ, ಮಳೆ ಬರುವುದು ಒಳ್ಳೆಯದೇ ಆದರೂ ಅನಾಹುತ ಆಗಬಾರದು ಎಂಬ ಉದ್ದೇಶಕ್ಕಾಗಿ ಖುದ್ದು ಭೇಟಿ ನೀಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತೇನೆಂದರು. ಕನಕಪುರದಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೇವಲ ಐದಾರು ಇಲಾಖೆಗಳ ಮಾಹಿತಿ ಮತ್ತು ಪ್ರಗತಿಯನ್ನು ಪಡೆಯುತ್ತಿರುವ ವೇಳೆ ಬೆಂಗಳೂರು ಮಳೆ ಅವಾಂತರದ ಸುದ್ದಿ ಕೇಳಿ ಬಂದಿತು.

ಸ್ಥಗಿತ ಕಾಮಗಾರಿಗೆ ಚಾಲನೆಗೆ ಕ್ರಮ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಸ್ಥಗಿತಗೊಂಡಿದ್ದ ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡಲು ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ. ಪರಿಷ್ಕೃತ ಮಹಾಯೋಜನೆ(ಆರ್‌ಎಂಪಿ)-2015ರಲ್ಲಿ ಸೆನ್ಸಿಟಿವ್ ವಲಯ (ಸೂಕ್ಷ್ಮ ವಲಯ) ಎಂದು ಗುರುತಿಸಲಾದ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮತಿ ನೀಡಲು ಈ ಹಿಂದೆ ರಚಿಸಲಾಗಿದ್ದ ಉಪಸಮಿತಿಯನ್ನು ಸರ್ಕಾರ ಪರಿಷ್ಕರಿಸಿ ಪುನರ್ ರಚಿಸಿದೆ. ಜ.8ರಂದು ರಚಿಸಲಾಗಿದ್ದ ಹಳೆಯ ಸಮಿತಿಯಲ್ಲಿ ಕೆಲವು ಸದಸ್ಯರು ಪ್ರಸ್ತುತ ಲಭ್ಯವಿಲ್ಲದ ಕಾರಣ, ಸೆನ್ಸಿಟಿವ್ ಕ್ಲಿಯರೆನ್ಸ್ ಕೋರಿ ಸಲ್ಲಿಕೆಯಾಗಿದ್ದ ನೂರಾರು ಪ್ರಸ್ತಾವನೆಗಳು ವಿಲೇವಾರಿಯಾಗದೆ ಬಾಕಿ ಉಳಿದಿದ್ದವು. ಇದನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರ, ಪರಿಸರ ಮತ್ತು ನಗರಾಭಿವೃದ್ಧಿ ತಜ್ಞರನ್ನು ಒಳಗೊಂಡ ಹೊಸ ಸಮಿತಿಯನ್ನು ಅಸ್ತಿತ್ವಕ್ಕೆ ತಂದಿದೆ. ನೂತನ ಸಮಿತಿಯ ಅಧ್ಯಕ್ಷರಾಗಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ವಿಭಾಗದ ವಿಶೇಷ ಆಯುಕ್ತರನ್ನು ನೇಮಿಸಲಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆಯ ಹೈಡ್ರಾಲಜಿ ವಿಭಾಗದ ತಜ್ಞರು ಮತ್ತು ವಿವಿಧ ನಗರ ಪಾಲಿಕೆಗಳ ಹೆಚ್ಚುವರಿ ಮುಖ್ಯ ಎಂಜಿನಿಯರ್‌ಗಳು ಸಮಿತಿಯ ಸದಸ್ಯರಾಗಿದ್ದಾರೆ. ಸಮಿತಿಯ ಜವಾಬ್ದಾರಿಗಳು:ಬೆಂಗಳೂರಿನ ಕೆರೆ ಅಚ್ಚುಕಟ್ಟು ಪ್ರದೇಶಗಳು ಮತ್ತು ಸೂಕ್ಷ್ಮ ವಲಯಗಳಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಸಾಧಕ-ಬಾಧಕಗಳನ್ನು ಪರಿಶೀಲಿಸುವುದು. ರಾಜಕಾಲುವೆ ಮತ್ತು ಬಫರ್ ಝೋನ್ ನಿಯಮಗಳ ಉಲ್ಲಂಘನೆಯಾಗದಂತೆ ನಿಗಾ ವಹಿಸುವುದು. ಬಾಕಿ ಉಳಿದಿರುವ ವಸತಿ ಮತ್ತು ವಾಣಿಜ್ಯ ಸಂಕೀರ್ಣಗಳ ನಕ್ಷೆ ಅನುಮೋದನೆ ಪ್ರಸ್ತಾವನೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದು ಸಮಿತಿಯ ಜವಾಬ್ದಾರಿಯಾಗಿದೆ.

ಸರ್ಕಾರ ಪರಿಷ್ಕರಿಸಿ ಉಪಸಮಿತಿ ಪುನರ್‌ರಚನೆ

ಮುಂದಿನ ಪೀಳಿಗೆಗಾಗಿ ಭೂಮಿ ಸಂರಕ್ಷಿಸಿ

• **ಬೆಂಗಳೂರು:** ನಮ್ಮ ಭೂಮಿಯನ್ನು ಮುಂದಿನ ಪೀಳಿಗೆಯವರಿಗೆ ಸಂರಕ್ಷಿಸಿ, ಬೆಳೆಸಿ, ಅಭಿವೃದ್ಧಿಪಡಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಾವು ಭೂಮಿಯನ್ನು ಸರಿಯಾಗಿ ಸಂರಕ್ಷಿಸದಿದ್ದರೆ ನಮ್ಮ ಮುಂದಿನ ಪೀಳಿಗೆಯವರಿಗೆ ಗುಣಮಟ್ಟದ ಆಹಾರ, ನೀರು, ಗಾಳಿ ಸಿಗುವುದಿಲ್ಲ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಆತಂಕ ವ್ಯಕ್ತಪಡಿಸಿದರು. ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದಿಂದ ಬುಧವಾರ ದೂರ ಸಂವೇದಿ ಭವನದಲ್ಲಿ ಹಮ್ಮಿಕೊಳ್ಳಲಾದ ಕೆ-ಜಿಐಎಸ್ 2.0 ರಾಜ್ಯ ಮಟ್ಟದ ಪ್ರದರ್ಶನ ಮತ್ತು ಭೂಮಿಯನ್ನು ನಿರ್ವಹಿಸುವ ತಂತ್ರಜ್ಞಾನಗಳು ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳ ನಾವೀನ್ಯ ಮಾದರಿ ಕುರಿತು ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಭೂಮಿಯನ್ನು ನಾವು ನಮ್ಮ ಪೂರ್ವಜರಿಂದ ಬಳುವಳಿ ಪಡೆದಿರುವುದಲ್ಲ, ಮುಂದಿನ ಪೀಳಿಗೆಯವರಿಂದ ಎರವಲು ಪಡೆದಿದ್ದೇವೆ. ಹಾಗಾಗಿ ಅದನ್ನು ಕಾಪಾಡಿಕೊಳ್ಳುವುದು ನಮ್ಮ ಸಾಮಾಜಿಕ ಬದ್ಧತೆಯಾಗಿದೆ ಎಂದರು. ನಾವು ಈಗ ಎಲ್ಲಾ ವಲಯಗಳಲ್ಲೂ ಎಐ ಸೇರಿದಂತೆ ದೊಡ್ಡಮಟ್ಟದ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿದ್ದೇವೆ. ಆದರೆ ನಾವು ಆರೋಗ್ಯವಂತರಾಗಿ ಬದುಕಲು ಅವಶ್ಯಕತೆ ಇರುವಂತಹ ಅವಶ್ಯಕ ಸರಳ ತಂತ್ರಜ್ಞಾನಗಳ ಸಂಶೋಧನೆ ಕಡೆಗೆ ಹೆಚ್ಚಿನ ಗಮನ ನೀಡುತ್ತಿಲ್ಲ ಎಂದು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಆಡಳಿತ ಮಂಡಳಿಯ ಅಧ್ಯಕ್ಷರೂ ಕೂಡ ಆಗಿರುವ ಶಾಲಿನಿ ರಜನೀಶ್ ಅವರು ಅಭಿಪ್ರಾಯಪಟ್ಟರು. ನಮ್ಮ ಭೂಮಿಯನ್ನು ಸಂರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಹೆಚ್ಚು ಉಪಯೋಗವಾಗುವಂತಹ ಸರಳ ತಂತ್ರಜ್ಞಾನಗಳನ್ನು ಆವಿಷ್ಕಾರ ಮಾಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ ಅವರು, ನೀವು ತಯಾರಿಸಿರುವ ಎಲ್ಲಾ ತಂತ್ರಜ್ಞಾನಗಳ ಬಗ್ಗೆ ಖುದ್ದು ನಾನೇ ಪರಿಶೀಲನೆ ನಡೆಸಿ, ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳಲ್ಲಿ ಖಂಡಿತವಾಗಿ ಅಳವಡಿಸಿಕೊಳ್ಳಲಾಗುವುದೆಂದು ತಿಳಿಸಿದರು.

ಮೇ 9ರಂದು ಚಿತ್ರದುರ್ಗದಲ್ಲಿ ಬಿಎಸ್‌ವೈ ಅಭಿಮಾನೋತ್ಸವ | ಸಿದ್ಧತೆ ಪರಿಶೀಲಿಸಿದ ಬಿವೈವಿ

ಯಡಿಯೂರಪ್ಪ ಪರಿಶ್ರಮದ ರಾಜಕಾರಣಿ

• **ಚಿತ್ರದುರ್ಗ:** ಬಿಎಸ್.ಯಡಿಯೂರಪ್ಪನವರು ಅದೃಷ್ಟದ ಮುಖ್ಯಮಂತ್ರಿಯಲ್ಲ, ಜನರಿಂದ ಆಯ್ಕೆಯಾದ ಪರಿಶ್ರಮದ ಮುಖ್ಯಮಂತ್ರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಹೇಳಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 50ವರ್ಷದ ರಾಜಕೀಯ ಜೀವನದ ಹಿನ್ನಲೆಯಲ್ಲಿ ಮೇ9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಬುಧವಾರ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿ.ಎಸ್. ಯಡಿಯೂರಪ್ಪನವರು ಅಧಿಕಾರಕ್ಕಾಗಿ ಬಂದವರಲ್ಲ, ಕರ್ನಾಟಕ ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದೇ ತರುತ್ತೇನೆ ಎಂಬ ಹಠದಲ್ಲಿ ರಾಜ್ಯದಲ್ಲಿ ಪ್ರವಾಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತಂದರು ಎಂದರು.

ಇಂದಿನ ಯುವ ರಾಜಕಾರಣಿಗಳಿಗೆ ಹಾಗೂ ಯುವ ಪೀಳಿಗೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ದಾರಿ ದೀಪವಾಗಿದ್ದಾರೆ. ಅವರ 50 ವರ್ಷದ ರಾಜಕೀಯ ಜೀವನ ಬೇರೆಯವರಿಗೆ ಮಾರ್ಗದರ್ಶನ ವಾಗಬೇಕಿದೆ. ಯಡಿಯೂರಪ್ಪನವರೆಂದರೆ ರಾಜ್ಯದಲ್ಲಿ ಹೋರಾಟ ನಡೆಸುವ ವ್ಯಕ್ತಿ ಎಂದು ಗುರುತಿಸಲಾಗಿದೆ. ಬಿಎಸ್‌ವೈ ಎಂದರೆ ಹೋರಾಟ ಎಂಬ ಮನೋಭಾವ ಎಲ್ಲರಲ್ಲೂ ಮೂಡುತ್ತದೆ ಎಂದರು.

ಕೊಪ್ಪಳ, ವಿಜಯನಗರ, ಬಳ್ಳಾರಿಯ ಮುಖಂಡರು ಶ್ರೀಗಳನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಈ ಮೂರು ಜಿಲ್ಲೆಗಳಿಂದಲೇ ಸುಮಾರು 1.50 ಲಕ್ಷ ಜನ ಬರುವವರಿದ್ದಾರೆ. ಈ ಕಾರ್ಯಕ್ರಮದಲ್ಲಿ ಯಡಿಯೂರಪ್ಪನವರು ಪ್ರಾರಂಭದಲ್ಲಿ ಬಳಸಿದ ಅಂಬಾಸಿಡರ್ ಕಾರನ್ನು ಇಲ್ಲಿಗೆ ತರಲಾಗುವುದು. ಜನರು ಈ ಕಾರನ್ನು ನೋಡಲು ಅವಕಾಶ ಕಲ್ಪಿಸಲಾಗಿದೆ. ಇದು ಬಿಜೆಪಿ ಯಡಿಯೂರಪ್ಪನವರ ಅಭಿಮಾನಿಗಳು ಹಾಗೂ ಹಿರಿಯರು



ಸೇರಿಕೊಂಡು ಅಭಿಮಾನದಿಂದ ಮಾಡುತ್ತಿರುವ ಕಾರ್ಯಕ್ರಮ. ಇದರಲ್ಲಿ ಜೆಡಿಎಸ್‌ನ ಕುಮಾರಸ್ವಾಮಿ ಸಹ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಈ ಕಾರ್ಯಕ್ರಮಕ್ಕೆ ಆಗಮಿಸುವ ಅಮಿತ್ ಶಾ ಅವರಿಗೆ ಗೋ ಬ್ಯಾಕ್ ಎಂಬ ಮಾತು ಸಾಮಾಜಿಕ ಜಾಲತಾಣಗಳಲ್ಲಿ ಕಂಡುಬರುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್ ಪ್ರೇರಿತವಾದ ಕಾರ್ಯವಾಗಿರಬಹುದು. ಅಮಿತ್ ಶಾ ಅವರು ಭರವಸೆ ನೀಡಿದ್ದಾರೆಂದರೆ ಅದನ್ನು ಈಡೇರಿಸುತ್ತಾರೆ ಎಂಬ ಭರವಸೆ ನನಗಿದೆ. ಇದರಿಂದ ಕಾರ್ಯಕ್ರಮಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂಬ ವಿಶ್ವಾಸವಿದೆ ಎಂದು ಹೇಳಿದರು. ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ. ಕುಮಾರಸ್ವಾಮಿ, ಖನಿಜ ನಿಗಮದ ಮಾಜಿ ಅಧ್ಯಕ್ಷ ಎಸ್. ಲಿಂಗಮೂರ್ತಿ, ರಾಜ್ಯ ಕಾರ್ಯದರ್ಶಿ ರಮೇಶ್ ಗೌಡ್ರು, ವಿಭಾಗ ಸಹಾ ಪ್ರಭಾರಿ ಎ. ಮುರಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾಧುರಿ ಗಿರೀಶ್, ವೆಂಕಟೇಶ್ ಯಾದವ್, ಮೋಹನ್ ಕುಮಾರ್, ವೀರಶೈವ ಬ್ಯಾಂಕ್ ಅಧ್ಯಕ್ಷ ಪಟೇಲ್ ಶಿವಕುಮಾರ್, ನಗರಸಭೆ ಮಾಜಿ ಸದಸ್ಯರಾದ ಬಿ.ಸುರೇಶ್, ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಸಂಪತ್‌ಕುಮಾರ್, ಜಿಲ್ಲಾ ವಕ್ತಾರ ನಾಗರಾಜ್ ಬೇದ್ರೆ, ಎಸ್.ಸಿ.ಮೋರ್ಚಾದ ಅಧ್ಯಕ್ಷ ಪರಶುರಾಮ್, ನಂದಿ ನಾಗರಾಜ್, ರಾಜ್ಯ ರೈತ ಮೋರ್ಚಾದ ಮಲ್ಲಿಕಾರ್ಜುನ್ ಸೇರಿದಂತೆ ಇನ್ನಿತರರಿದ್ದರು.

ದಸರಾ ಅಂಬಾರಿ ರೀತಿ ವೈಭವ!

ಮೇ 8ರಂದು ಮೈಸೂರು ದಸರಾ ಅಂಬಾರಿ ಮೆರವಣಿಗೆ ರೀತಿಯಲ್ಲಿ ಯಡಿಯೂರಪ್ಪನವರ ಪುರಪ್ರವೇಶ ಕಾರ್ಯಕ್ರಮ ನಡೆಯಲಿದೆ. ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಲಿವೆ. ಈ ಸಮಯದಲ್ಲಿ ವಿವಿಧ ರೀತಿಯ ಜಾನಪದ ಕಲಾ ಮೇಳಗಳು, ಸ್ತಬ್ಧ ಚಿತ್ರಗಳು ಇರಲಿವೆ. ಮೇ 9ರಂದು ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸುವರು. ಅಲ್ಲದೇ ಯಡಿಯೂರಪ್ಪ ಅವರನ್ನು ಸನ್ಮಾನಿಸಲಿದ್ದಾರೆ.

ಜನಸೇವೆಗಾಗಿಯೇ ತಮ್ಮ ಜೀವನನ್ನೇ ಮುಡುಪಾಗಿಟ್ಟಿದ್ದಾರೆ. ದಲಿತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಮಹಿಳೆಯರಿಗೆ ಧ್ವನಿಯಾಗಿ ಕೆಲಸ ಮಾಡಿದ್ದಾರೆ. ಅಧಿಕಾರಕ್ಕಾಗಿ ಎಂದೂ ಹೋರಾಟ ಮಾಡಲಿಲ್ಲ, ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದ್ದಾರೆ. 50 ವರ್ಷ ಬಡವರ ಪರವಾಗಿ ಕೆಲಸ ಮಾಡಿದ್ದಾರೆ. ಸೈಕಲ್ ಮೇಲೆ ರಾಜ್ಯ ಪ್ರವಾಸ ಮಾಡಿ, ಪಕ್ಷ ಕಟ್ಟಿ ಬೆಳೆಸಿದ ಅವರ ಹೋರಾಟ ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿದೆ. ಜನರ ಪ್ರೀತಿ ವಿಶ್ವಾಸದ ಮೂಲಕ ಅಧಿಕಾರ ಹಿಡಿಯುವ ಪ್ರಯತ್ನ ಮಾಡಿದ್ದಾರೆ.

■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ವಿಜಯಪುರ ಸುತ್ತಮುತ್ತ ಮಳೆ



• **ವಿಜಯಪುರ:** ಬುಧವಾರ ಸಂಜೆ ಭರಣಿ ಮಳೆಯ ಸಿಂಚನವಾಯಿತು. ಮಳೆಯಿಂದಾಗಿ ಪಟ್ಟಣದಲ್ಲಿ ಜನರು ಛತ್ರಿ ಹಿಡಿದುಕೊಂಡು ಓಡಾಡಿದರು.

ಬೆಳಗ್ಗೆಯಿಂದಲೇ ಕಾದ ಕೆಂಡದಂತೆ ಸುಡುತ್ತಿದ್ದ ಬಿಸಿಲು ಮಧ್ಯಾಹ್ನದ ವೇಳೆಗೆ ವಾತಾವರಣದಲ್ಲಿ ಮೋಡ ಕವಿದ ವಾತಾವರಣ ಉಂಟಾಗಿ ಸಂಜೆಗೆ ಗುಡುಗು, ಗಾಳಿಯೊಂದಿಗೆ ಸಾಧಾರಣ ಮಳೆಯಾಯಿತು. ಯುಗಾದಿ ಹಬ್ಬದ ನಂತರ ಹೊಸ ಮಳೆ ಆರಂಭಗೊಂಡ ಅಶ್ವಿನಿ ಮಳೆ ಬರೀ ಬಿಸಿಲಿನಲ್ಲಿಯೇ ಕಳೆದು ಹೋಯಿತು.

ಬಿಸಿಲಿನ ತಾಪಮಾನದಿಂದ ಜನಜಾನುವಾರುಗಳು ತತ್ತರಿ ಸಿದ್ದವು. ಅಂತರ್ಜಲ ಮಟ್ಟ ಕುಸಿತದಿಂದಾಗಿ ಕೊಳವೆಬಾವಿಯಲ್ಲಿ ನೀರಿನ ಮಟ್ಟ ಕುಸಿತಗೊಂಡು ರೈತರು ಕೃಷಿ ಚಟುವಟಿಕೆಗಳು ನಡೆಸಲು ಹಿನ್ನಡೆ ಅನುಭವಿಸುವಂತಾಗಿತ್ತು. ಭರಣಿ ಮಳೆಯು ಮೊದಲ ವರ್ಷಧಾರೆಯಿಂದ ಸಹಜವಾಗಿ ವಾತಾವರಣದಲ್ಲಿನ ಬಿಸಿಲಿನ ತಾಪಮಾನ ಸ್ವಲ್ಪ ಕಡಿಮೆಯಾಗಿದೆ. ಬಿಸಿಲಿನ ಬೇಗೆಯಿಂದ ಬೆಂಡಾಗಿದ್ದ ಜನತೆ ಹಾಗೂ ಜಾನುವಾರು ಮಳೆಯಿಂದ ನೆಮ್ಮದಿ ಕಾಣುವಂತಾಗಿದೆ.

ಮಳೆಗೆ ಉರುಳಿದ ಬೇವಿನ ಮರ





• **ದಾಬಸ್ ಪೇಟೆ:** ತೀವ್ರ ಗಾಳಿಯ ಪರಿಣಾಮ ಸೋಂಪುರ ಹೋಬಳಿಯ ಚನ್ನೋಹಳ್ಳಿ ಗ್ರಾಮದ ಧನಂಜಯ ಎಂಬುವವರ ಬೇವಿನ ಮರದ ಬಾರೀ ಗಾತ್ರದ ಕೊಂಬೆ ರಸ್ತೆಗೆ ಉರುಳಿ ಬಿದ್ದು ಅನಾಹುತ ತಪ್ಪಿದೆ. ಸಂಜೆ 6.28ರ ಸುಮಾರಿಗೆ ಬಾರೀ ಶಬ್ದ ಬಂದಿತು. ಹೊರಗಡೆ ಬಂದು ನೋಡಿದರೆ ಮನೆ ಮುಂದಿನ, ರಸ್ತೆಗೆ ಹೊಂದಿಕೊಂಡಂತೆ ಇದ್ದ ಬೇವಿನ ಮರದ ಕೊಂಬೆ ಮುರಿದು ನೆಲಕ್ಕೆ ಉರುಳಿತ್ತು ಎಂದರು ಶಕುಂತಲ. ಡೇರಿಗೆ ಹಾಲು ತೆಗೆದುಕೊಂಡು ಬರುತ್ತಿದ್ದೆ. ಇದ್ದಕ್ಕಿದ್ದಂತೆ ಮರದ ಕೊಂಬೆ ಬಿತ್ತು. ನನ್ನ ಮುಂದೆ ಕೆಲಸಕ್ಕೆ ಹೋಗಿದ್ದ ಮಹಿಳೆಯೊಬ್ಬರು ನಡೆದು ಹೋಗುತ್ತಿದ್ದರು, ಆಗ ತಾನೇ ಟೆಂಪೋ ಹೋಯಿತು. ಕೆಲ ಸೆಕೆಂಡ್ ಮುಂಚೆ ಬಿದ್ದಿದ್ದರು ಅಪಾಯ ಖಂಡಿತ ಆಗುತ್ತಿತ್ತು ಎಂದರು ಸಾಗರ್. ಪಕ್ಕದಲ್ಲಿಯೇ ಇದ್ದ ಸಿಮೆಂಟ್ ಕಾಂಪೌಂಡ್, ಬಾಳೆ, ಅಡಿಕೆ ಹಾಗೂ ಬಟರ್ ಫ್ರೂಟ್ ಗಿಡಗಳಿಗೆ ಸ್ವಲ್ಪ ತೊಂದರೆ ಎಂದರು ಧನಂಜಯ. ನೆಲಮಂಗಲ ತಾಲೂಕಿನ ಬೂದಿಹಾಲ್ ಗ್ರಾಪಂ ವ್ಯಾಪ್ತಿಯ ಪಾಪಭೋವಿಪಾಳ್ಯ ಬುಧವಾರ ಸಂಜೆ ಸಂಜೆ ಸಿಡಿಲು ಬಡಿದು ತೆಂಗಿನಮರವೊಂದು ಹೊತ್ತು ಉರಿದಿದೆ. ಅದೃಷ್ಟವಶಾತ್ ಯಾರಿಗೂ ಹಾನಿಯಾಗಿರುವುದಿಲ್ಲ, ಮಂಗಳವಾರ ಸಂಜೆ ಸೋಂಪುರ ಹೋಬಳಿ ಮರಳಕುಂಟೆ ವೀರಣ್ಣ ಎಂಬುವವರ ಹಸು ಸಿಡಿಲು ಬಡಿದು ಸಾವನ್ನಪ್ಪಿತ್ತು.

ಸಶಕ್ತ ಭಾರತಕ್ಕಾಗಿ ಸಮಾನ ಅವಕಾಶ ಕುರಿತು ಸಂವಾದ

ಶಿಕ್ಷಣದಿಂದ ಉತ್ತಮ ಪ್ರಜೆ ನಿರ್ಮಾಣ

• **ಕೆಂಗೇರಿ:** ಸಮಾಜಕ್ಕೆ ಉತ್ತಮ ಪ್ರಜೆಯನ್ನು ಕೊಡುಗೆಯಾಗಿ ನೀಡುವ ಶಕ್ತಿ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಮಾಜಿ ಸಚಿವೆ ಮತ್ತು ಸಾಹಿತಿ ಡಾ.ಬಿ.ಟಿ.ಲಲಿತಾ ನಾಯಕ್ ಹೇಳಿದರು.

ಕೆಂಗೇರಿ ಉಪನಗರದಲ್ಲಿರುವ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನಲ್ಲಿ ಐಕ್ಯೂ ಎಸಿ ಉಪಕ್ರಮ ಎಲೆಕ್ಟೋರಲ್ ಲಿಟರಿಯ ಕ್ಲಬ್ ಮತ್ತು ಸಮಾನ ಅವಕಾಶ ಸಮಿತಿ ಸಹಯೋಗದಲ್ಲಿ ಆಯೋಜಿಸಿದ್ದ ಅಂತರ್ ಕಾಲೇಜು ಯುವ ಸಮಾವೇಶ ಸಶಕ್ತ ಭಾರತಕ್ಕಾಗಿ ಸಮಾನ ಅವಕಾಶಗಳು ಎಂಬ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜಕಾರಣ ಎಂಬುದು ನಿಂತ ನೀರಲ್ಲ, ಜನರ ಹಿತಾಸಕ್ತಿಗೆ ತಕ್ಕಂತೆ ಜನಸೇವೆಗೆ ತಮ್ಮನ್ನು ತಾವು ತೊಡಗಿಸಿಕೊಂಡು ಜನರ ಸಂಕಷ್ಟಗಳಿಗೆ ಸ್ಪಂದಿಸುವ ಸೇವೆಯಲ್ಲಿ ಒಂದಾಗಿದೆ, ರಾಜಕೀಯ ಫಲವತ್ತತೆಯ ಭೂಮಿ ಇದ್ದಂತೆ ಕೆಟ್ಟ ಕ್ಷೇತ್ರವಲ್ಲ, ಜನ ನಾಯಕ ಎಂದು ಕರೆಸಿಕೊಳ್ಳುವ ಬದಲು ಜನಸೇವಕ ಎಂದು ಕರೆಸಿಕೊಂಡಾಗ ಅದರ ಮಹತ್ವ ತಿಳಿಯುತ್ತದೆ ಎಂದು ತಿಳಿಸಿದರು.

ಅಂದು ಡಾ. ಬಿ. ಆರ್. ಅಂಬೇಡ್ಕರ್ ಶಿಕ್ಷಣ ಪಡೆಯದಿದ್ದರೆ, ಸಂವಿಧಾನ ಬರೆಯದಿದ್ದರೆ ಸಮಾನತೆ, ಹಕ್ಕು ನಮಗೆ ಸಿಗುತ್ತಿರಲಿಲ್ಲ, ಶಿಕ್ಷಣಕ್ಕೆ ಮಹತ್ತರವಾದ ಶಕ್ತಿ ಇದೆ. ಮೂಢನಂಬಿಕೆಗಳನ್ನು ತೊಡೆದು ಹಾಕಿ ದೇವರನ್ನು ನಾವು ಮಾಡುವ ಕೆಲಸ, ಪರಿಸರ, ದೇಶಾಭಿಮಾನದಲ್ಲಿ ಕಾಣಬೇಕು ಎಂದು ಕಿವಿಮಾತು ಹೇಳಿದರು.



ಶೇಷಾದ್ರಿಪುರಂ ಶಿಕ್ಷಣ ದತ್ತಿ ಧರ್ಮ ದರ್ಶಿ ಕೆ. ಕೃಷ್ಣಸ್ವಾಮಿ ಮಾತನಾಡಿ, ದೇಶ ಕಟ್ಟುವ ಚೈತನ್ಯ ವಿದ್ಯಾರ್ಥಿಗಳಿಗಿದೆ. ಸಮಾಜಮುಖಿ ಕ್ಷೇತ್ರಗಳಲ್ಲಿ ಜನಾನುರಾಗಿ ಸೇವೆ ಸಲ್ಲಿಸಿದ ಕಡಿದಾಳ್ ಮಂಜಪ್ಪ ಅವರ ವಿಚಾರ ಧಾರೆಗಳನ್ನು ಮೈಗೂಡಿಸಿಕೊಂಡು ಸಮಾಜದ ಬದಲಾವಣೆಗೆ ಮುಂದಾಗಿ ಎಂದು ತಿಳಿಸಿದರು. ಇದೇ ವೇಳೆ ಸಂವಾದ ಕಾರ್ಯಕ್ರಮದಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳಲ್ಲಿ ಶೇಷಾದ್ರಿಪುರಂ ಕಾನೂನು ಕಾಲೇಜಿನ ವಿದ್ಯಾರ್ಥಿನಿ ಲಾವಣ್ಯ ಪ್ರಥಮ ಬಹುಮಾನ 1000ರೂ ಪ್ರಶಸ್ತಿ ಪತ್ರ, ಕನಕಪುರ ರೂರಲ್ ಕಾಲೇಜು ವಿದ್ಯಾರ್ಥಿ ಆದರ್ಶ ದ್ವಿತೀಯ ಸ್ಥಾನ 750 ರೂ ಪ್ರಶಸ್ತಿ ಪತ್ರ, ಎಸ್.ಎ.ಬಿ..ಎಸ್ ಕಾಲೇಜಿನ ವಿದ್ಯಾರ್ಥಿನಿ ಲಿಖಿತ ತೃತೀಯ ಬಹುಮಾನ 500 ರೂ ಪ್ರಶಸ್ತಿ ಪತ್ರ ಹಾಗೂ ಸಮಾಧಾನಕರ ಬಹುಮಾನವನ್ನು 3 ವಿದ್ಯಾರ್ಥಿಗಳಿಗೆ ನೀಡಿ ತಲಾ 250ರೂ ಪ್ರಶಸ್ತಿ ಪತ್ರವನ್ನು ವಿತರಿಸಲಾಯಿತು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಧರ್ಮದರ್ಶಿ ಕೆ.ಕೃಷ್ಣಸ್ವಾಮಿ, ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಜಯರಾಮು, ಹಳೆ ವಿದ್ಯಾರ್ಥಿ ಲಿಖಿತ್. ಎನ್, ಐಕ್ಯೂ ಎಸಿ ಸಂಯೋಜಕ ಡಾ.ರೂಪಶ್ರೀ ಹಾಗೂ ಕಾಲೇಜಿನ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ರಾಮಸಂದ್ರ ಡೇರಿ ಮಾಜಿ ಅಧ್ಯಕ್ಷ ಮುದ್ದಯ್ಯ ಹುಟ್ಟುಹಬ್ಬ

ಕಷ್ಟಕ್ಕೆ ಸ್ಪಂದಿಸುವವನೆ ನೈಜ ಜನಸೇವಕ

• **ಕೆಂಗೇರಿ:** ಬಡವರು ಮತ್ತು ಮಧ್ಯಮ ವರ್ಗದ ಜನರ ಸರ್ವೋತ್ತೋಮುಖ ಬೆಳವಣಿಗೆಗೆ ಪೂರಕವಾಗಿ ಸ್ಪಂದಿಸುವವನೇ ನಿಜವಾದ ಜನ ಸೇವಕ ಎಂದು ಬಿಜೆಪಿ ಮುಖಂಡ ಹಾಗೂ ರಾಮಸಂದ್ರ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಚ್.ಮುದ್ದಯ್ಯ ಹೇಳಿದರು.

ಬೆಂಗಳೂರು ದಕ್ಷಿಣ ತಾಲೂಕು ರಾಮಸಂದ್ರ ಗ್ರಾಮದ ತಮ್ಮ ನಿವಾಸದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಆಯೋಜಿಸಿದ್ದ ಹುಟ್ಟು ಹಬ್ಬದ ಸಂಭ್ರಮ ಆಚರಣೆ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿ, ಅಧಿಕಾರ ಶಾಶ್ವತವಾದ ಹುದ್ದೆ ಅಲ್ಲ, ಅಧಿಕಾರ ಇದ್ದಾಗ ಹಿಗ್ಗದೆ ಅಧಿಕಾರ ಇಲ್ಲದೆ ಇದ್ದಾಗ ಕುಗ್ಗದೆ ಜನರ ಸಂಕಷ್ಟಕ್ಕೆ ಸ್ಪಂದಿಸಿ ಗ್ರಾಮದ ಬಡಾವಣೆಯ ಜನರ ಕಷ್ಟ ನನ್ನ ಕಷ್ಟ ಎಂದು ಭಾವಿಸಿ, ಹಗಲಿರುಳು ಶ್ರಮಿಸಿ ಬಡವರು ಮತ್ತು ಮಧ್ಯಮ ವರ್ಗದ ಜನರ ಸಂಕಷ್ಟಕ್ಕೆ ಸ್ಪಂದಿಸಬೇಕು. ಬಡ ಮಕ್ಕಳಿಗೆ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ, ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ ಜನರ ಕಣ್ಣೀರು ಒರೆಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ ಎಂದು ತಿಳಿಸಿದರು. ಯಶವಂತಪುರ ಕ್ಷೇತ್ರದ ಒಕ್ಕಲಿಗರ ಸಂಘದ ಖಜಾಂಚಿ ವೆಂಕಟರಮಣ ಎಚ್, ಬಿಜೆಪಿ ಮುಖಂಡರಾದ ಶ್ರೀನಿವಾಸ್, ಕಿರಣ್ ಮಹೇಶ್, ನವೀನ್ ಕುಮಾರ್, ಹರೀಶ್ ದೀಪಕ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ಬೆಂ. ಗ್ರಾ. ಜಿಪಂನಲ್ಲಿ ನಿವೇಶನ ಹಕ್ಕುಪತ್ರ ವಿತರಣೆ ಕುರಿತು ಸಭೆ

ಎರಡು ಸಾವಿರ ನಿವೇಶನ ಶೀಘ್ರ ಹಂಚಿಕೆ

• **ದೇವನಹಳ್ಳಿ:** ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡುವ ಸಂಬಂಧ ಮೇ 15 ರೊಳಗೆ ಎರಡು ಸಾವಿರ ನಿವೇಶನ ಸಿದ್ದಪಡಿಸಲು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಎಚ್.ಮುನಿಯಪ್ಪ ಗಡುವು ನೀಡಿದರು.

ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಶ್ರಯ ಯೋಜನೆಯಲ್ಲಿ ನಿವೇಶನ ಹಕ್ಕುಪತ್ರ ನೀಡುವ ಸಂಬಂಧ ಬುಧವಾರದಂದು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಕೂಟಗೆರೆ ಹೋಬಳಿ ಸೇರಿದಂತೆ ತಾಲೂಕಿನಲ್ಲಿ ಬಡವರಿಗೆ, ನಿವೇಶನ ರಹಿತರಿಗೆ ಸೈಟ್ ಹಂಚಿಕೆ ಮಾಡಬೇಕು. ಸರ್ಕಾರ ಬಂದು ಮೂರು ವರ್ಷ ಪೂರೈಸಿದೆ. ಬಡವರಿಗೆ ನಿವೇಶನ, ವಸತಿ ಕಲ್ಪಿಸುವುದು ನಮ್ಮ ಜವಾಬ್ದಾರಿ ಆಗಿದೆ. ನಿವೇಶನ ಹಕ್ಕುಪತ್ರ ವಿತರಣೆ ವಿಳಂಬ ಆಗಬಾರದೆಂದರು. ಈಗಾಗಲೇ ಎಲ್ಲೆಲ್ಲಿ ಸೈಟ್ ಅಭಿವೃದ್ಧಿ ಪಡಿಸಲಾಗಿದೆ ಅವುಗಳಿಗೆ ಫಲಾನುಭವಿಗಳ ಆಯ್ಕೆ ಹಾಗೂ ಹಕ್ಕುಪತ್ರ ಸಿದ್ದಮಾಡಲಾಗಿದೆ. ನಿವೇಶನ ಅಭಿವೃದ್ಧಿ ಪಡಿಸುತ್ತಿರುವ ಜಾಗದಲ್ಲಿ ಎಲ್ಲೆಲ್ಲಿ ತಕರಾರು, ಅಡಚಣೆ ಇದೆ ಅಲ್ಲಿಗೆ ತಹಶೀಲ್ದಾರ್, ಇಒ, ಸರ್ವೇಯರ್, ಆರ್‌ಐಗಳು, ಸ್ಥಳೀಯ ಮುಖಂಡರು ಖುದ್ದು ಭೇಟಿ ನೀಡಿ ಸಮಸ್ಯೆ ಇತ್ಯರ್ಥ ಪಡಿಸಬೇಕು. ಅರ್ಹ ಫಲಾನುಭವಿಗಳಿಗೆ ಪಕ್ಷಾತೀತವಾಗಿ ನಿವೇಶನ ಹಂಚಿಕೆ ಮಾಡಲಾಗುವುದು. ಮೇ 15ರೊಳಗೆ ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎರಡು ಸಾವಿರ ಸೈಟ್ ಹಂಚಿಕೆ ಮಾಡಲು ಸಿದ್ದ ಇರಬೇಕೆಂದು ಸೂಚಿಸಿದರು. ಜಿಲ್ಲಾದ್ಯಂತ ಎಲ್ಲೆಲ್ಲಿ ಕುಡಿಯುವ ನೀರು ಸಮಸ್ಯೆ ಉಲ್ಬಣವಾಗಿದೆ. ಅಲ್ಲಿ ಪರ್ಯಾಯವಾಗಿ ಖಾಸಗಿ ಬೋರ್‌ವೆಲ್, ರೈತರ ಬೋರ್‌ವೆಲ್‌ಮೂಲಕ ನೀರು ಪೂರೈಕೆ ಮಾಡಿ. ಯಾವುದೇ ಗ್ರಾಮ, ನಗರ ವ್ಯಾಪ್ತಿಯಲ್ಲಿ ಕುಡಿಯಲು ನೀರಿಲ್ಲ ಎಂದು ವರದಿ ಬರಬಾರದೆಂದು ಸೂಚಿಸಿದರು. ಪಂಚಾಯಿತಿ ಪಿಡಿಒಗಳು ಬೆಳಗ್ಗೆ ಇಂದ ಸಂಜೆ ತನಕ ಕೇಂದ್ರ ಸ್ಥಾನದಲ್ಲಿ ಇದೆ. ಕುಡಿಯುವ ನೀರು ಸಮಸ್ಯೆ ನಿರ್ವಹಣೆ ಮಾಡಬೇಕು. ಈಗಾಗಲೇ ಕುಡಿಯುವ ನೀರು ಸಮಸ್ಯೆ ಇರುವ ಜಾಗಗಳಲ್ಲಿ ಶೀಘ್ರ, ಹೊಸ ಕೊಳವೆಬಾವಿಗಳನ್ನು ಕೊರೆಸಿ, ವಿದ್ಯುತ್ ಸಂಪರ್ಕ ಕಲ್ಪಿಸಿ ನೀರು ಪೂರೈಕೆಗೆ ತ್ವರಿತ ಕ್ರಮ ಕೈಗೊಳ್ಳಬೇಕು ಎಂದರು.



ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ಎನ್.ಅನುರಾಧ, ಸಿಇಒ ಡಾ. ವಾಸಂತಿ ಅಮರ್, ಜಿಪಂ ಉಪಕಾರ್ಯದರ್ಶಿ ಶಿವಕುಮಾರ್, ಗ್ಯಾರಂಟಿ ಯೋಜನೆ ಸಮಿತಿ ತಾಲೂಕು ಅಧ್ಯಕ್ಷ ಜಗನ್ನಾಥ ಸೇರಿ ದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಜನಪ್ರತಿನಿಧಿಗಳಿದ್ದರು.

ಶ್ರೀಕ್ಷೇತ್ರಧರ್ಮಸ್ಥಳದಲ್ಲಿ 54ನೇ ವರ್ಷದ ಸಾಮೂಹಿಕ ವಿವಾಹ

106 ವಧು-ವರರು ದಾಂಪತ್ಯಕ್ಕೆ ಪದಾರ್ಪಣೆ

• **ಉಜಿರೆ:** ನಾಡಿನ ಪವಿತ್ರ ಕ್ಷೇತ್ರ ಧರ್ಮಸ್ಥಳದಲ್ಲಿ ಬುಧವಾರ ಸಂಜೆ ಗಂಟೆ 6.40ರ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ, ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ 54ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಸಮಾರಂಭದಲ್ಲಿ 106 ಜತೆ ವಧೂ-ವರರು ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದರು.

ಬುಧವಾರ ಬೆಳಗ್ಗೆ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆಯವರು ಹಾಗೂ ಕುಟುಂಬದವರು ವರನಿಗೆ ಧೋತಿ, ಶಾಲು ಹಾಗೂ ವಧುವಿಗೆ ಸೀರೆ, ಮೊಗುತಿ ಮತ್ತು ರವಿಕೆ ಕಣ ವಿತರಿಸಿದರು.

ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಗಣ್ಯ ಅತಿಥಿಗಳು ಮಂಗಳಸೂತ್ರ ವಿತರಿಸಿದರು. ಗಂಟೆ 6.40 ರ ಗೋಧೂಳಿ ಲಗ್ನ ಸುಮು ಹೂರ್ತದಲ್ಲಿ ವೇದಘೋಷ, ಮಂಗಳವಾದ್ಯ, ಹಾರ ವಿನಿಮಯ, ಮಂತ್ರಾಕ್ಷತೆಯೊಂದಿಗೆ ವಧುವಿಗೆ ಮಂಗಳಸೂತ್ರ ಧಾರಣೆ ಮಾಡಲಾಯಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಮಾತನಾಡಿ, ನೂತನ ದಂಪತಿಗಳು ಪರಸ್ಪರ ನಂಬಿಕೆ, ಪ್ರೀತಿ-ವಿಶ್ವಾಸದೊಂದಿಗೆ ಹೊಂದಾಣಿಕೆಯಿಂದ ಸಾರ್ಥಕ ಜೀವನ ನಡೆಸಬೇಕು ಎಂದು ಸಲಹೆ ನೀಡಿ ಆಶೀರ್ವದಿಸಿದರು. ಧರ್ಮಸ್ಥಳದಲ್ಲಿ ಆರಂಭಿಸಿದ ಉಚಿತ ಸಾಮೂಹಿಕ ವಿವಾಹ ಯೋಜನೆಯನ್ನು ಸರ್ಕಾರ ಹಾಗೂ ಇತರ ಮಠ-ಮಂದಿರಗಳು ಮಾದರಿ ಯಾಗಿ ಸ್ವೀಕರಿಸಿ ಅನುಸರಿಸುತ್ತಿರುವುದಕ್ಕೆ ಅವರು ಸಂತಸ ವ್ಯಕ್ತಪಡಿಸಿದರು. ಬೇರೆ ಕಡೆಗಳಲ್ಲಿ ನಡೆಸುವ ಉಚಿತ ಸಾಮೂಹಿಕ ವಿವಾಹ ಸಮಾರಂಭಕ್ಕೆ ಇನ್ನು ಮುಂದೆ ಧರ್ಮಸ್ಥಳದಿಂದ ಮಂಗಳಸೂತ್ರ ಕೊಡಲಾಗುವುದಿಲ್ಲ ಎಂದು ಹೆಗ್ಗಡೆಯವರು ಪ್ರಕಟಿಸಿದರು. ಮೆಸ್ಕಾಂ ಅಧ್ಯಕ್ಷ ಕೆ.ಹರೀಶ್‌ಕುಮಾರ್ ಶುಭಾಶಂಸನೆ ಮಾಡಿ, ಮದುವೆ ಎಂಬುದು ಪ್ರತಿಯೊಬ್ಬರ ಬದುಕಿನಲ್ಲಿ ಬದಲಾವಣೆಯ ಪರ್ವವಾಗಿದೆ ಎಂದರು. ಶಾಸಕ ಹರೀಶ್ ಪೂಂಜ ಮಾತನಾಡಿ, ಪೂಜ್ಯ ಹೆಗ್ಗಡೆ ದಂಪತಿಯ ಸಾರ್ಥಕ ಬದುಕೇ ಎಲ್ಲರಿಗೂ ಪ್ರೇರಕ ಶಕ್ತಿ ಹಾಗೂ ಮಾರ್ಗದರ್ಶಿಯಾಗಿದೆ ಎಂದು ಹೇಳಿ ನೂತನ ದಂಪತಿಗಳಿಗೆ ಶುಭ ಹಾರೈಸಿದರು.

ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್ , ಹೇಮಾವತಿ ವೀ. ಹೆಗ್ಗಡೆ, ಡಿ. ಹರ್ಷೇಂದ್ರ ಕುಮಾರ್, ಶರ್ಮಿಳಾ ವೇದಿಕೆಯಲ್ಲಿ ಇದ್ದರು. ಬೆಂಗಳೂರಿನಲ್ಲಿರುವ ಕ್ಷೇಮವನದ ಸಿ.ಇ.ಒ. ಶ್ರದ್ಧಾಅಮಿತ್ ಸ್ವಾಗತಿಸಿದರು. ಪೂಜ್ಯ ಹೆಗ್ಗಡೆಯವರ ಆಪ್ತಕಾರ್ಯದರ್ಶಿ ಎ.ವಿ. ಶೆಟ್ಟಿ ಧನ್ಯವಾದವಿತ್ತರು. ಸಂಪತ್ ಕುಮಾರ್ ರೈ ಮತ್ತು ಶ್ರೀನಿವಾಸರಾವ್ ನಿರೂಪಿಸಿದರು.



IN THE COURT OF THE 2nd Addl DISTRICT AND SESSIONS JUDGE AT KOLAR.
P & SC 61/2026.

PETITIONERS : 1. Smt. MANJULAMMA D/o Late Narasimhareddy @ M. Narasimha Reddy & laxmidevamma, W/o Late T.M. Prakash, Aged about 47 Years, R/o: Thotli village, Sugatur Hobli, Kolar Taluk & District.
2. Smt. RADHAMMA D/o Late Narasimhareddy & Laxmidevamma, W/o Thippareddy, Aged about 45 years, R/o Hodali village, Ronur Hobli,. Srinivaspur Taluk, Kolar District.
3. Smt. ROOPA D/o Late Narasimhareddy & Laxmidevamma, W/o A.R. Srirama Reddy, Aged about 41 years, R/o: Athikunte village, Yeldur Hobli, Srinivaspur Taluk, Kolar District.
V/s
RESPONDENT : Nil.

COURT NOTICE TO THE PERSON/S WHOM SO IT CONCERN THROUGH PAPER PUBLICATION UNDER ORDER 05 RULE 20 CPC:

Whereas, the petitioners have filed the above petition under Sec. 276 of Indian Succession Act 1925, with a prayer to pass an order of Probate in respect of Regd. Will, dated, 07/03/2019, Registered vide No. SVP-3-00213-2018-19, Stored in C.D. No. SVPD 166, Book No.3, executed by one Narasimha Reddy @ M. Narasimha Reddy S/o Late Munishamappa resident of Dwarasandra village, Srinivaspur Taluk, Kolar District in favour of petitioners in respect of the petition schedule properties. The said Narasimha Reddy @ M. Narasimha Reddy died **on 28/03/2021.**

Take Notice that, the case has been adjourned for appearance of the person/s who are having any interest over the said property, such person/s are hereby summoned to appear in this Court in person or pleader **on 03 day June of 2026** at 11'o clock, to answer the claim and you are directed to produce on that day all the documents upon which you intend or rely in support of your defense.

Take notice that in default of your appearance on the day above mentioned, the petition will be heard and determined in your absence. Given under my seal and signature on this day 24 of April 2026 at Kolar.

SCHEDULE

Landed properties situated at Gijjgarahalli village, Yeldur Hobli, Srinivaspur Taluk, bg. 1. Sy. Nos.53, measuring 0.17 guntas, bounded on East : Property of Forest, West : Property of Munishamy, North : property of Venkatalakshmamma and South : property of Papamma and Venkataramappa.
2. Sy. No.53, measuring 0.18 guntas, bounded on East : Property of Forest, West : Property of Neeraganti Munishamy, North : property of Reddollu Hanumantharayappa and South : property of Srirama Reddy.
3. Sy. No.57, measuring 0.14.06 guntas, bounded on East : Property of Venkataswamy, West : Govt. Kaluve, North : Road and South : property of Krishnappa.
4. Sy. No.61, measuring 0.10.06 guntas, bounded on : East : Property of own, West : Property of own, North : property of Venkataachalapathiashetty and South : property of Gollolla Krishnappa.
5. Sy. No.10, measuring 0.03.06, bounded on East : Property of Venkataachalapathiashetty, West : Water Tank, North : property of Veeranjappa and South : property of Sanjeevappa.
6. Sy. No.13/2, measuring 0.03.03 guntas, bounded on East : Property of own, west : Water Tank, North : Govt. Kaluve and South : property of Chikkanarasimhiah.
7. Sy. No.13/1, measuring 0.00.12 guntas, bounded on East : Property of own. West : Govt. Tank Bed, North : Property of Venkatamuniyappa and South : property of Hanumuntharayappa.
8. Sy. No.5, measuring 0.20 guntas, bounded on East : Property of Sriramareddy @ Aswatha Reddy, West : Property of own, North : property of Hanumantharayapa and South : Burial Ground.
9. Sy. No.60, measuring 4-00 acres out of it 0.32 guntas.East : Property of Champalli Ramappa, West : Property of Poojappa & Chikkanarasimhappa, North : property of Chokkanahalli Nareppa and South : property Ramakrishna Rao.

BY ORDER OF THE COURT
Chief Administrative Officer, Dist. & Sessions Court, Kolar.
Advocate for petitioner :
K. NATRAJ BABU, Advocate, Kolar.
Date: 1st April-2026

ಮಾನ್ಯ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ
ಪಿ & ಎಸ್.ಸಿ. ಸಂಖ್ಯೆ 64 /2026

[illegible]

ದಿನಾಂಕ : 03-06-2026 [illegible]

ಶೆಡ್ಯೂಲ್

[illegible]

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಆಡಳಿತಾಧಿಕಾರಿ
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ
[illegible] ದಿನಾಂಕ 29-04-2026

ಸಾರ್ವಜನಿಕ ಪ್ರಕಟಣೆ

[illegible] ಓ.ಎಸ್.ಸಂಖ್ಯೆ 709/2026, 714/2026 ಮತ್ತು 715/2026 [illegible] ದಿನಾಂಕ 04.05.2026 [illegible]

ದಿನಾಂಕ 29ನೇ ಏಪ್ರಿಲ್ 2026 [illegible]

[illegible]

ಸಾರ್ವಜನಿಕ ಪ್ರಕಟಣೆ

[illegible] ಓ.ಎಸ್.ಸಂಖ್ಯೆ 577/2026, 590/2026 ಮತ್ತು 591/2026 [illegible] ದಿನಾಂಕ 14.05.2026 [illegible]

ದಿನಾಂಕ 29ನೇ ಏಪ್ರಿಲ್ 2026 [illegible]

[illegible]

ಸಾರ್ವಜನಿಕ ಪ್ರಕಟಣೆ

[illegible] 11.05.1995 [illegible] ದಿನಾಂಕ 04.05.2026 [illegible]

ದಿನಾಂಕ 29ನೇ ಏಪ್ರಿಲ್ 2026 [illegible]

[illegible]

IN THE COURT OF THE JDLR. AT TUMAKURU.
APPEAL. No. 169/2025
Petitioners: Gangadaraiah **-V/s-**
Respondents: DDLR and others
DRAFT PAPER PUBLICATION

Whereas the above appellant has instituted this appeal against the Respondents in the above case the same is posted for appearance of Respondent 4 by name Smt., Gangamma W/o late Kariyanna, aged about 71 years, R/at Bommanhalli, Hebbur Hobli, Tumakuru Taluk and District,

Take notice that you have been made as Respondent No.4 in this appeal and the same is posted for your appearance on 19-06-2026 at 3.00 p.m. before the JDLR at Tumakuru therefore, you are hereby directed to take notice and to appear on the said date, either personally or through an advocate. failing which the case will be heard and determined in your absence.

Given under my hand and seal of this Court 22nd Apr. 2026.

By order of the Court, Sd/- On behalf of the Joint Director of Regional Land Records, Bangalore Division, Bangalore
Advocate for appellant
Sd/- **N. MEENAKSHI** BA, LLB
ADVOCATE, KAR 2031/2005. 1st Floor, SRS Building Civil Bus Stand, Tumkur
Mob.: 9481909379

IN THE COURT OF THE SMALL CAUSES COURT JUDGE AT BANGALORE
S.C No.345/2025

Between:
Union Bank of India,
Yelahanka Branch, No.111, Subbaiah Arcade, Opp Post Office B B Road, Yelahanka Old Town, Bangalore-560064
Represented by its Senior Manager Mr. Kartheek Chittaluru, S/o. Ramesh Reddy Aged about 35 years. ....**Plaintiff**
And:
Mrs. Saraswathi.M
W/o. Mahesh, Aged about 37 years,. R/at No.201, Singanayakanahalli, 1st Street, Old Colony, Yelahanka Bangalore-560064. ....**Defendant**

SUMMONS TO DEFENDANT UNDER ORDER V RULE 20 OF CPC

Whereas the above named Plaintiff has instituted the above suit against the Defendant for recovery of sum of Rs.1,25,710.45/ (Rupees One Lakh Twenty Five Thousand Seven Hundred and Ten Rupees and Forty Five Paisa Only) due as on **07.10.2024** along with future interest @ 11.95% P.A. from 08/10/2024 till the date of repayment and other reliefs.

You are here by summoned to appear before the Small causes Court Judge Bengaluru(SCC-9) in person or by a pleader on **15.06.2026 at 11 A.M.** to answer the same, failing which the suit will be heard and determined ex-parte.

Given under my hand and the seal of the court on this 16 th day of April

BY ORDER OF THE COURT
Assistant Registrar
Small causes. Court Bangalore.

IN THE COURT OF ADDL. SENIOR CIVIL JUDGE JMFC AT KUNIGAL.
O.S No.66/2014.
Plaintiffs : Kamalamma and others.
V/s
Defendant : Krishna and others.
Proposed Defendant No.12: Savithramma, W/o G.Nagaraj, Aged about 40 years, R/at. No.1561, 6th cross, 18th main, Muneshwara Block, Bangalore-560020

NOTICE

Wherefore the plaintiffs have filed the above suit for relief of partition and such other reliefs in respect of schedule property involved in the said suit.

Whereas the Hon'ble court has issued summons to the proposed defendants No.12 through court and by SPAD, but while servicing the summons to the proposed defendants No.12 purposefully not available to the above said facts for service of summons to them. Hence this paper publication is to be published and hearing date fixed on 01.06.2026 and this is the notice to the proposed defendants No.12 to appear either in person nor through Advocate **on 01.06.2026** at about 11.00 A.M. before this Hon'ble court. If the proposed defendants No.12 failed to appear before this Hon'ble court, the matter will be heard ex-parte and pass ex-parte necessary orders.

SUIT SCHEDULE PROPERTY

All the piece and parcel of this agricultural properties in 1) Sy No.69/4 measuring 3 acre 38 guntas and 2) Sy No.69/3 measuring 1 acre 8 guntas both are situated at Jaladhigere Village, Yadiyuru Hobli, Kunigal Taluk and commonly bounded on East Land of Giriyappa S/o Chikka Giriyappa, West: Land of Thimmanna S/o Venkataiah @ Muddaiah, North: Land of Kumbara Elavaiah, South: Land of Chinna S/o Mayappa. Given under my hand and seal of this court on this 29th day of April 2026.

BY ORDER OF COURT
SHERISTEDAR (ADDL.) SENIOR CIVIL JUDGE AND JMFC COURT KUNIGAL.
Advocate for Plaintiff : **H.C.R & Associates, H.C.Rudresh,** Advocate, Dadapeer Layout, Sondekoppa Road, Nelamangala-562123.

IN THE COURT OF THE 1ST ADDL SENIOR CIVIL JUDGE AND CJM AT KOLAR.
OS. NO.25/2024.
PLAINTIFFS : Kadiremma and others.
V/S
DEFENDANTS : Bhulakshmamma and others.

NOTICE UNDER ORDER 5 RULE 20 OF CPC TO Defendant No.4.

DEFENDANT No.4 : Vijayabhaskar S/o A. D. Basappa Major, Permanently residing at, Narasapura village and post, Now residing at, Jayanagara, Kolar.

Whereas, the plaintiff filed this suit against the defendants for partition and separate possession over the suit schedule properties. The Hon'ble court has issued notices and summons to the defendant no.4 to defend their case. But they are intentional evading and avoiding to receive the notice issued by this Hon'ble court. Hence of this the notices has not been served on them. As such you have them by summoned or notice to appear before Hon'ble 1st addl senior civil judge and CJM at Kolar in person or by a pleader **on 6/6/2026** at 11 AM. Take notice that in default of your appearance on the date before mentioned the petition will be heard and determined in your absence.

Given under my hand and seal of the court, on this 28th day of April 2026.

By order of the court.
Shirstedar,
Prl senior civil Judge at Kolar.
Advocate for petitioner :
L. Srinivas, Advocate, Kolar.
Place: Kolar, Dated 28.04.2026.

ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಕೃಷ್ಣರಾಜಪೇಟೆ.
ಅಸಲು ದಾವಾ ಸಂಖ್ಯೆ: 431/2023

[illegible]

-: ಸಾರ್ವಜನಿಕ ಪ್ರಕಟಣೆ :-

[illegible] ದಿನಾಂಕ: 02-06-2026 [illegible]

ಈ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು,
1ನೇ ಅಪರ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೃಷ್ಣರಾಜಪೇಟೆ.
[illegible]

ಸಾರ್ವಜನಿಕ ಪ್ರಕಟಣೆ

[illegible] 12.05.1966 [illegible] ಓ.ಎಸ್.ಸಂಖ್ಯೆ 615/2026 [illegible] ದಿನಾಂಕ 14.05.2026 [illegible]

ದಿನಾಂಕ 29ನೇ ಏಪ್ರಿಲ್ 2026 [illegible]

[illegible]

IN THE COURT OF THE ADDL CIVIL JUDGE & J.M.F.C. AT PAVAGADA.
OS.NO.168/2011.
Plaintiff:-Mohmmed Ekbal Sab & Ors.
VS
Defendants: Sabeera Banu & Ors.
NOTICE TO LRs OF DEFENDANT NO.1 i.e.D1(a) & (b).

Defendant No.1(a) Munsur Alee S/o Abdul Satter, **Defendant No.1(b) Therin Fathima** D/o Abdul Satter, Both are R/at #-24, Mango Garden, Konanakunte Cross, BLF 60062, Bangalore. 560062.

1. Land bearing Sy No.329/1 Measuring 13 acres 37 guntas satiated at Pavagada village, Kasaba Hobli, Pavagada Taluk,

WHEREAS in the above case the plaintiff has filed the above suit against the defendants for declaration and permanent injunction and for such other reliefs with respect to suit schedule property.

The above said case is posted for Notice on Lrs IA and appearance of defendant No.1 (a) and D 1(b)hereby directed to appear before this Hon'ble court **on 12-6-2026** at 11.00 am in person or through counsel, through an authorized agent, failing which your absence will be taken as absent and pass necessary orders and the case will be determined as per law. given under my hand and seal of the court on this day of 29.04.2026 at Pavagada.

By Orderof the Court, CMO, PCJ ANd JMFC Court Pavagada.
Advocate for petitioner : **Thirumalesh. A,** Pavagada. Date : 17.04.2026.

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಆದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಗೌರವಾನ್ವಿತ [illegible] ನ್ಯಾಯಾಲಯ, [illegible]
ಓ.ಎಸ್. ಸಂಖ್ಯೆ 1118/2022

[illegible]

ಸಾರ್ವಜನಿಕ ಪ್ರಕಟಣೆ

[illegible]

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/- ವಿಶೇಷ ಉಪವಿಭಾಗಾಧಿಕಾರಿಗಳು-03,
ತುಮಕೂರು ಉಪವಿಭಾಗ ತುಮಕೂರು
ಮೇಲ್ಮನವಿದಾರರ ಪರ ವಕೀಲರು
ಸಹಿ/- [illegible], ಬಿ.ಎ., ಎಲ್.ಎಲ್.ಬಿ., ವಕೀಲರು, [illegible], ಮೊ.ನಂ.9448175929.

IN THE HON'BLE COURT OF IX ADDL. CITY CIVIL & SESSIONS JUDGE AT BANGALORE
O.S. No. 8260 of 2024 (CCH-05)

BETWEEN : Sri. Gunashekar. R, S/o. Ramachandranaidu Aged about 54 years, Resident of No. 20, Balaji Layout, Near Gulmohar Apartment, Kodigehalli, Bangalore - 560092. ...**PLAINTIFF**
AND : Sri. K.G. Narasimha Murthy and others ...**DEFENDANTS**

PUBLIC NOTICE
SUMMONS TO DEFENDANT NO. 04 and 5

Smt. Sowmya D/o late K. Ramachandra, Aged about 44 years, R/at No. 24, M.C. Layout, 18th Main, Vijayanagar, Bangalore - 560 020. ...**Defendant No. 4**
Smt. Sangeetha D/o late K. Ramachandra, R/at No.20, Binny Layout, Near Pipeline, Vijayanagar, Bangalore - 560 040. ...**Defendant No. 5**

WHEREAS, the Plaintiff have filed the Suit for permanent injunction case against Defendants pending before this Hon'ble Court. The Defendant above named is hereby directed to appear before this Hon'ble Court either in person or through pleader **on the 28th day of July 2026 at 11 am** at **THE COURT OF THE HON'BLE CITY CIVIL AND SESSIONS JUDGE AT BANGALORE,** to defend the above case, failing which the matter will be heard ex-parte.

SUIT SCHEDULE PROPERTY

All that part and parcel of the **Site No.20-A,** carved out of Assessment **Katha No. 44/5, and 31/5 in Ward No. 8,** situated at Kodigehalli Village, Yelahanka Hobli, Bangalore North Taluk measuring **East to West 40 feet and North to South 15 feet total measuring 600 square feet with residential building therein** and bounded on the:- East by : property belong to BABU, West by : 25 feet Road, North by : Site No.20 belong to Jayanthi, South by : Site No.21 belongs to Ramnath Naidu.

Given under my hands and seal of the court, this 25th day of April 2026.

By order of the Court, Senior Sheristedar, City Civil Court, Bengaluru.
Chethan .B, Advocate
No. 61/B, MRK Towers, Second Floor, 10 A Cross, 19th Main Road, 1st Block, Rajajinagar, Bangalore-560010.

ಗೌರವಾನ್ವಿತ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ.
ಪಿ ಅಂಡ್ ಎಸ್.ಸಿ. ಸಂಖ್ಯೆ: 65/2026.

[illegible]

ವಿರುದ್ಧ

ಎದುರುದಾರರು : ಇಲ್ಲ.

[illegible] ದಿನಾಂಕ: 24-10-2019 [illegible] 03.06.2026 [illegible] 29.04.2026 [illegible]

ಶೆಡ್ಯೂಲ್

[illegible]

ನ್ಯಾಯಾಲಯದ ಆದೇಶದ ಮೇರೆಗೆ
Chier Administrative Officer
Prl. District & Sessions Court Kolar.
[illegible] ದಿನಾಂಕ 28-04-2026

ಜಾಹೀರಾತಿಗಾಗಿ ಸಂಪರ್ಕಿಸಿ:
9845438807/
9611755391

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ ಮತ್ತು ಗುಣ), 9ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-09

ಸಂಖ್ಯೆ:ಬೆಂಜಮ/ಮುಂಅ(ವಿನ್ಯಾಸ&ಗುಣ)/ಅಮುಂಅ/ತಾಂಸ/48/2026-27 ದಿನಾಂಕ: 24-04-2026

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ ಹಂತದ ಟೆಂಡರ್ ಪದ್ಧತಿಯಲ್ಲಿ **ಸಕಾನಿಅ (ಬಿಡಬ್ಲ್ಯೂ & ಪಿಎಸ್)-1-2 ಉಪ ವಿಭಾಗದಡಿಯಲ್ಲಿ ಬರುವ ಮಹಾಲಕ್ಷ್ಮಿ ಬಡಾವಣೆ ವಿಧಾನ ಸಭಾ ಕ್ಷೇತ್ರದಲ್ಲಿ ಹಾಲಿ ಇರುವ 6.5 ಇಂಚಿನ ವ್ಯಾಸದ ಕೊಳವೆ ಬಾವಿಗಳನ್ನು ಮರು ಕೊರೆಯುವುದು ಮತ್ತು ಎಲ್ಲಾ ಪರಿಕರಗಳೊಂದಿಗೆ ನಿರ್ಮಾಣ ಮಾಡುವ ಕಾಮಗಾರಿಗಾಗಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗೆ ಇಟ್ಟ ಮೊತ್ತ: **ರೂ.179.49 ಲಕ್ಷಗಳು.** ಇಎಂಡಿ: **ರೂ.2,70,000/-.**

ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ: **14-05-2026ರ ಸಂಜೆ 4:00** ಗಂಟೆಯುವರೆಗೆ. ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **15-05-2026ರ ಸಂಜೆ 4:00 ಗಂಟೆಗೆ.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/-
DIPR/CP/AAPL/RO412/26-27 ಮುಖ್ಯ ಅಭಿಯಂತರರು (ವಿನ್ಯಾಸ ಮತ್ತು ಗುಣ).

IN THE COURT OF THE ASSISTANT COMMISSIONER AT TUMAKURU. R.A. (A) (T) 523/2025.

APPELLANTS: Puttanarasaiah Since dead by LR's Chandramma and others. **- V/S- RESPONDENTS:** The Thasildar Tumakuru Taluku and others.

DRAFT PAPER PUBLICATION

NOTICE TO RESPONDENTS: 3. (a) Ganganna T.L. S/o Late Lakkanna, 69 years. 3. (b) Hanumantharaju S/o Late Lakkanna, 65 years. 3. (c) Veenakshi T.L. D/o Late Lakkanna, W/o Chandrashekhar, 62 years, R/o No.143/16, 2nd Main Road, Marenahalli, Vijayanagara, Bengaluru. 3 (d) Kantharaju S/o Late Lakkanna, 61 years. 3 (e) Nirmalakumari D/o Late Lakkanna, W/o Late Gangasiddaiah, 60 years, R/o No.685, 17th Main, 1 Block, 3rd Stage, Manjunathanagara, Near Guru Sagar Hotel, Bengaluru-560010. 3 (f) Renukaprasad T.L. S/o Late Lakkanna, 58 years. 3 (h) Ramanna Dead by his Lrs. 3 (h) (i) Prema W/o Late Ramanna, 60 years. 3 (h) (ii) Rekha T.R.D/o Late Ramanna, 44 years. 3 (h) (iii) Chandrika. T.R. D/o Late Ramanna, 42 years. 3(h) (iv) Bindu T.r. D/o Late Ramanna, 38 years. 3(h) (v) Ashwini T.R. D/o Late Ramanna 35 years.
Respondents No.3 (a), 3(b), 3(d), 3(f) and R. 3(h)(i) to (v) are R/o Lakkanna Compound, Madhugiri Main Road.
4. Doddamma D/o Late Veerachikkaiah, dead by LR's 4(b) Manjula D/o Doddamma dead by Lrs. 5. Chikkanarasamma D/o Late Veerachikkaiah, W/o Gopalakrishna, 58 years, R/o No.5, Sanjeevappa Galli, Avenue Road, Bangaluru. 6. Lakshmamma D/o late Veerachikkaiah, dead by LR's. 7. Rajashekaraiah S/o Late Lakshmamma, 40 years, R/o Madhugiri Road, Venkateshpura, Opp KGY Mill, Tumakuru. 8. Jayashankar @ Shankarappa S/o Late Lakshmammu, 35 years, R/o Opp Market, Venkateshpura, Madhugiri Road, Tumakuru-6. 11. Jayamma D/o Late Lakshmamma, 28 years, now E/c Madhugiri Road, Venkateshpura, Tumakuru. 12. Lakshmana S/o Late Lakshmamma, dead by LR's. 12. (c) Ranjith S/o Late Lakshmana @ Lakshmana Murthy. 18 years. All R/o Venkateshpura, Siragate, Tumakuru. 13. Doddaramakka W/o Late Veerachikkaiah Dead by Lrs. 13(a) Rajanna S/o Late Veerachikkaiah, dead by his Lrs. 13 (a)(i) Suma D/o Late Rajanna, 45 years, R/o Madhuriri Road, Sira Gate., Tumakuru. 13(b). Suresh S/o Veerachikkaiah, dead his Lrs. 13 (b)(i) Thulasi W/o Late Suresh, 45 years. 13 (b)(ii) Meghana D/o Late Suresh, 22 years. 13(b) (iii) Naveen S/o Late Suresh, 20 years, R/o Madhugiri Roadk Siragate, Tumakuru. 15. Vijayamma W/o Chikkapapaiah dead by LR's. 15 (a) C. Manjunatha S/o Late Chikkapapaiah, Major R/o Agalavadi, Devanahalli, Taluka, Bangaluru District-562110. 17. Driver Narasaiah dead by his Lrs. 17 (a) T.N. Nagaraja S/o Late Driver Narasaiah, 51 years, R/o Madhugiri Road, Venkateshpura, Sira Gate, Tumakuru. 17(c) T.N.Ramesh S/o Late Driver Narasaiah, dead by LR's. 17 (c) (i) Sujith S/o Late T.R. Ramesh, 20 years. Both are R/o Sathyamangala Main Road, Sira Gate, Tumakuru. 18. T.N.Murthy, dead LR's. 18 (a) Lakshmama W/o Late T.N.Murthy, 54 years. 18 (b) Santhosha S/o Late T.N.Murthy, 34 years. 18 (f) Mamatha D/o Late T.N.Murthy, 23 years. All are R/o Sira Gate, Tumakuru. 20. Krishnappa S/o Late Driver Narasaiah dead by his Lrs. 20 (a) Pushpa W/o Late Krishnappa, 64 years. 20 (c) Chandrashekhar, S/o Late Krishnappa, 34 years. All are R/o Near SBI Bank, Sira Gate, Tumakuru City. 20 (e) Lalitha W/o Mahalingaiah, 45 years, R/o Mararuru Ring Road, Mallige Road, 3rd Cross, Tumakuru. 20 (f) Bhagya T.K W/o Yogesh, 41 years, R/o Shambalaha Palya, Sira Gate, Tumakuru.

WHEREAS, the above appellants have preferred the above appeal against the respondents for relief sought in the appeal.

Take notice that you have been made a parties in the above case and the same is posted for your appearance on 02/06/2026 at 03.00 P.M. before, you are here by informed to appear on the said date, failing which the case shall be heard and determined as Ex-parte and case will be continue in your absence.

Given under my hand and seal of this Hon'ble Court, this Day of

By order of this Court, Sd/- **Tahasildar,** Deputy Divisional Officer's Office, Tumakuru Subdivision
Advocate for Appellant,
Sd/- **C.Krishnaiah,** Advocate, 7th ward, Agrahara Chikkapete, Tumakuru Town. Mob: 9880378296

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಶಿವಾಜಿನಗರ ವಿಭಾಗ, ತಿಮ್ಮಯ್ಯ ರಸ್ತೆ, ಬೆಂಗಳೂರು.

ಸಂಖ್ಯೆ: ಬೆಂಕೇಂನಪಾ/ಎಸ್‌ಜೆಎನ್/ಇ-ಪ್ರೊಕ್/03/2026-27 ದಿನಾಂಕ: 29-04-2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ ಇವರು ಕೆಳಕಂಡ ಕಾಮಗಾರಿಗಳಿಗೆ ಬೆಂಗಳೂರು ಕೇಂದ್ರ ನಗರ ಪಾಲಿಕೆ/ಬಿಡಬ್ಲ್ಯೂಎಸ್‌ಎಸ್‌ಬಿ/ಕೆಯುಎಸ್‌ಡಬ್ಲ್ಯೂಎಸ್‌ಡಿಬಿ/ಪಿಆರ್‌ಇಡಿ/ಲೋಕೋಪಯೋಗಿ/ರೈಲ್ವೇಸ್/ಎಂಇಎಸ್/ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಇ-ನೋಂದಾಯಿತ ಅರ್ಹ ಟೆಂಡರ್‌ದಾರರಿಂದ **ಐಟಂ ದರದ** ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	2026-27ನೇ ಸಾಲಿಗೆ ವಸಂತನಗರ ಉಪವಿಭಾಗದ ನಿಯಂತ್ರಣ ಕೊಠಡಿಗೆ ತುರ್ತು ಪರಿಹಾರ ಕಾರ್ಯಾಚರಣಾ ತಂಡ ಒದಗಿಸುವುದು. (4 ತಿಂಗಳಿಗೆ). **ಕಾಮಗಾರಿಯ ಅಂದಾಜು ಮೌಲ್ಯ: ರೂ.6.00 ಲಕ್ಷಗಳು. ಇಎಂಡಿ: ರೂ.15,000/-. ಟೆಂಡರ್ ಪ್ರೊಸೆಸಿಂಗ್ ಶುಲ್ಕ (ರೂ.ಗಳಲ್ಲಿ)** : ಇ-ಪ್ರೊಕ್ ಪೋರ್ಟಲ್ ಪ್ರಕಾರ. **ಗುತ್ತಿಗೆದಾರರ ಅರ್ಹತೆ:** 3ನೇ ದರ್ಜೆ ಹಾಗೂ ಮೇಲ್ಪಟ್ಟು, **ಪೂರ್ಣಗೊಳಿಸುವ ಕಾಲಾವಧಿ:** 4 ತಿಂಗಳು. **ಷರಾ** (ಮೀಸಲಾತಿ ಪ್ರವರ್ಗ): ಸಾಮಾನ್ಯ ಪ್ರವರ್ಗ
2	2026-27ನೇ ಸಾಲಿಗೆ ಶಿವಾಜಿನಗರ ಉಪವಿಭಾಗದ ನಿಯಂತ್ರಣ ಕೊಠಡಿಗೆ ತುರ್ತು ಪರಿಹಾರ ಕಾರ್ಯಾಚರಣಾ ತಂಡ ಒದಗಿಸುವುದು. (4 ತಿಂಗಳಿಗೆ). **ಕಾಮಗಾರಿಯ ಅಂದಾಜು ಮೌಲ್ಯ: ರೂ.6.00 ಲಕ್ಷಗಳು. ಇಎಂಡಿ: ರೂ.15,000/-. ಟೆಂಡರ್ ಪ್ರೊಸೆಸಿಂಗ್ ಶುಲ್ಕ (ರೂ.ಗಳಲ್ಲಿ):** ಇ-ಪ್ರೊಕ್ ಪೋರ್ಟಲ್ ಪ್ರಕಾರ. **ಗುತ್ತಿಗೆದಾರರ ಅರ್ಹತೆ:** 3ನೇ ದರ್ಜೆ ಹಾಗೂ ಮೇಲ್ಪಟ್ಟು, **ಪೂರ್ಣಗೊಳಿಸುವ ಕಾಲಾವಧಿ:** 4 ತಿಂಗಳು. **ಷರಾ** (ಮೀಸಲಾತಿ ಪ್ರವರ್ಗ): ಸಾಮಾನ್ಯ ಪ್ರವರ್ಗ

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ದಿನಾಂಕ **02.05.2026ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **11.05.2026 ಸಂಜೆ 4.00 ಗಂಟೆವರೆಗೆ.** (3) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **12.05.2026 ಸಂಜೆ 4.30 ಗಂಟೆಗೆ.** ಸಾಧ್ಯವಾದಲ್ಲಿ ಮುಂದಿನ ಕೆಲಸದ ದಿನ.
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಎಲ್ಲಾ ಕೆಲಸದ ದಿವಸಗಳಂದು ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸಬಹುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ಶಿವಾಜಿನಗರ ವಿಭಾಗ, ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಕಂಪ್ಲಿ. ಬಳ್ಳಾರಿ ಜಿಲ್ಲೆ.

Email : ka.kampli.tmc@gmail.com website : www.kamplitown.mrc.gov.in

ಕ್ರ.ಸಂ. ಪು.ಸ.ಕಂ/ಅಮೃತ್/ಪಾರ್ಕ/01/2025-26 ದಿನಾಂಕ : 24.04.2026

ಟೆಂಡರ್ ಪ್ರಕಟಣೆ (ಇ-ಪೋರ್ಟಲ್ ಮೂಲಕ)

ಕಂಪ್ಲಿ ಪುರಸಭೆಯ ಅಮೃತ್ 2.0 ಯೋಜನೆ & ಕೆರೆ ಅಭಿವೃದ್ಧಿ ಶುಲ್ಕ ಅನುದಾನದಡಿ ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ ಈ ಕೆಳಕಂಡ ಇಂಡೆಂಟ್‌ಗೆ ಟೆಂಡರ್ ಕರೆಯಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ತಿದ್ದುಪಡಿ ನಿಯಮಗಳು 2001 ರ ಅನ್ವಯ ಕೆ.ಡಬ್ಲ್ಯೂ -1&4 ರ ಸ್ಟ್ಯಾಂಡರ್ಡ್ ಬಿಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಗಳಂತೆ ನೋಂದಾಯಿತ ಮತ್ತು ಪರವಾನಿಗೆ ಪಡೆದ ಅರ್ಹ ಸಿವಿಲ್ ಗುತ್ತೇದಾರರಿಂದ **https://kppp.karnataka.gov.in/** ರಲ್ಲಿ ಟೆಂಡರ್‌ನ್ನು ಸಲ್ಲಿಸಬಹುದಾಗಿರುತ್ತದೆ.

ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **ದಿನಾಂಕ 05.05.2026 ಸಂಜೆ 5.00 ಗಂಟೆವರೆಗೆ**
ಟೆಂಡರ್‌ಗಳನ್ನು ತಾಂತ್ರಿಕ ತೆರೆಯುವ ದಿನಾಂಕ: **ದಿನಾಂಕ 07.05.2026 ಬೆಳಗ್ಗೆ 11.00 ಗಂಟೆಗೆ**

Sl No	Indent No	Estimate Cost (in Lakhs)
01	Development of Somappa park DMA/2025-26/OW/WORK_INDENT50638/CALL-3	104.81
2	DMA/2026-27/OW/WORK_INDENT57507	20.00

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/103
ಸಹಿ/- ಮುಖ್ಯಾಧಿಕಾರಿಗಳು, ಪುರಸಭೆ, ಕಂಪ್ಲಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192-264669
ಇ-ಮೇಲ್: eebcddvg@yahoo.co.in

ಸಂ: ಕಾ.ಇಂ/ಕ.ನೀ.ನಿ.ನಿ/ಭ.ನಾ.ವಿ.5/ದಾ/ಪಿ.ಬಿ-1/2700 ಮ್ಯಾನ್ ಪವರ್/2026-27/125 ದಿನಾಂಕ:27-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ:- 1) **EE/KNNL/No.5/BCD/DVG/PB-1/2700-Man power Supply/2026-27/123, Date: 27-04-2026.**
2) **EE/KNNL/BCD-5/DVG/PB-2/4701JLIS/2026-27/124, Date: 27-04-2026.**

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಉಲ್ಲೇಖಿತ ಟೆಂಡರ್ ಪ್ರಕಟಣೆಗಳಲ್ಲಿ ಲೆಕ್ಕ ಶೀರ್ಷಿಕೆ 2700 ಭದ್ರಾ ಅಡಿಯಲ್ಲಿನ ಮಾನವ ಸಂಪನ್ಮೂಲ ಸರಬರಾಜು ಮಾಡುವ ಕಾಮಗಾರಿಗಳಿಗೆ ಹಾಗೂ ಲೆಕ್ಕ ಶೀರ್ಷಿಕೆ 4701 JLIS ರಡಿಯಲ್ಲಿನ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ-ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಿದ್ದು, ಟೆಂಡರ್‌ಗಿಟ್ಟ ಮೊತ್ತ ರೂ.98.38 ಲಕ್ಷಗಳಿಂದ ರೂ.338.83 ಲಕ್ಷಗಳವರೆಗೆ ಇರುತ್ತದೆ. ಅರ್ಹ ಗುತ್ತಿಗೆದಾರರಿಂದ ಸರ್ವೀಸ್ ಟೆಂಡರ್‌ಗಳನ್ನು ಹಾಗೂ ಕೆಲಸವಾರು ಟೆಂಡರ್‌ಗಳನ್ನು ಕೆಪಿಪಿಪಿ-ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರ ಈ ಕೆಳಕಂಡಂತೆ ದಿನಾಂಕದ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ.

(1) **KNNL/2026-27/SE0431, SE0432, SE0433 & SE0434** ದಿನಾಂಕ: **28.04.2026 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 06-05-2026 ರ ಸಂಜೆ 5.00 ಘಂಟೆವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 07-05-2026 ರಂದು ಸಂಜೆ 5.10 ಘಂಟೆಗೆ ತೆರೆಯಲಾಗುವುದು.**
(2) **KNNL/2025-26/OW/WORK_INDENT4311 & 4312** ದಿನಾಂಕ: **28.04.2026 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 07-05-2026 ರ ಸಂಜೆ 5.00 ಘಂಟೆವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08-05-2026 ರಂದು ಸಂಜೆ 5.10 ಘಂಟೆಗೆ ತೆರೆಯಲಾಗುವುದು.**

ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ದಿನಾಂಕ: 02-05-2026 ರಂದು 4.30 ಘಂಟೆವರೆಗೆ, ಪ್ರಿ ಬಿಡ್ ಸಭೆ ದಿನಾಂಕ: 02-05-2026 ರಂದು ಬೆಳಿಗ್ಗೆ 11.00 ಘಂಟೆಗೆ ಈ ಕೆಳಗೆ ಸಹಿ ಮಾಡಿದ ಕಛೇರಿಯಲ್ಲಿ ನೆರವೇರಿಸಲಾಗುವುದು. ಒಟ್ಟು ಕಾಮಗಾರಿ ಸಂಖ್ಯೆ-6 ಸಂಖ್ಯೆಗಳು

ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ-ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಡಿಐಪಿ/ಡಾವ/52/ ಸಹಿ/- ಕಾರ್ಯಪಾಲಕ ಇಂಜಿನಿಯರ್,
ಕೆಎಸ್‌ಎಂಸಿಎ/2026-27 ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು-1, ಕೆಆರ್‌ಐಡಿಎಲ್, ಬಿಬಿಎಂಪಿ ವಿಭಾಗ, ನಂ.2882, 14ನೇ ಮುಖ್ಯರಸ್ತೆ, 2ನೇ ಹಂತ, ರಾಜಾಜಿನಗರ, ಸುಬ್ರಮಣ್ಯ ನಗರ, ಬೆಂಗಳೂರು-560 010

ನಂ: ಇಇ-1/ಕೆಆರ್‌ಐಡಿಎಲ್/ಬಿಬಿಎಂಪಿ/ಟೆಂಡರ್ ವರ್ಕ್ಸ್/2026-27/64 ದಿನಾಂಕ:29.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು-1 ,ಕೆಆರ್‌ಐಡಿಎಲ್ ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಕೆಪಿಪಿ ಪೋರ್ಟಲ್ ಮೂಲಕ ಅನುಭವವುಳ್ಳ ಗುತ್ತಿಗೆದಾರರು/ ಕಂಪನಿಗಳಿಂದ ಇ-ಟೆಂಡರ್ ಆಹ್ವಾನಿಸಿರುವರು.
ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಸಂಸ್ಥೆಗಳು ಇ-ಆಡಳಿತದ ಸೆಕ್ರೆಟರಿಯೇಟ್‌ನ ಹೊಸ ವೆಬ್‌ಸೈಟ್:**www.kppp.karnataka.gov.in** ಮೂಲಕ ವೀಕ್ಷಿಸಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ಟೆಂಡರ್‌ಗಳನ್ನು ನಿಗದಿತ ದಿನಾಂಕ ಮತ್ತು ಸಮಯದೊಳಗೆ ವಿದ್ಯುನ್ಮಾನ ವಿಧಾನದಲ್ಲಿ ಸಲ್ಲಿಸತಕ್ಕದ್ದು, ಕೆಪಿಪಿಪಿ ಸಹಾಯವಾಣಿ ಸಂಖ್ಯೆ: +91 9240214000/+91 9240214001.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1	ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ 179 ರ ಮಂಗಮ್ಮನಪಾಳ್ಯ ಮತ್ತು ಸುತ್ತಮುತ್ತಲಿನ ಅಲ್ಪಸಂಖ್ಯಾತ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ನೀರು ಸರಬರಾಜು ಮತ್ತು ಇತರೆ ಸಂಬಂಧಿತ ಕಾಮಗಾರಿಗಳು.	757.96	11.37
2	ಶಾಂತಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಾಂತಿನಗರ ಮತ್ತು ಆಸ್ಟಿನ್ ಟೌನ್ ವಾರ್ಡ್‌ನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ನೀರು ಸರಬರಾಜು ಮತ್ತು ಇತರೆ ಸಂಬಂಧಿತ ಕಾಮಗಾರಿಗಳು.	757.88	11.37
3	ಶಾಂತಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವನ್ನಾರಪೇಟೆ ಮತ್ತು ನೀಲಸಂದ್ರ ವಾರ್ಡ್‌ನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ನೀರು ಸರಬರಾಜು ಮತ್ತು ಇತರೆ ಸಂಬಂಧಿತ ಕಾಮಗಾರಿಗಳು.	757.90	11.37

ವಿಚಾರಣೆಗೆ ಕೊನೆಯ ದಿನಾಂಕ: **18.05.2026, 14.00 ಗಂಟೆವರೆಗೆ**
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **18.05.2026, 16.00 ಗಂಟೆ ವರೆಗೆ**
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.05.2026, 16.00 ಗಂಟೆ**
ಆರ್ಥಿಕ ಬಿಡ್ ತೆರೆಯುವ ದಿನಾಂಕ : **25.05.2026, 16.00 ಗಂಟೆ**

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಕಾರ್ಯನಿರ್ವಾಹಕ ಅಭಿಯಂತರರು -1
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
ದೂ: 93801 34784/94480 51646
ಇ-ಮೇಲ್: ee1bbmpwest@kridl.net
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು-1, ಬಿಬಿಎಂಪಿ, ಕೆಆರ್‌ಐಡಿಎಲ್, ಬೆಂಗಳೂರು

ಜಿಲ್ಲಾ ಪಂಚಾಯತ್ ರಾಯಚೂರು
ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ ರಾಯಚೂರು ಜಿಲ್ಲೆ

"ಡಾ.ಬಿ.ಆರ್.ಅಂಬೇಡ್ಕರ್ & ಡಾ.ಬಾಬು ಜಗಜೀವನ ರಾಮ್ ಭವನ" ರಂಗಮಂದಿರ ಹಿಂದುಗಡೆ ರಾಯಚೂರು-584101 ಇ-ಮೇಲ್ ವಿಳಾಸ: dsworchr315@gmail.com & ddswdraichur@gmail.com ದೂರವಾಣಿ ಸಂ: 08532 231091

ಸಂ:ಉನಿ/ಸಕಇರಾ/ಸಿಬ್ಬಂದಿ/ಡಿ-ಗ್ರೂಪ್/ಇ-ಟೆಂಡರ್/ಸಿಆರ್-1/2026-27 ದಿನಾಂಕ:28-04-2026

:: ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ::

ವಿಷಯ:-2026-27 ನೇ ಸಾಲಿಗೆ ರಾಯಚೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಕಛೇರಿ/ಸಂಸ್ಥೆಗಳಲ್ಲಿ ಖಾಲಿ ಇರುವ ಗ್ರೂಪ್-ಸಿ ಮತ್ತು ಗ್ರೂಪ್-ಡಿ ನೌಕರರನ್ನು ಹೊರಸಂಪನ್ಮೂಲ ಸಂಸ್ಥೆಯಿಂದ ಪಡೆಯಲು ಇ-ಟೆಂಡರ್ ಮೂಲಕ ಆಹ್ವಾನಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026-27ನೇ ಸಾಲಿಗೆ ರಾಯಚೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಕಚೇರಿಗಳಲ್ಲಿ ಖಾಲಿ ಇರುವ ಗ್ರೂಪ್-ಸಿ ಕಂಪ್ಯೂಟರ್ ಆಪರೇಟರ್‌ಗಳು/ವಾಹನಾ ಚಾಲಕರು ಮತ್ತು ಗ್ರೂಪ್-ಡಿ ಸಿಬ್ಬಂದಿಯವರು ಹಾಗೂ ಇಲಾಖೆಯ ಅಧೀನದಲ್ಲಿ ಬರುವ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ, ವಸತಿ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು ಮತ್ತು ರಾತ್ರಿ ಕಾವಲುಗಾರರ ಹುದ್ದೆಗಳನ್ನು ತುಂಬಲು ಹೊರ ಸಂಪನ್ಮೂಲ ಸಂಸ್ಥೆಯಿಂದ ಸಿಬ್ಬಂದಿಗಳನ್ನು ಹೊರಸಂಪನ್ಮೂಲ ಏಜೆನ್ಸಿಯಿಂದ 2026-27ನೇ ಸಾಲಿಗೆ ಸೇವೆ ಪಡೆಯಲು ಕರ್ನಾಟಕ ಪಾರದರ್ಶಕ (KTPP) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ಇ-ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಇವರಿಂದ ನೋಂದಾಯಿಸಿದ ಅರ್ಹ ಹಾಗೂ ಅಂಗೀಕೃತ ಏಜೆನ್ಸಿಗಳು ಇ-ಟೆಂಡರ್ ನಲ್ಲಿ ಭಾಗವಹಿಸಬಹುದು. ಇ-ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಸಂ: ಉನಿ/ಸಕಇರಾ/ಸಿಬ್ಬಂದಿ/ಡಿ-ಗ್ರೂಪ್/ಇ-ಟೆಂಡರ್/ಸಿಆರ್-1/ 2026-27 ದಿನಾಂಕ:28-04-2026 **2) ಟೆಂಡರ್‌ಗಿಟ್ಟ ಅಂದಾಜು ಮೊತ್ತ:** ರೂ.9,48,51,372/-ಗಳು **3) ಇಎಂಡಿ ಮೊತ್ತ:** ರೂ.14,22,771/- **4) e-portal ಮೂಲಕ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಪ್ರಾರಂಭ ಮತ್ತು ಅಂತಿಮ ದಿನಾಂಕ ಮತ್ತು ಸಮಯ:** 28-04-2026 ರಿಂದ ದಿ: 27-05-2026 ರವರೆಗೆ ಸಂಜೆ 5.30 ಗಂಟೆಯೊಳಗೆ. **5) ಪೂರ್ವಬಾವಿ ಸಭೆ ದಿನಾಂಕ, ಸಮಯ & ಸ್ಥಳ** :19-05-2026 ಬೆಳಿಗ್ಗೆ 11-00 ಗಂಟೆ ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ ರಾಯಚೂರು (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) **6) e-portal ನ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ** ದಿ:29-05-2026 ಬೆಳಿಗ್ಗೆ 11-00 ಗಂಟೆ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) **7) ತಾಂತ್ರಿಕ ಲಕೋಟೆ ದಾಖಲಾತಿ ಪರಿಶೀಲನೆ ದಿನಾಂಕ ಮತ್ತು ಸ್ಥಳ:** 08-06-2026 ಬೆಳಿಗ್ಗೆ 11-00 ಗಂಟೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ರಾಯಚೂರು (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) **8) e-portal ನ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ:** 11-06-2026 ರ ಬೆಳಿಗ್ಗೆ 11-00 ಗಂಟೆ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) **9) ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ:** ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ ರಾಯಚೂರು - 08532-231091 ಇ-ಮೇಲ್ dsworchr315@gmail.com & ddswdraichur@gmail.com

ಸಹಿ/- ಉಪನಿರ್ದೇಶಕರು
DIP/RCR/47KSMCA/49/2026-27 ಸಮಾಜ ಕಲ್ಯಾಣ ಇಲಾಖೆ ರಾಯಚೂರು



ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿಯ ಕಾಶಿ ವಿಶ್ವನಾಥ ದೇವಾಲಯಕ್ಕೆ ಭೇಟಿ ನೀಡಿದ ವೇಳೆ ತ್ರಿಶೂಲ ಮತ್ತು ಡಮರು ಹಿಡಿದುಕೊಂಡಿರುವ ಕ್ಷಣ.

ಅಭಿವೃದ್ಧಿಗೆ ಹೊಸ ಜೀವನಾಡಿ

ಹರ್ದೋಯಿ/ಲಕ್ನೋ: ಪರಿವರ್ತನಾತ್ಮಕ ಮೂಲಸೌಕರ್ಯ ಯೋಜನೆಯಾಗಿರುವ ಗಂಗಾ ಎಕ್ಸ್‌ಪ್ರೆಸ್‌ವೇ ಉತ್ತರಪ್ರದೇಶದ ಅಭಿವೃದ್ಧಿಗೆ ಹೊಸ ಜೀವನಾಡಿ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

ಮೀರತ್‌ನ್ನು ಪ್ರಯಾಗರಾಜ್‌ಗೆ ಸಂಪರ್ಕಿಸುವ ಗಂಗಾ ಎಕ್ಸ್‌ಪ್ರೆಸ್ ವೇಗೆ ಚಾಲನೆ ನೀಡಿ ಮಾತನಾಡಿ, ಸಹಸ್ರಾರು ವರ್ಷಗಳಿಂದ ಗಂಗಾ ಮಾತೆ ಉತ್ತರ ಪ್ರದೇಶ ಮತ್ತು ಇಡೀ ರಾಷ್ಟ್ರದ ಜೀವನಾಡಿಯಾಗಿರುವಂತೆ, ಇದೇ ಗಂಗೆಯ ಸಮೀಪದಿಂದ ಹಾದು ಹೋಗುವ ಎಕ್ಸ್‌ಪ್ರೆಸ್‌ವೇಯು ಆಧುನಿಕ ಪ್ರಗತಿ ಯುಗದಲ್ಲಿ ಬೆಳವಣಿಗೆಯ ಹೊಸ ಇಂಜಿನ್ ಆಗಲಿದೆ ಎಂದರು.

ಎಕ್ಸ್‌ಪ್ರೆಸ್‌ವೇ ವ್ಯಾಪಾರ, ಕೃಷಿ, ಲಾಜಿಸ್ಟಿಕ್ಸ್ ಉದ್ದಿಮೆ ರಂಗಗಳಲ್ಲಿ ಹೊಸ ಅವಕಾಶಗಳ ಸೃಜಿಸಲಿದೆ. ಇದೊಂದು ಹೈಸ್ಪೀಡ್ ರೋಡ್ ಅಷ್ಟೇ ಅಲ್ಲ, ಹೊಸ ಅವಕಾಶಗಳು, ಹೊಸ ಕನಸುಗಳು ಮತ್ತು ಹೊಸ ಸಾಧ್ಯತೆಗಳಿಗೆ ಗೇಟ್‌ವೇ ಆಗಿದೆ. ಸುಧಾರಿತ ಲಾಜಿಸ್ಟಿಕ್‌ಗಳು, ಮಾರುಕಟ್ಟೆ ಅವಕಾಶಗಳು ರೈತರ ಆದಾಯ ವರ್ಧನೆಗೆ ಪೂರಕವಾಗಲಿದೆ.

ಉತ್ಪಾದನಾ ರಂಗ, ಸೆಮಿಕಂಡಕ್ಟರ್‌ಗಳು, ರಕ್ಷಣಾ ಉತ್ಪಾದನಾ ರಂಗ ಮತ್ತು ಉದಯೋನ್ಮುಖ ತಂತ್ರಜ್ಞಾನ ರಂಗಗಳಲ್ಲಿ ಹೂಡಿಕೆಗಳ ಮುಖೇನ ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವ ನಿಟ್ಟಿನಲ್ಲಿ ಹೆಜ್ಜೆ ಹಾಕಿರುವ ಉತ್ತರ ಪ್ರದೇಶದ ಬೃಹತ್ ಆರ್ಥಿಕ ಮಹತ್ವಾಕಾಂಕ್ಷೆಯ ಸಾಕಾರಕ್ಕೆ ಪ್ರಸ್ತುತ ಯೋಜನೆಯು ಪೂರಕವಾಗಲಿದೆ ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದರು.

ಉತ್ತರಪ್ರದೇಶವೀಗ 5 ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ಸಹಿತ 21 ವಿಮಾನ ನಿಲ್ದಾಣಗಳನ್ನು ಒಳಗೊಂಡಿದೆ. ಸದ್ಯವೇ ತಲೆ ಎತ್ತಲಿರುವ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಎಕ್ಸ್‌ಪ್ರೆಸ್‌ವೇ ಕಾರಿಡಾರ್‌ಗೆ ಸಂಬಂಧಪಟ್ಟಂತೆ ಸಂಪರ್ಕ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಿದೆ ಎಂದರು. ಉತ್ತರಪ್ರದೇಶದ ಕೈಗಾರಿಕಾ ಬೆಳವಣಿಗೆ ಭಾರತದ ಪಾಲಿಗೆ ನಿರ್ಣಾಯಕ ಬಲವಾಗಿ ಪರಿಣಮಿಸಿದೆ. ಬ್ರಹ್ಮೋಸ್ ಕ್ಷಿಪಣಿಗಳಂತಹ ಕ್ಷಿಪಣಿ ತಯಾರಿ ಸಹಿತ ರಾಜ್ಯದ ರಕ್ಷಣಾ ಕಾರಿಡಾರ್‌ನ ಸಾಧನೆ ಗಮನಾರ್ಹವೆಂದು ಮೋದಿ ಪ್ರಶಂಸಿಸಿದರು.

ತ.ನಾಡಿನಲ್ಲಿ ಡಿಎಂಕೆ, ಕೇರಳದಲ್ಲಿ ಯುಡಿಎಫ್, ಪುದುಚೇರಿಯಲ್ಲಿ ಎನ್‌ಡಿಎಗೆ ಅಧಿಕಾರ

ಬಿಜೆಪಿ ತೆಕ್ಕೆಗೆ ಬಂಗಾಳ, ಅಸ್ಸಾಂ

ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಚುನಾವಣೆ ಮುಗಿದಿದ್ದು, ಮೇ 4ರಂದು ಅಧಿಕೃತವಾಗಿ ಫಲಿತಾಂಶ ಹೊರಬೀಳಲಿದೆ. ಅದಕ್ಕೂ ಮುನ್ನ ಮತದಾನೋತ್ತರ ಸಮೀಕ್ಷೆಗಳ ಭವಿಷ್ಯ ಬಹಿರಂಗವಾಗಿದ್ದು, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ. ತಮಿಳುನಾಡಿನಲ್ಲಿ ಡಿಎಂಕೆ ಮೈತ್ರಿಕೂಟ ಮತ್ತೆ ಅಧಿಕಾರಕ್ಕೆ ಬರಲಿದೆ. ಆದರೆ, ಕೇರಳದಲ್ಲಿ ಈ ಬಾರಿ ಆಡಳಿತಾರೂಢ ಎಲ್‌ಡಿಎಫ್‌ಗೆ ಸೋಲಾಗಲಿದ್ದು, ಯುಡಿಎಫ್ ಗೆಲುವು ಸಾಧಿಸಲಿದೆ ಎಂದು ಸಮೀಕ್ಷೆಗಳು ಭವಿಷ್ಯ ನುಡಿದಿವೆ.



ಪ.ಬಂಗಾಳ

ದೇಶದ ಗಮನ ಸೆಳೆದಿರುವ ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಹಲವು ಸಮೀಕ್ಷೆಗಳು ಹೇಳಿವೆ. ಆಡಳಿತಾರೂಢ ಟಿಎಂಸಿ ನಾಲ್ಕನೇ ಬಾರಿಗೆ ಅಧಿಕಾರಕ್ಕೇರುವ ಕನಸು ನುಚ್ಚುನೂರಾಗಲಿದೆ ಎಂದು ಅಂದಾಜಿಸಲಾಗಿದೆ.





ಪೋಲ್ ಆಫ್ ಎಕ್ಸಿಟ್
ಬಿಜೆಪಿ- 143
ಟಿಎಂಸಿ- 144
ಕಾಂಗ್ರೆಸ್- 5
ಪಿ ಮಾರ್ಕ್
ಬಿಜೆಪಿ- 150-175
ಟಿಎಂಸಿ- 118-138
ಕಾಂಗ್ರೆಸ್- ಸಿಪಿಐ- 0
ಮ್ಯಾಟ್ರೀಜ್
ಬಿಜೆಪಿ- 146-161
ಟಿಎಂಸಿ- 125-140
ಕಾಂಗ್ರೆಸ್- ಸಿಪಿಐ- 0
ಪೀಪಲ್ಸ್ ಪಲ್ಸ್
ಬಿಜೆಪಿ- 95-110
ಟಿಎಂಸಿ- 178-189
ಕಾಂಗ್ರೆಸ್- 1-3
ಚಾಣಕ್ಯ ಸ್ಟ್ರಾಟರ್ಜಿ
ಬಿಜೆಪಿ- 150-160
ಟಿಎಂಸಿ- 130-140
ಕಾಂಗ್ರೆಸ್- ಸಿಪಿಐ- 0
ಪೋಲ್ ಡೈರಿ
ಬಿಜೆಪಿ- 142-171
ಟಿಎಂಸಿ- 99-127
ಕಾಂಗ್ರೆಸ್- 3-5
ಸಿಪಿಐ- 2-3

ಕೇರಳ

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸಿಪಿಐಎಂ ನೇತೃತ್ವದ ಎಲ್‌ಡಿಎಫ್ ಅನ್ನು ಸೋಲಿಸಿ ಅಧಿಕಾರಕ್ಕೆ ಬರಲಿದೆ. ಕಾಂಗ್ರೆಸ್‌ಗೆ ಇದು ಆಶಾಭಾವನೆ ಮೂಡಿಸಿದರೆ, ಎಡಪಕ್ಷಗಳಿಗೆ ನಿರಾಸೆ ಮೂಡುವ ಸಾಧ್ಯತೆ ಇದೆ.

ಆ್ಯಕ್ಸಿಸ್ ಮೈ ಇಂಡಿಯಾ
ಎಲ್‌ಡಿಎಫ್- 49-62
ಯುಡಿಎಫ್- 78-90
ಬಿಜೆಪಿ ಮೈತ್ರಿ- 0-3
ಪೋಲ್ ಆಫ್ ಎಕ್ಸಿಟ್
ಎಲ್‌ಡಿಎಫ್- 90
ಯುಡಿಎಫ್- 77
ಬಿಜೆಪಿ ಮೈತ್ರಿ- 2
ಪಿ-ಮಾರ್ಕ್
ಎಲ್‌ಡಿಎಫ್- 62-69
ಯುಡಿಎಫ್- 71-79
ಬಿಜೆಪಿ ಮೈತ್ರಿ- 1-4
ಮ್ಯಾಟ್ರೀಜ್
ಎಲ್‌ಡಿಎಫ್- 60-65
ಯುಡಿಎಫ್- 70-75
ಬಿಜೆಪಿ ಮೈತ್ರಿ- 3-5
ಪೀಪಲ್ಸ್ ಪಲ್ಸ್
ಎಲ್‌ಡಿಎಫ್- 55-65
ಯುಡಿಎಫ್- 75-85
ಬಿಜೆಪಿ ಮೈತ್ರಿ- 0-3



ಅಸ್ಸಾಂ

ಅಸ್ಸಾಂನಲ್ಲಿ ಸಿಎಂ ಹಿಮಂತ ಬಿಸ್ವಾ ಶರ್ಮಾ ಅವರ ನೇತೃತ್ವದಲ್ಲಿ ಮತ್ತೊಮ್ಮೆ ಭರ್ಜರಿಯಾಗಿ ಬಿಜೆಪಿ ಅಧಿಕಾರಕ್ಕೆ ಬರಲಿದೆ.



ಆ್ಯಕ್ಸಿಸ್ ಮೈ ಇಂಡಿಯಾ
ಬಿಜೆಪಿ ಮೈತ್ರಿ- 88-100
ಕಾಂಗ್ರೆಸ್? ಮೈತ್ರಿ- 24-36
ಇತರೆ- 0-3
ಪೋಲ್ ಆಫ್ ಎಕ್ಸಿಟ್
ಬಿಜೆಪಿ ಮೈತ್ರಿ- 88
ಕಾಂಗ್ರೆಸ್ ಮೈತ್ರಿ- 27
ಇತರೆ- 6
ಜೆಪಿಸಿ ಸಮೀಕ್ಷೆ
ಬಿಜೆಪಿ ಮೈತ್ರಿ- 88-101
ಕಾಂಗ್ರೆಸ್ ಮೈತ್ರಿ- 23-33
ಇತರೆ- 2-5
ಪಿ- ಮಾರ್ಕ್
ಬಿಜೆಪಿ ಮೈತ್ರಿ- 82-94
ಕಾಂಗ್ರೆಸ್ ಮೈತ್ರಿ- 30-40
ಇತರೆ- 1-5
ಪೀಪಲ್ಸ್ ಪಲ್ಸ್
ಬಿಜೆಪಿ ಮೈತ್ರಿ- 68-72
ಕಾಂಗ್ರೆಸ್ ಮೈತ್ರಿ- 22-26
ಇತರೆ- 7-15
ಪೋಲ್ ಡೈರಿ
ಕಾಂಗ್ರೆಸ್ ಮೈತ್ರಿ- 15-26
ಬಿಜೆಪಿ ಮೈತ್ರಿ- 86-101
ಇತರೆ- 3-7

ಪುದುಚೇರಿ

ಆ್ಯಕ್ಸಿಸ್ ಮೈ ಇಂಡಿಯಾ
ಬಿಜೆಪಿ ಮೈತ್ರಿ- 16-20
ಕಾಂಗ್ರೆಸ್ ಮೈತ್ರಿ- 6-8
ಇತರೆ 3-7
ಪೋಲ್ ಆಫ್ ಎಕ್ಸಿಟ್
ಬಿಜೆಪಿ ಮೈತ್ರಿ- 17
ಕಾಂಗ್ರೆಸ್ ಮೈತ್ರಿ- 9
ಇತರೆ- 3

ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಈಗಿರುವ ಎನ್‌ಡಿಎ ಸರ್ಕಾರವೇ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬುದು ಸಮೀಕ್ಷೆಗಳ ಭವಿಷ್ಯ.



ಪೀಪಲ್ಸ್ ಪಲ್ಸ್ ಸಮೀಕ್ಷೆ
ಬಿಜೆಪಿ ಮೈತ್ರಿ- 16-19
ಕಾಂಗ್ರೆಸ್ ಮೈತ್ರಿ- 10-12
ಇತರೆ 1-2 ಸ್ಥಾನ

ತಮಿಳುನಾಡು

ತಮಿಳುನಾಡಿನಲ್ಲಿ ಸಿಎಂ ಎಂ.ಕೆ. ಸ್ಟಾಲಿನ್ ನೇತೃತ್ವದಲ್ಲಿ ಡಿಎಂಕೆ ಮತ್ತೆ ಅಧಿಕಾರಕ್ಕೆ ಬರಲಿದೆ. ದೊಡ್ಡ ಮಟ್ಟದಲ್ಲಿ ಹವಾ ಎಬ್ಬಿಸಿದ್ದ ನಟ ವಿಜಯ್ ಅವರ ಟಿವಿಕೆ ಪಕ್ಷವು ಸಾಧಾರಣ ಸಾಧನೆ ಮಾಡಲಿದೆ.



ಪೋಲ್ ಆಫ್ ಎಕ್ಸಿಟ್
ಡಿಎಂಕೆ ಮೈತ್ರಿ- 137
ಎಐಡಿಎಂಕೆ ಮೈತ್ರಿ -75
ಟಿವಿಕೆ- 17
ಪಿ-ಮಾರ್ಕ್
ಡಿಎಂಕೆ ಮೈತ್ರಿ- 125-145
ಎಐಡಿಎಂಕೆ ಮೈತ್ರಿ- 65-85
ಟಿವಿಕೆ- 16-26
ಮ್ಯಾಟ್ರೀಜ್
ಡಿಎಂಕೆ ಮೈತ್ರಿ- 122-132
ಎಐಡಿಎಂಕೆ ಮೈತ್ರಿ- 87-110
ಟಿವಿಕೆ- 10-12
ಪೀಪಲ್ಸ್ ಪಲ್ಸ್
ಡಿಎಂಕೆ ಮೈತ್ರಿ- 125-145
ಎಐಡಿಎಂಕೆ ಮೈತ್ರಿ- 65-80
ಟಿವಿಕೆ- 18-24
ಚಾಣಕ್ಯ ಸ್ಟ್ರಾಟರ್ಜಿ
ಡಿಎಂಕೆ ಮೈತ್ರಿ- 145-160
ಎಐಡಿಎಂಕೆ ಮೈತ್ರಿ- 50-65
ಟಿವಿಕೆ-0

ಬಂಗಾಳದಲ್ಲಿ ಶೇ.92 ದಾಖಲೆ ಮತ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಎರಡನೇ ಹಾಗೂ ಅಂತಿಮ ಹಂತದಲ್ಲಿ ಸುಮಾರು ಶೇ.91.66 ಮತದಾನವಾಗಿದೆ. ಮೊದಲ ಹಂತದಲ್ಲಿ ಶೇ.93.19 ಮತದಾನವಾಗಿತ್ತು. ಆ ಮೂಲಕ ಒಟ್ಟಾರೆ ಎರಡೂ ಹಂತಗಳಲ್ಲಿ ಸುಮಾರು ಶೇ.92.47 ದಾಖಲೆಯ ಮತದಾನವಾಗಿದೆ. ಇದು ಸ್ವಾತಂತ್ರ್ಯಾನಂತರದ ರಾಜ್ಯದ ಇತಿಹಾಸದಲ್ಲೇ ಅತ್ಯಧಿಕ ಮತದಾನವೆಂದು ಚುನಾವಣಾ ಆಯೋಗ ತಿಳಿಸಿದೆ.

ಈ ಚುನಾವಣೆ ಮಮತಾ ಬ್ಯಾನರ್ಜಿ ಅವರ ಆಡಳಿತ ಮುಂದುವರಿಯುತ್ತದೆಯೇ ಅಥವಾ ಬಿಜೆಪಿ ಪ್ರಾಬಲ್ಯ ಪಡೆಯುತ್ತದೆಯೇ ಎಂಬುದನ್ನು ನಿರ್ಧರಿಸುವ ಮಹತ್ವದ ಕದನವಾಗಿದೆ. ವಿಶೇಷವಾಗಿ ದಕ್ಷಿಣ ಬಂಗಾಳದ 142 ಕ್ಷೇತ್ರಗಳಲ್ಲಿ ನಡೆದ ಮತದಾನವು ರಾಜಕೀಯವಾಗಿ ನಿರ್ಣಾಯಕವಾಗಿದ್ದು, ಕೋಲ್ಕತ್ತಾ ಸೇರಿದಂತೆ ಹಲವು ಪ್ರಮುಖ ಪ್ರದೇಶಗಳಲ್ಲಿ ಉತ್ಸಾಹಭರಿತ ಮತದಾನ ಕಂಡುಬಂದಿತು. ಭವಾನಿಪುರ ಕ್ಷೇತ್ರದಲ್ಲಿ ಮಮತಾ ಬ್ಯಾನರ್ಜಿ ಮತ್ತು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ನಡುವಿನ ಸ್ಪರ್ಧೆ ವಿಶೇಷ ಗಮನ ಸೆಳೆದಿತು.

ಈ ಕ್ಷೇತ್ರದಲ್ಲಿ ಶೇ.87 ಮತದಾನ ದಾಖಲಾಗಿದ್ದು, ಹಿಂದಿನ ಚುನಾವಣೆಗೆ ಹೋಲಿಸಿದರೆ ಹೆಚ್ಚಾಗಿದೆ. ಇಬ್ಬರೂ ನಾಯಕರು ಪರಸ್ಪರ ಆರೋಪ-ಪ್ರತ್ಯಾರೋಪಗಳನ್ನು ಮಾಡುತ್ತಾ, ಚುನಾವಣೆಯ ನಿಷ್ಠೆ ಮತ್ತು ಪಾರದರ್ಶಕತೆ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ರಾಜ್ಯದ ವಿವಿಧ ಭಾಗಗಳಲ್ಲಿ ಕೆಲವು ಉದ್ವಿಗ್ನ ಘಟನೆಗಳು, ಘರ್ಷಣೆಗಳು ನಡೆದಿದ್ದರೂ, ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಇದು ಕಡಿಮೆ ಹಿಂಸಾತ್ಮಕವಾಗಿತ್ತು.

ಇವಿಎಂಗೆ ಟೇಪ್; ಸತ್ಯವಾದರೆ ಮರು ಮತದಾನ: ಇವಿಎಂಗಳಲ್ಲಿ ಟೇಪ್ ಅಥವಾ ಮಸಿ ಬಳಸಿ ತೊಂದರೆ ಮಾಡಲಾಗಿದೆ ಎಂಬ ಆರೋಪಗಳು ಸತ್ಯವೆಂದು ತೋರಿದರೆ ಆ ಮತಗಟ್ಟೆಗಳಲ್ಲಿ ಮರು ಮತದಾನ ನಡೆಸಲಾಗುವುದು ಎಂದು ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾಧಿಕಾರಿ ಮನೋಜ್ ಅಗರ್ವಾಲ್ ತಿಳಿಸಿದ್ದಾರೆ.

ಕಿರುಸುದ್ದಿ

ಬಸ್ ಅಪಘಾತ: ಆರು ಮಂದಿ ಸಾವು

ಗಾಂಧಿನಗರ: ಅಹಮದಾಬಾದ್-ಉದಯಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಸಗಿ ಬಸ್ ಇಕೋ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಆರು ಮಂದಿ ಮೃತಪಟ್ಟಿದ್ದು, ಎಂಟು ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಗಂಭೋಯಿ ಮತ್ತು ಹಿಮ್ಮತ್‌ನಗರ ಸಿವಿಲ್ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ. ಜಿಲ್ಲೆಯ ಹಿಮ್ಮತ್‌ನಗರದ ಜವಾನ್‌ಗಢ್ ಪಾಟಿಯಾದಲ್ಲಿ ವೇಗವಾಗಿ ಬಂದ ಖಾಸಗಿ ಬಸ್, ಹಿಂದಿನಿಂದ ಇಕೋ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ.

ರಾಣಾ ಪೌರತ್ವ ವಾಪಸ್: ಪ್ರಕ್ರಿಯೆ ಆರಂಭಿಸಿದ ಕೆನಡಾ

ಒಟ್ಟಾವಾ: 26/11ರ ಮುಂಬೈ ಭಯೋತ್ಪಾದಕ ದಾಳಿ ಮಾಸ್ಟರ್ ಮೈಂಡ್ ತಹ್ವೂರ್ ಹುಸೇನ್ ರಾಣಾ ಅವರ ಪೌರತ್ವವನ್ನು ಹಿಂಪಡೆಯುವ ಪ್ರಕ್ರಿಯೆಯನ್ನು ಕೆನಡಾ ಸರ್ಕಾರ ಪ್ರಾರಂಭಿಸಿದೆ. ಈ ಮೂಲಕ ಹಿಂದಿನ ಜಸ್ಟಿನ್ ಟ್ರುಡೊ ಸರ್ಕಾರದ ಅವಧಿಯಲ್ಲಿ ಹದಗೆಟ್ಟಿದ್ದ ಭಾರತದೊಂದಿಗಿನ ಸಂಬಂಧಗಳನ್ನು ಮರುಹೊಂದಿಸಲು ಕೆನಡಾ ಪ್ರಯತ್ನಿಸುತ್ತಿದೆ. ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಭಾರತಕ್ಕೆ ಭೇಟಿ ನೀಡುವ ಮುನ್ನ ಈ ಕ್ರಮ ಕೈಗೊಳ್ಳಲಾಗಿದೆ.

ಭಾರತಕ್ಕೆ ಇಂಧನ ರಫ್ತು ಹೆಚ್ಚಳಕ್ಕೆ ಹಾದಿ ಸುಗಮ

ಅಬುಧಾಬಿ: ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತೈಲ ರಫ್ತು ಮಾಡುವ ರಾಷ್ಟ್ರಗಳ ಒಕ್ಕೂಟವಾದ ಒಪೆಕ್‌ನಿಂದ(ಒಪಿಇಸಿ) ಹೊರಬಂದಿದೆ. ಮೇ 1ರಿಂದ ಜಾರಿಗೆ ಬರುವಂತೆ, ಹಬ್ಶಾನ್-ಫುಜೈರಾ ಪೈಪ್‌ಲೈನ್ ಮೂಲಕ ಭಾರತಕ್ಕೆ ಹೆಚ್ಚಿನ ಪ್ರಮಾಣದ ಕಚ್ಚಾ ತೈಲವನ್ನು ರಫ್ತು ಮಾಡಲು ಮತ್ತು ರಾಷ್ಟ್ರೀಯ ತೈಲ ಉತ್ಪಾದನೆಯನ್ನು ವಿಸ್ತರಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.



ಸುಮಾರು 60 ವರ್ಷಗಳ ಒಕ್ಕೂಟದ ಸದಸ್ಯತ್ವವನ್ನು ಕೊನೆಗೊಳಿಸಿರುವ ಯುಎಇ, ಇನ್ನು ಮುಂದೆ ಒಪೆಕ್ ವಿಧಿಸುವ ಉತ್ಪಾದನಾ ಮಿತಿಗಳನ್ನು ಪಾಲಿಸುವುದಿಲ್ಲ. ಇದರಿಂದ ದೇಶವು ತನ್ನ ತೈಲ ಉತ್ಪಾದನೆಯನ್ನು ದಿನಕ್ಕೆ ಹತ್ತು ಲಕ್ಷ ಬ್ಯಾರೆಲ್‌ಗಳಷ್ಟು ಹೆಚ್ಚಿಸಲು ಸಾಧ್ಯವಾಗಲಿದ್ದು, ಒಟ್ಟು ಐದು ದಶಲಕ್ಷ ಬ್ಯಾರೆಲ್‌ಗಳ ಗುರಿಯತ್ತ ಸಾಗಲಿದೆ. ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿಯು (ಎಡಿಎನ್‌ಒಸಿ) ನಿಗದಿತ ಅವಧಿಗಿಂತ ಮುಂಚಿತವಾಗಿ ಈ ಗುರಿ ತಲುಪಲು 150 ಬಿಲಿಯನ್ ಡಾಲರ್ ಹೂಡಿಕೆ ಮಾಡಿದೆ.

ಯುಎಇ, 406 ಕಿಮೀ ಉದ್ದದ ಹಬ್ಶಾನ್-ಫುಜೈರಾ ಪೈಪ್‌ಲೈನ್ ಮೂಲಕ, ಅಪಾಯಕಾರಿ ಹಾರ್ಮುಜ್ ಜಲಸಂಧಿಯನ್ನು ಬಳಸದೆಯೇ ತೈಲ ರಫ್ತು ಮಾಡಬಹುದಾಗಿದೆ. ತನ್ನ ಒಟ್ಟು ತೈಲ ಆಮದಿನ ಶೇ.10ರಷ್ಟು ಪಾಲನ್ನು ಯುಎಇಯಿಂದ ಪಡೆಯುವ ಭಾರತಕ್ಕೆ, ಈ ಮಾರ್ಗ ಪ್ರಾದೇಶಿಕ ಉದ್ವಿಗ್ನತೆಗಳ ನಡುವೆಯೂ ಸುರಕ್ಷಿತ ತೈಲ ಪೂರೈಕೆಯನ್ನು ಖಾತ್ರಿಪಡಿಸುತ್ತದೆ.

ನಿಷ್ಕ್ರಿಯ ಇಪಿಎಫ್ ಖಾತೆ ಸಕ್ರಿಯಕ್ಕಾಗಿ ಇ- ಪ್ರಾಪ್ತಿ

ಹೊಸದಿಲ್ಲಿ: ನಿಷ್ಕ್ರಿಯವಾಗಿರುವ ಭವಿಷ್ಯ ನಿಧಿ ಖಾತೆಗಳನ್ನು ಸಕ್ರಿಯಗೊಳಿಸುವುದಕ್ಕಾಗಿ ಆಧಾರ್ ಆಧಾರಿತ ಪೋರ್ಟಲ್ ಇ-ಪ್ರಾಪ್ತಿಗೆ ಇಪಿಎಫ್‌ಒ ಚಾಲನೆ ನೀಡಿದೆ. ಹಳೆ ಇಪಿಎಫ್ ಖಾತೆಗಳನ್ನು ಗುರುತಿಸುವುದು, ಯುಎಎನ್ ಲಿಂಕಿಂಗ್ ಮತ್ತು ಅವುಗಳಿಗೆ ಮರುಜೀವ ನೀಡುವ ಡಿಜಿಟಲ್ ವೇದಿಕೆಯಾಗಿದೆ ಇ-ಪ್ರಾಪ್ತಿ.

ಪ್ರಸ್ತುತ ಪೋರ್ಟಲ್, ಪಿಎಫ್ ಸದಸ್ಯರಿಗೆ ತಮ್ಮ ಹಳೆ ಪಿಎಫ್ ಖಾತೆಗಳನ್ನು ಸುರಕ್ಷಿತವಾಗಿ ಮರಳಿ ಹೊಂದಲು ಅಗತ್ಯ ಆಧಾರ್ ಆಧಾರಿತ ದೃಢೀಕರಣ ಕಾರ್ಯ ವಿಧಾನವನ್ನು ಒದಗಿಸುವುದು. ಪಿಎಫ್ ಹಳೆ ಖಾತೆಗಳು ಯುಎಎನ್ ಲಿಂಕ್ ಹೊಂದಿರುವುದಿಲ್ಲ, ಸದಸ್ಯರು ತಮ್ಮ ಸದಸ್ಯ ಪ್ರೊಫೈಲ್‌ನ್ನು ಕ್ರಮಬದ್ಧಗೊಳಿಸಿದ ನಂತರ ಯುಎಎನ್ ಲಿಂಕಿಂಗ್, ಖಾತೆಯ ಪುನಶ್ಚೇತನ ಸಾಧ್ಯವಾಗುವುದು. ಆರಂಭಿಕ ಹಂತದಲ್ಲಿ ಪೋರ್ಟಲ್ ಪಿಎಫ್ ಸದಸ್ಯರ ಮೆಂಬರ್ ಐಡಿ ಆಧಾರಿತವಾಗಿ, ಮೆಂಬರ್ ಐಡಿಗಳನ್ನು ಹೊಂದಿರುವ ಅಪಾರ ಸಂಖ್ಯೆ ಸದಸ್ಯರಿಗೆ ತಕ್ಷಣದ ಸೌಲಭ್ಯ ಕೊಡಿಸಲು ನೆರವಾಗುವುದು.

ಇನ್ನು ಹಳೆ ಮೆಂಬರ್ ಐಡಿಗಳನ್ನು ಪಡೆಯಲು ವಿಫಲರಾಗಿರುವ ಸದಸ್ಯರಿಗೆ ಇದನ್ನು ಕೊಡಿಸಲು ಇ-ಪ್ರಾಪ್ತಿ ನೆರವಾಗುವುದು. ಇ-ಪ್ರಾಪ್ತಿ ಪೋರ್ಟಲ್ ಮಾನವ ಮಧ್ಯಪ್ರವೇಶ ಸಾಧ್ಯತೆಗಳನ್ನು ಕಡಿಮೆ ಮಾಡಲಿದೆ, ದಾಖಲೀಕರಣಗಳನ್ನು ಕಡಿಮೆ ಮಾಡುವುದು ಮತ್ತು ದಕ್ಷತೆ ಹಾಗೂ ಪಾರದರ್ಶಿತ್ವಕ್ಕೆ ಆದ್ಯತೆ ನೀಡಲಿದೆ. ಇಪಿಎಫ್‌ಒ 2025-26ರಲ್ಲಿ 8.31ಕೋಟಿ ಪಿಎಫ್ ಅರ್ಜಿಗಳನ್ನು ಇತ್ಯರ್ಥಪಡಿಸಿದೆ. 2024-25ರಲ್ಲಿ ಈ ಸಂಖ್ಯೆ 6.01ಕೋಟಿಗೆ ಸೀಮಿತವಿತ್ತು. ಈ ಪೈಕಿ 5.51ಕೋಟಿ ಅರ್ಜಿಗಳು ಮುಂಗಡ ಅಥವಾ ಭಾಗಶಃ ಪಿಎಫ್ ಹಣ ಪಡೆಯುವುದಕ್ಕೆ ಸಂಬಂಧಿಸಿದವುಗಳು.

ಅಯೋಧ್ಯೆ ಶಿವ ದೇಗುಲ ಮೇಲೆ ಧ್ವಜಾರೋಹಣ

ಅಯೋಧ್ಯೆ: ಶ್ರೀ ರಾಮ ಮಂದಿರದ ಆವರಣದಲ್ಲಿರುವ ಶಿವ ಮಂದಿರದ ಮೇಲೆ ಧಾರ್ಮಿಕ ವಿಧಿವಿಧಾನಗಳ ಮೂಲಕ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಧ್ವಜಾರೋಹಣ ನೆರವೇರಿಸಿದರು.



ಧ್ವಜಾರೋಹಣದ ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಯೋಗಿ ಆದಿತ್ಯನಾಥ್, ಜನರು ನನ್ನ ಎಲ್ಲಿ ನೋಡಿದರು ಜಯ ಶ್ರೀ ರಾಮ, ಜಯ ಶ್ರೀ ರಾಮ ಎಂದು ಹೇಳುತ್ತಾರೆ. ಶ್ರೀ ರಾಮ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದುಕೊಂಡಿದ್ದಾರೆ ಎಂದರು. ಶ್ರೀ ರಾಮ ಭಾರತವನ್ನು ಉತ್ತರದಿಂದ ದಕ್ಷಿಣಕ್ಕೆ ಬೆಸೆದರೆ, ಶ್ರೀ ಕೃಷ್ಣ ಪೂರ್ವದಿಂದ ಪಶ್ಚಿಮಕ್ಕೆ ಮತ್ತು ಶಿವ ಭಾರತದ ಕೊನೆ ಕೊನೆಯಲ್ಲಿ ಕಾಣಬಹುದು ಎಂದರು. ಸಂಜೆ 5 ಗಂಟೆಗೆ ಅಯೋಧ್ಯೆಗೆ ಆಗಮಿಸಿದ ಯೋಗಿ ಮೊದಲು ಹನುಮಾನ ಮಂದಿರದ ದರ್ಶನವನ್ನು ಪಡೆದ ನಂತರ ಶ್ರೀ ರಾಮಲಲಾ ಹಾಗೂ ಶಿವ ಮಂದಿರದ ದರ್ಶನ ಹಾಗೂ ವಿಶೇಷ ಪೂಜೆ ಸಲ್ಲಿಸಿ ವೇದಿಕೆಯ ಕಡೆಗೆ ಹೊರಟು ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಪ್ರಧಾನಕಾರ್ಯದರ್ಶಿಯಾದ ಚಂಪತರಾಯ್, ಟ್ರಸ್ಟಿಗಳಾದ ಅನಿಲ ಮಿಶ್ರಾ, ಕೃಷ್ಣಮೋಹನ್, ವಿಶ್ವಹಿಂದೂ ಪರಿಷತ್ ಕೇಂದ್ರೀಯ ಕಾರ್ಯದರ್ಶಿ ಗೋಪಾಲ್ ಜಿ, ಹಾಗೂ ಸಂಘ ಪರಿವಾರದ ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಭಾರತ-ಲಂಕಾ ಜಂಟಿ ನೌಕಾಭ್ಯಾಸ ಸಂಪನ್ನ

ಹೊಸದಿಲ್ಲಿ: ಕೊಲಂಬೊ ಕರಾವಳಿಯಲ್ಲಿ ನಡೆದ ದ್ವಿಪಕ್ಷೀಯ ನೌಕಾ ತಾಲೀಮಿನ ಭಾಗವಾಗಿ ಭಾರತ ಮತ್ತು ಶ್ರೀಲಂಕಾದ ನೌಕಾಪಡೆಗಳ ಸಿಬ್ಬಂದಿಗಳು ಆಳ ಸಮುದ್ರದ ಡೈವ್‌ಗಳನ್ನು ನಡೆಸಿದ್ದಾರೆ. ಈ ಮೂಲಕ ಉಭಯ ದೇಶದ ನೌಕಾಪಡೆ ನೀರೊಳಗಿನ ಹುಡುಕಾಟ, ಪಾರುಗಾಣಿಕಾ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿ ಜಂಟಿ ಸಾಮರ್ಥ್ಯಗಳನ್ನು ಹೆಚ್ಚಿಸಿದರು. ಭಾರತ ಮತ್ತು ಶ್ರೀಲಂಕಾ ಕೊಲಂಬೊದಲ್ಲಿ ಏ.21-28ರಿಂದ ನಡೆಸಲಾದ ಡೈವೆಕ್ಸ್ ಎಂಬ ದ್ವಿಪಕ್ಷೀಯ ಡೈವಿಂಗ್ ತಾಲೀಮಿನ ನಾಲ್ಕನೇ ಆವೃತ್ತಿಯ ಮೂಲಕ ತಮ್ಮ ಬೆಳೆಯುತ್ತಿರುವ ಕಡಲ ಪಾಲುದಾರಿಕೆಯನ್ನು ಪುನರುಚ್ಚರಿಸಿದವು. ಹಿಂದೂ ಮಹಾಸಾಗರ ಪ್ರದೇಶದಲ್ಲಿ ಸಮನ್ವಯವನ್ನು ಬಲಪಡಿಸುವಾಗ, ಎರಡೂ ನೌಕಾಪಡೆಗಳ ಡೈವರ್‌ಗಳು 55 ಮೀಟರ್‌ಗಿಂತ ಹೆಚ್ಚು ಆಳ ಸಮುದ್ರದ ಡೈವ್‌ಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದರು. ನೀರೊಳಗಿನ ಹುಡುಕಾಟ, ಪಾರುಗಾಣಿಕಾ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿ ಜಂಟಿ ಸಾಮರ್ಥ್ಯಗಳನ್ನು ಹೆಚ್ಚಿಸಿದರು ಎಂದು ಭಾರತೀಯ ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ.

ಶಬರಿಮಲೆ ಪ್ರವೇಶ ಕುರಿತಂತೆ ವಿಚಾರಣೆ | ಸುಪ್ರೀಂಕೋರ್ಟ್‌ನಿಂದ ಮಹತ್ವದ ಅಭಿಪ್ರಾಯ

ಸುಧಾರಣೆ ಹೆಸರಿನಲ್ಲಿ ಧರ್ಮವನ್ನು ಕುಗ್ಗಿಸಲಾಗದು

ಹೊಸದಿಲ್ಲಿ: ಸುಧಾರಣೆ ಎಂಬ ಹೆಸರಿನಲ್ಲಿ ಧರ್ಮವನ್ನು ನಾಶಪಡಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಹಾಗೆಯೇ, ಧಾರ್ಮಿಕ ನಂಬಿಕೆ ಹಾಗೂ ಮನಸ್ಸಿನ ವಿಷಯಗಳನ್ನು ನ್ಯಾಯಾಂಗ ಚರ್ಚೆಗೆ ಒಳಪಡಿಸಲು ಸಾಧ್ಯವಿಲ್ಲವೆಂದು ಕೋರ್ಟ್ ಹೇಳಿದೆ.

ಮಹಿಳೆಯರ ಮೇಲಿನ ಭೇದಭಾವ ಸೇರಿದಂತೆ ವಿವಿಧ ಧಾರ್ಮಿಕ ಪ್ರಶ್ನೆಗಳ ವಿಚಾರಣೆಯನ್ನು ನಡೆಸುತ್ತಿರುವ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠ, ದೀರ್ಘಕಾಲದಿಂದ ರೂಪುಗೊಂಡ ಕೆಲವು ಆಚರಣೆಗಳು ಧರ್ಮದ ಅವಿಭಾಜ್ಯ ಅಂಗಗಳಾಗಿ ಪರಿಗಣಿಸಲ್ಪಟ್ಟಿವೆ ಎಂದು ಅಭಿಪ್ರಾಯಪಟ್ಟಿತು. ಮುಖ್ಯ ನ್ಯಾ.ಸೂರ್ಯಕಾಂತ್ ನೇತೃತ್ವದ ಪೀಠವು ವಿಚಾರಣೆ ವೇಳೆ, ಧಾರ್ಮಿಕ ಸ್ವಾತಂತ್ರ್ಯದ ವಿಚಾರಗಳಲ್ಲಿ ಸಮಾನತೆ ತತ್ವವನ್ನು ಅನ್ವಯಿಸುವಾಗ, ಅದು ಆ ಧರ್ಮದ ಮೂಲ ಆಚರಣೆಗಳನ್ನು ಸಂಪೂರ್ಣವಾಗಿ ನಿರಾಕರಿಸುವ ಮಟ್ಟಕ್ಕೆ ಹೋಗಬಹುದೇ ಎಂಬ ಪ್ರಶ್ನೆ ಎತ್ತಿತು.

ಪೀಠವು ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಂಬಂಧಿಸಿದ ಸಂವಿಧಾನಿಕ ಆಶಯವನ್ನು ಉಲ್ಲೇಖಿಸಿ, ರಾಜ್ಯವು ಕಾನೂನು ರೂಪಿಸದಿದ್ದರೆ ನ್ಯಾಯಾಂಗವು ಕ್ರಮೇಣ ಸಮಾನತೆ ತತ್ವವನ್ನು ಜಾರಿಗೊಳಿಸಬಹುದೇ ಎಂಬುದರ ಬಗ್ಗೆ





ಚರ್ಚಿಸಿತು. ಈ ಸಂದರ್ಭದಲ್ಲಿ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು, ವಿವಿಧ ರಾಜ್ಯಗಳು ವಿವಾಹ ಮತ್ತು ವಾರಸುದಾರಿಕೆ ಹಕ್ಕುಗಳನ್ನು ನಿಯಂತ್ರಿಸಲು ತಮ್ಮದೇ ನಿಯಮಗಳನ್ನು ಜಾರಿಗೆ ತಂದಿರುವುದನ್ನು ಉಲ್ಲೇಖಿಸಿ, ಸಮಾಜ ಸಿದ್ಧವಾಗುವಾಗ ಸಂಸತ್ತು ಏಕರೂಪ ನಾಗರಿಕ ಸಂಹಿತೆಯನ್ನು ತರಲಿದೆ ಎಂದು ಹೇಳಿದರು.

ವಿಚಾರಣೆ ವೇಳೆ ಹಿರಿಯ ವಕೀಲರು, ವ್ಯಕ್ತಿಗಳಿಗೆ ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯವು ಧಾರ್ಮಿಕ ಸಂಸ್ಥೆಗಳ ಹಕ್ಕಿಗಿಂತ ಮೇಲು ಎಂಬುದಾಗಿ ವಾದಿಸಿದರು. ಆದರೆ ನ್ಯಾಯಮೂರ್ತಿಗಳು, ಶತಮಾನಗಳಿಂದ ನಡೆದು ಬಂದ ಆಚರಣೆಗಳನ್ನು ಏಕಾಏಕಿ ಪ್ರಶ್ನಿಸುವುದು ಸೂಕ್ತವೇ ಎಂಬ ಪ್ರಶ್ನೆಯನ್ನು ಮುಂದಿಟ್ಟರು. ಕೆಲವು ಆಚರಣೆಗಳು ಕಾಲಕ್ರಮೇಣ ಧರ್ಮದ ಮೂಲಭೂತ ಅಂಶಗಳಾಗಿ ರೂಪುಗೊಂಡಿರುವುದರಿಂದ, ಇತಿಹಾಸವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು.

ನ್ಯಾ. ನಾಗರತ್ನ ಅವರು, ಸುಧಾರಣೆ ಹೆಸರಿನಲ್ಲಿ ಧರ್ಮವನ್ನು ಖಾಲಿ ಮಾಡಬಾರದು ಎಂದು ಎಚ್ಚರಿಕೆ ನೀಡಿದರು. ಶತಮಾನಗಳಿಂದ ನಡೆದುಬಂದ ಆಚರಣೆಗಳನ್ನು ಸಂಪೂರ್ಣವಾಗಿ ತೆರೆಯುವುದು ಧರ್ಮದ ಅಸ್ತಿತ್ವವನ್ನೇ ಹಾನಿಗೊಳಿಸಬಹುದು ಎಂದರು. ಇದೇ ವೇಳೆ, ಧಾರ್ಮಿಕ ಆಚರಣೆಗಳು ಮಹಿಳೆಯರ ಹಕ್ಕುಗಳಿಗೆ ಹಾನಿಯಾಗಿದ್ದರೆ ಪರಿಹಾರವೇನು ಎಂಬ ಪ್ರಶ್ನೆಯನ್ನೂ ವಕೀಲರು ಎತ್ತಿದರು.

ಇದಲ್ಲದೆ, ದೇವಾಲಯ ಪ್ರವೇಶ ಹಕ್ಕಿನ ವಿಚಾರದಲ್ಲಿ ಭಕ್ತ ಹಾಗೂ ಭಕ್ತರಲ್ಲದವರ ನಡುವಿನ ವ್ಯತ್ಯಾಸವನ್ನು ಪರಿಗಣಿಸುವ ಅಗತ್ಯವಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು. ದೀರ್ಘಕಾಲದಿಂದ ರೂಢಿಯಾದ ಆಚರಣೆಗಳನ್ನು ಏಕಾಏಕಿ ಪ್ರಶ್ನಿಸುವುದರಿಂದ ಉಂಟಾಗುವ ಪರಿಣಾಮಗಳನ್ನೂ ಪೀಠ ಗಮನಿಸಿತು.

ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ 31 ವರ್ಷ ಜೈಲು ವಾಸ

ಮಾಜಿ ಅಪರಾಧಿ ಈಗ ಹೈ ವಕೀಲ!

ಚೆನ್ನೈ: ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸಿ ಬಿಡುಗಡೆಯಾಗಿದ್ದ ಎ.ಜಿ. ಪೆರಾರಿವಾಲನ್ ಸೋಮವಾರ ತಮಿಳುನಾಡು ಮತ್ತು ಪುದುಚೇರಿ ಬಾರ್ ಕೌನ್ಸಿಲ್‌ನಲ್ಲಿ ವಕೀಲರಾಗಿ ನೋಂದಾಯಿಸಿ ಕೊಂಡಿದ್ದಾರೆ.

54 ವರ್ಷದ ಪೆರಾರಿವಾಲನ್ ಏಪ್ರಿಲ್ 27 ರಂದು ಅಧಿಕೃತವಾಗಿ ಕಪ್ಪು ಕೋಟ್ ಧರಿಸಿದರು. ಈ ಸಮಾರಂಭದಲ್ಲಿ, ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸುಶ್ರುತ್ ಅರವಿಂದ್ ಧರ್ಮಾಧಿಕಾರಿ ಅವರು ಭಾಗವಹಿಸಿದ್ದರು. ಬಾರ್ ಕೌನ್ಸಿಲ್ ಅಧ್ಯಕ್ಷ ಪಿ.ಎಸ್. ಅಮಲ್‌ರಾಜ್ ಮತ್ತು ಉಪಾಧ್ಯಕ್ಷ ಎಸ್. ಪ್ರಭಾಕರನ್ ಉಪಸ್ಥಿತರಿದ್ದರು. ವಕೀಲ ಸಿ.ಕೆ. ಚಂದ್ರಶೇಖರ್ ನೋಂದಣಿ ಪ್ರಕ್ರಿಯೆಯನ್ನು ಮಂಡಿಸಿದರೆ, ಕೆ. ಬಾಲು ಪ್ರಮಾಣ ವಚನ ಬೋಧಿಸಿದರು.

ಪೆರಾರಿವಾಲನ್ ಬೆಂಗಳೂರಿನ ಡಾ. ಬಿ.ಆರ್. ಅಂಬೇಡ್ಕರ್ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಮುಗಿಸಿದ್ದಾರೆ. ಅವರು 2025ರಲ್ಲಿ ಅಖಿಲ ಭಾರತ ಬಾರ್ ಪರೀಕ್ಷೆಯಲ್ಲಿ (ಎಐಬಿಇ) ಉತ್ತೀರ್ಣರಾಗಿದ್ದಾರೆ. ಇವರ ಕಾನೂನು ವೃತ್ತಿಯ ಮೂಲಕ ಕೈದಿಗಳಿಗೆ ಕಾನೂನು ನೆರವು ನೀಡಲು ಬಯಸಿದ್ದಾರೆ.



ಕಾನೂನು ಇತಿಹಾಸ

ಸುಪ್ರೀಂ ಕೋರ್ಟ್ ಮೇ 18, 2022ರಂದು ಆರ್ಟಿಕಲ್ 142ರ ಅಡಿಯಲ್ಲಿ ಪೆರಾರಿವಾಲನ್ ಬಿಡುಗಡೆಗೆ ಆದೇಶಿಸಿತ್ತು. 1991ರಲ್ಲಿ ತಮ್ಮ 19ನೇ ವಯಸ್ಸಿನಲ್ಲಿ ಬಂಧನಕ್ಕೊಳಗಾಗಿದ್ದ ಅವರು ಒಟ್ಟು 31 ವರ್ಷಗಳ ಕಾಲ ಜೈಲಿನಲ್ಲಿ ಕಳೆದಿದ್ದರು. ಸ್ಫೋಟಕ ಸಾಧನಕ್ಕೆ 9-ವೋಲ್ಟ್ ಬ್ಯಾಟರಿ ಪೂರೈಸಿದ ಆರೋಪ ಅವರ ಮೇಲಿತ್ತು. ಕಾನೂನು ಹೋರಾಟದ ಸಮಯದಲ್ಲಿ ಅನುಭವಿಸಿದ ಘಟನೆಗಳು ತಮ್ಮನ್ನು ವಕೀಲರಾಗಲು ಪ್ರೇರೇಪಿಸಿದವು ಎಂದು ಅವರು ತಿಳಿಸಿದ್ದಾರೆ. ಪೆರಾರಿವಾಲನ್ ಮದ್ರಾಸ್ ಹೈಕೋರ್ಟ್‌ನಲ್ಲಿ ವೃತ್ತಿ ಆರಂಭಿಸಲಿದ್ದಾರೆ.

ಕಿರುಸುದ್ದಿ

ಸಹಸ್ರ ಕಮಲ ಪುಷ್ಪಯಾಗ ಸಂಪನ್ನ

• **ದಾಬಸ್ ಪೇಟೆ:** ನೆಲಮಂಗಲ ತಾಲ್ಲೂಕು ಲಕ್ಕೂರು ಗ್ರಾಮದ ಮಹಾಲಕ್ಷ್ಮೀ ದೇವಾಲಯದಲ್ಲಿ 15ನೇ ವರ್ಷದ ಸಹಸ್ರ ಕಮಲ ಪುಷ್ಪಾರ್ಚನೆ ಹಾಗೂ ಸಹಸ್ರ ಕಮಲ ಪುಷ್ಪಯಾಗ ಮಹೋತ್ಸವ ಮತ್ತು ಮಹಾಲಕ್ಷ್ಮೀಯವರ ಪ್ರಾಕಾರೋತ್ಸವ ಮಂಗಳವಾರ ಧಾರ್ಮಿಕ ಕಾರ್ಯಗಳೊಂದಿಗೆ ಸಂಪನ್ನಗೊಂಡಿತು.



ಮೂಲ ದೇವರನ್ನು ಸಹಸ್ರ ಕಮಲಗಳಿಂದ ಅಲಂಕರಿಸಲಾಗಿತ್ತು. ದೇವಾಲಯದ ಮುಂಭಾಗ ಹೋಮ ನೆರವೇರಿತು. ಮಂಗಳ ವಾದ್ಯಗಳೊಂದಿಗೆ ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು. ನೂರಾರು ಭಕ್ತರು ಆಗಮಿಸಿ ಪೂಜೆ ಸಲ್ಲಿಸಿದರು. ಭಕ್ತರಿಗೆ ಊಟ, ಲಾಡು ಹಾಗೂ ಕಮಲ ಹೂ ಪ್ರಸಾದ ನೀಡಲಾಯಿತು.

ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ಕೋರ್ಸ್‌ಗೆ ಆಹ್ವಾನ

• **ದೊಡ್ಡಬಳ್ಳಾಪುರ:** ಸಮಾಜ ಕಲ್ಯಾಣ ಇಲಾಖೆಯಲ್ಲಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪದವಿ ಪೂರ್ವ ವಿಜ್ಞಾನ ವಸತಿ ಕಾಲೇಜುಗಳ 2026–27ನೇ ಸಾಲಿನ ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ಪಿಸಿಎಂಬಿ ಹಾಗೂ ಪಿಸಿಎಂಸಿ ಕೋರ್ಸ್‌ಗಳ ದಾಖಲಾತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿದ್ಯಾರ್ಥಿಗಳಿಗೆ ಶೇ.75ರಷ್ಟು ಇತರೆ ಜಿಲ್ಲೆಯ ವಿದ್ಯಾರ್ಥಿಗಳಿಗೆ ಶೇ.25ರಷ್ಟು ಸ್ಥಾನವನ್ನು ವರ್ಗವಾರು ಮೀಸಲಿರಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಮೇ 2ರಂದು ಕೊನೆಯ ದಿನವಾಗಿದೆ. ಜಿಲ್ಲೆಯ ಈ ಕೆಳಕಂಡ ವಸತಿ ಕಾಲೇಜುಗಳಲ್ಲಿ ಅರ್ಜಿಯನ್ನು ವಿತರಿಸಲಾಗುವುದು. ಹೊಸಕೋಟೆ ಜಡಿಗೇನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜು, ದೊಡ್ಡಬಳ್ಳಾಪುರ ಬಚ್ಚಹಳ್ಳಿ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜು, ದೇವನಹಳ್ಳಿ ಬೊಮ್ಮಾವರ ಅಟಲ್ ಬಿಹಾರಿ ವಾಜಪೇಯಿ ವಿಜ್ಞಾನ ಪದವಿ ಪೂರ್ವ ಕಾಲೇಜು, ನೆಲಮಂಗಲದ ದೊಡ್ಡೇರಿ (ಸೋಂಪುರ) ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ಅರ್ಜಿ ದೊರಕಲಿದೆ. ಆನ್ ಲೈನ್ ಮೂಲಕವೂ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ಕಿರಣ್ ಕುಮಾರ್ ಎನ್. ಪ್ರಾಂಶುಪಾಲರು– 9110256424, ನಾಗರತ್ನ ಪ್ರಾಂಶುಪಾಲರು– 8105526933, ಗಿರೀಶ್ ಎಂ. ಪ್ರಾಂಶುಪಾಲರು– 8660152639, ಲೀಲಾ ಪ್ರಾಂಶುಪಾಲರು– 6495812105 ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಟಿ.ಎಲ್.ಎಸ್.ಪ್ರೇಮಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಾಹವಾಗಲು ಯುವತಿ ಸಿಗದಕ್ಕೆ ಮನನೊಂದು ಯುವಕ ಆತ್ಮಹತ್ಯೆ



• **ಬೇಲೂರು:** ನಗರದಲ್ಲಿ ವಿವಾಹವಾಗಲು ಯುವತಿ ಸಿಗದ ಹಿನ್ನೆಲೆ ಮನನೊಂದ ಯುವಕನೋರ್ವ ಕಲ್ಯಾಣಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಮೃತರನ್ನು ವಿನಯ್ (35) ಎಂದು ಗುರುತಿಸಲಾಗಿದೆ. ಇವರು ನಾಗರಾಜ್ ಹಾಗೂ ಪದ್ಮಾ ದಂಪತಿಯ ಪುತ್ರರಾಗಿದ್ದು, ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ತಾಲೂಕಿನ ಗುಡ್ಡೂರು ಗ್ರಾಮದ ನಿವಾಸಿಯಾಗಿದ್ದರು. ಕಳೆದ ಹತ್ತು ವರ್ಷಗಳಿಂದ ಬೇಲೂರು ನಗರದ ಶಂಕರದೇವರ ಪೇಟೆಯಲ್ಲಿ ವಾಸವಿದ್ದು, ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತಿದ್ದರು. ಪದವಿ ಶಿಕ್ಷಣ ಪಡೆದಿದ್ದ ವಿನಯ್ ಅವರು ಕಳೆದ ಐದಾರು ವರ್ಷಗಳಿಂದ ವಿವಾಹಕ್ಕಾಗಿ ಯುವತಿ ಹುಡುಕುತ್ತಿದ್ದರು. ಆದರೆ ವಿವಾಹ ನಿಶ್ಚಯವಾಗದೆ ಮನ ನೊಂದು ಇದ್ದರೆಂದು ತಿಳಿದುಬಂದಿದೆ. ಇದೇ ಕಾರಣದಿಂದ ಅವರು ಮಾನಸಿಕವಾಗಿ ಬೇಸರಗೊಂಡಿದ್ದು, ಕಳೆದ ಒಂದು ವಾರದಿಂದ ಕೆಲಸಕ್ಕೂ ತೆರಳದೆ ಮನೆಯಲ್ಲಿ ಇದ್ದರೆಂದು ಕುಟುಂಬ ಮೂಲಗಳು ತಿಳಿಸಿವೆ. ಬೇಲೂರು ನಗರದ ವಿಷ್ಣು ಸಮುದ್ರ ಕೆರೆಯ ಪಕ್ಕದಲ್ಲಿರುವ ಕಲ್ಯಾಣಿಗೆ ಬಿದ್ದು ಅವರು ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ ಎನ್ನಲಾಗಿದೆ. ಘಟನೆ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಬೇಲೂರು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಬೇಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಮೈಸೂರಿನಲ್ಲಿ ಕಾವೇರಿ ನದಿ ರಕ್ಷಣಾ ಸಮಿತಿ ಸಭೆ | ಸುಪ್ರೀಂಗೆ ಮೇಲ್ಮನವಿ ಸಲ್ಲಿಸಲು ನಿರ್ಧಾರ

2018ರ ತೀರ್ಪಿನಲ್ಲಿ ರಾಜ್ಯಕ್ಕೆ ಭಾರೀ ಅನ್ಯಾಯ

• **ಮೈಸೂರು:** ಕರ್ನಾಟಕ ಮತ್ತು ತಮಿಳುನಾಡು ಕಾವೇರಿ ನದಿ ನೀರು ಹಂಚಿಕೆ ಸಂಬಂಧ 2018ರ ಸುಪ್ರೀಂ ಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲು ಕಾವೇರಿ ನದಿ ರಕ್ಷಣಾ ಸಮಿತಿ ನಿರ್ಧರಿಸಿದೆ.

ಮೈಸೂರಿನ ಜಲದರ್ಶಿನಿಯಲ್ಲಿ ಕಾವೇರಿ ನದಿ ರಕ್ಷಣಾ ಸಮಿತಿ ಸದಸ್ಯರ ನೇತೃತ್ವದಲ್ಲಿ ನಡೆದ ಪೂರ್ವ ಸಿದ್ಧತೆ ಸಭೆ ಬಳಿಕ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಸಮಿತಿ, 2018ರಲ್ಲಿ ಕಾವೇರಿ ನೀರು ಹಂಚಿಕೆಯ ಬಗ್ಗೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಿಂದ ರಾಜ್ಯಕ್ಕೆ ಸಾಕಷ್ಟು ಅನ್ಯಾಯವಾಗಿದೆ.

ಸದ್ಯಕ್ಕೆ 284.75 ಟಿಎಂಸಿ ನೀರು ನಮ್ಮ ಕರ್ನಾಟಕ ರಾಜ್ಯಕ್ಕೆ ಹಂಚಿಕೆಯಾಗಿದೆ. ಇನ್ನೂ ಹೆಚ್ಚುವರಿಯಾಗಿ 70 ಟಿಎಂಸಿ ನೀರು ಹಂಚಿಕೆ ಮಾಡಬೇಕು ಹಾಗೂ ಹೆಚ್ಚುವರಿಯಾಗಿ ಕಾವೇರಿಕೊಳ್ಳದಲ್ಲಿ ಹರಿದು ಸಮುದ್ರ ಸೇರುವ ನೀರನ್ನು ತಡೆಹಿಡಿಯಲು ಅನುಮತಿ ನೀಡಬೇಕು ಎಂದು ಆಗ್ರಹಿಸಿ ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ಸಮಿತಿ ತಿಳಿಸಿದೆ.

ಈ ಸಂಬಂಧ ಕಾವೇರಿ ನದಿ ರಕ್ಷಣಾ ಸಮಿತಿ ಸದಸ್ಯರು, ಮೂರು ದಿನಗಳ ಕಾಲ ಪ್ರವಾಸ ಕೈಗೊಂಡು ಕೊಡಗಿನ ಭಾಗಮಂಡಲದ ತಲಕಾವೇರಿಯಿಂದ ಅಧ್ಯಯನ ಆರಂಭಿಸಿ, ಹಾರಂಗಿ ಅಣೆಕಟ್ಟೆ ಹೇಮಾವತಿ ಅಣೆಕಟ್ಟೆ ವೀಕ್ಷಣೆ ಮಾಡಿ, ಸ್ಥಳೀಯ ರೈತರು, ಕೃಷಿ ಕಾರ್ಮಿಕರ ಜತೆ ಸಮಾಲೋಚನೆ ನಡೆಸಲಾಗಿದೆ ಎಂದು ಹೇಳಿದೆ.

ಕಾವೇರಿ ನದಿ ನೀರು ಹಂಚಿಕೆ ಸಂಬಂಧ ತ್ವರಿತವಾಗಿ ವಿಚಾರಣೆ ನಡೆಸಲು ಪ್ರತ್ಯೇಕ ಪೀಠ ರಚಿಸುವುದಾಗಿಯೂ ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ಸೂಚಿಸಿದೆ. ಈ ವಿಚಾರ ಸಂಬಂಧ ತಮಿಳುನಾಡು ಸರ್ಕಾರ ಅರ್ಜಿ ಸಲ್ಲಿಸಿದ ಬೆನ್ನಲ್ಲೇ, ಕರ್ನಾಟಕ ಸರ್ಕಾರವೂ ಅರ್ಜಿ ಸಲ್ಲಿಸಿದ ಬಳಿಕ ಈ ಬೆಳವಣಿಗೆ ನಡೆದಿದೆ ಎಂದು ಹೇಳಿದೆ.



ಕಾವೇರಿ ನದಿ ರಕ್ಷಣಾ ಮಾಡಿ, ಸ್ಥಳೀಯ ರೈತರು, ಕೃಷಿ ಕಾರ್ಮಿಕರ ಜತೆ ಸಮಾಲೋಚನೆ ನಡೆಸಲಾಗಿದೆ. ಕಾವೇರಿ ಕೊಳ್ಳದ ಜನರಿಗೆ ಕುಡಿಯುವ ನೀರು ಪೂರೈಕೆ ಮತ್ತು ಕಾವೇರಿ ಸುತ್ತಲಿನ ಪ್ರದೇಶದಲ್ಲಿನ ಬೆಳೆಗಳಿಗೆ ನೀರಿನ ಅವಶ್ಯಕತೆಗಳನ್ನು ಪರಿಗಣಿಸಿ, ಬಳಿಕ ತಮಿಳುನಾಡಿಗೆ ನೀರು ಪೂರೈಸುವುದಾಗಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ತಿಳಿಸಿದೆ. ಈ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಲು ಪ್ರತ್ಯೇಕ ಪೀಠ ರಚನೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ಸೂಚಿಸಿದೆ ಎಂದು ತಿಳಿಸಿದೆ.

ರಾಜ್ಯ ಜಲ ಸಂಪನ್ಮೂಲ ಸಚಿವ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಈ ವಿವಾದ ಕುರಿತು ಪ್ರತಿಕ್ರಿಯಿಸಿ, ಕರ್ನಾಟಕವು ಪ್ರತಿನಿತ್ಯ ತಮಿಳುನಾಡಿಗೆ 10 ಸಾವಿರ ಟಿಎಂಸಿ ನೀರು ಬಿಡುಗಡೆಗೊಳಿಸುವ ಸಂಬಂಧ ಮಾಧ್ಯಮಗಳಿಗೆ ತಿಳಿಸಿ ದ್ದರು.

ಇದೇ ಸಂದರ್ಭದಲ್ಲಿ, ತನ್ನದೇ ಅಗತ್ಯತೆಗಳಿಗೆ ರಾಜ್ಯಕ್ಕೆ ಕೊರತೆಯಿರುವ ಅಂಶ ಉಲ್ಲೇಖಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಮುಂದಿನ 15 ದಿನಗಳ ಕಾಲ ತಮಿಳುನಾಡಿಗೆ ಪ್ರತಿದಿನ 10 ಸಾವಿರ ಕ್ಯೂಸೆಕ್ಸ್ ನೀರು ಬಿಡುಗಡೆಗೊಳಿಸಬೇಕೆಂಬ ಆದೇಶವನ್ನು ಪರಿಶೀಲಿಸುವಂತೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರ ಮನವಿ ಮಾಡಿರುವ ಅಂಶವನ್ನು ಸಮಿತಿ ತಿಳಿಸಿದೆ.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಸಭೆಯ ಸಾನ್ನಿಧ್ಯ ವಹಿಸಿದ್ದರು. ಕಾವೇರಿ ನದಿ ರಕ್ಷಣಾ ಸಮಿತಿ ಅಧ್ಯಕ್ಷ ಎಚ್.ಕೆ.ರಾಮು, ಕಾರ್ಯಾಧ್ಯಕ್ಷ ಕೆ.ಟಿ.ಚಂದ್ರು, ಖಜಾಂಚಿ ಸಿ.ಜಗದೀಶ, ಅಂದಾನಪ್ಪ, ಪದಾಧಿಕಾರಿಗಳಾದ ಮಾಲ ತ್ರೇಶ್ ವೈ.ಅಣ್ಣೇಗೇರಿ, ಎಚ್.ಎನ್.ರಾಜು, ನಿವೃತ್ತ ಪ್ರಾಧ್ಯಾಪಕ ಪ್ರೊ. ಚಂದ್ರಶೇಖರ್, ಸುಬ್ರಹ್ಮಣ್ಯ, ಮಾಜಿ ಮೇಯರ್ ಬಿ.ಕೆ. ಪ್ರಕಾಶ್, ನಿವೃತ್ತ ಪ್ರಾಧ್ಯಾಪಕ ಪ್ರೊ.ನಾಗಣ್ಣ, ರಾಜು, ಪ್ರಶಾಂತ್ ಸಭೆಯಲ್ಲಿ ಉಪಸ್ಥಿತರಿದ್ದರು.

ವ್ಯರ್ಥವಾಗಿ ಸಮುದ್ರ ಸೇರುವ ನೀರು ತಡೆಯಿರಿ

2018ರಲ್ಲಿ ಕಾವೇರಿ ನೀರು ಹಂಚಿಕೆಯ ಬಗ್ಗೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಿಂದ ರಾಜ್ಯಕ್ಕೆ ಸಾಕಷ್ಟು ಅನ್ಯಾಯವಾಗಿದೆ. ಸದ್ಯಕ್ಕೆ 284.75 ಟಿಎಂಸಿ ನೀರು ನಮ್ಮ ಕರ್ನಾಟಕ ರಾಜ್ಯಕ್ಕೆ ಹಂಚಿಕೆಯಾಗಿದೆ. ಇನ್ನೂ ಹೆಚ್ಚುವರಿಯಾಗಿ 70 ಟಿಎಂಸಿ ನೀರು ಹಂಚಿಕೆ ಮಾಡಬೇಕು. ಹೆಚ್ಚುವರಿಯಾಗಿ ಕಾವೇರಿಕೊಳ್ಳದಲ್ಲಿ ಹರಿದು ಸಮುದ್ರ ಸೇರುವ ನೀರನ್ನು ತಡೆಹಿಡಿಯಲು ಅನುಮತಿ ನೀಡಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ಸಮಿತಿ ತಿಳಿಸಿದೆ.

ಅರ್ಜಿ ಸಲ್ಲಿಕೆ ಬಳಿಕ ಎಚ್ಚೆತ್ತ ಹೋರಾಟಗಾರರು

ಕಾವೇರಿ ನದಿ ನೀರು ಹಂಚಿಕೆ ಸಂಬಂಧ ತ್ವರಿತವಾಗಿ ವಿಚಾರಣೆ ನಡೆಸಲು ಪ್ರತ್ಯೇಕ ಪೀಠ ರಚಿಸುವುದಾಗಿಯೂ ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ಸೂಚಿಸಿದೆ. ಈ ವಿಚಾರ ಸಂಬಂಧ ತಮಿಳುನಾಡು ಸರ್ಕಾರ ಅರ್ಜಿ ಸಲ್ಲಿಸಿದ ಬೆನ್ನಲ್ಲೇ, ಕರ್ನಾಟಕ ಸರ್ಕಾರವೂ ಅರ್ಜಿ ಸಲ್ಲಿಸಿದ ಬಳಿಕ ಈ ಬೆಳವಣಿಗೆ ನಡೆದಿದೆ ಎಂದು ಹೇಳಿದೆ.
ಕಾವೇರಿ ನದಿ ರಕ್ಷಣಾ ಮಾಡಿ, ಸ್ಥಳೀಯ ರೈತರು, ಕೃಷಿ ಕಾರ್ಮಿಕರ ಜತೆ ಸಮಾಲೋಚನೆ ನಡೆಸಲಾಗಿದೆ.

ಅಡಿಗಾಸ್‌ನಿಂದ ಬಂಪರ್ ಕೊಡುಗೆ, ಪ್ರವಾಸಿಗರಿಗೆ ಭಾರೀ ಡಿಸ್ಕೌಂಟ್!

ವಿದೇಶಿ ಪ್ರವಾಸಕ್ಕೆ 20 ಸಾವಿರವರೆಗೆ ದರ ಕಡಿತ!

• **ಬೆಂಗಳೂರು:** ರಾಜ್ಯದ ಪ್ರತಿಷ್ಠಿತ ಟ್ರಾವೆಲ್ ಸಂಸ್ಥೆಯಾದ ಅಡಿಗಾಸ್ ಯಾತ್ರಾ ಇದೀಗ ತನ್ನ ಪ್ರವಾಸಿಗರಿಗೆ ಬಂಪರ್ ರಿಯಾಯಿತಿಯ ವಿಶೇಷ ಕೊಡುಗೆಯನ್ನು ಘೋಷಿಸಿದೆ. ವಿದೇಶ ಪ್ರವಾಸದಲ್ಲಿ ಅದ್ದೂರಿ, ಅತ್ಯಾಧುನಿಕ ಸೌಲಭ್ಯಗಳು, ಪುಷ್ಕಳ ಊಟೋಪಚಾರ ಮತ್ತು ಅದ್ಭುತ ಪ್ರವಾಸಿ ಅನುಭವ ವನ್ನು ಕಟ್ಟಿಕೊಡುವುದರಲ್ಲಿ ಸದಾ ಮುಂದಿರುವ ಅಡಿಗಾಸ್ ಯಾತ್ರಾ, ತನ್ನ ಅಂತಾರಾಷ್ಟ್ರೀಯ ಪ್ರವಾಸಗಳ ದರಗಳಲ್ಲಿ ಭಾರಿ ರಿಯಾಯಿತಿಯನ್ನು ಪ್ರಕಟಿಸಿದೆ.

ಸಂಸ್ಥೆಯ ನಮ್ಮ ಗ್ಯಾರಂಟಿ ಯೋಜನೆಯಲ್ಲಿ, ಎಲ್ಲ ವಿದೇಶಿ ಪ್ರವಾಸಗಳಿಗೆ 2000 ದಿಂದ ಗರಿಷ್ಠ 20,000 ರುಪಾಯಿಗಳವರೆಗೆ ಡಿಸ್ಕೌಂಟ್ ದರದ ಅನುಕೂಲವನ್ನು ಪ್ರವಾಸಿಗರು ಪಡೆಯಬಹುದು.

ಒಂದು ವೇಳೆ ಅಂತಾರಾಷ್ಟ್ರೀಯ ಪ್ರವಾಸದಲ್ಲಿ ಗರಿಷ್ಠ ಡಿಸ್ಕೌಂಟ್‌ಅನ್ನು ಬಳಸದಿದ್ದರೆ, ದೇಶೀಯ ಪ್ರವಾಸದಲ್ಲಿ ಅದರ ಜೊತೆಗೆ 5,000 ರುಪಾಯಿಗಳ ಹೆಚ್ಚುವರಿ ಕೊಡುಗೆಯನ್ನೂ ಯಾವುದೆ ಸ್ವದೇಶಿ ಅಥವಾ ವಿದೇಶಿ ಪ್ರವಾಸಗಳಲ್ಲಿ ರಿಯಾಯತಿ ಪಡೆಯಬಹುದು!

ಅಡಿಗಾಸ್ ಯಾತ್ರಾ ಸೀಮಿತ ಅವಧಿಗೆ ಈ ಕೊಡುಗೆಯನ್ನು ನೀಡುತ್ತಿದ್ದು, ಕೂಡಲೇ ಇದರ ಪ್ರಯೋಜನ ವನ್ನು ಪಡೆಯುವಂತೆ ಸಂಸ್ಥೆಯ ಸ್ಥಾಪಕರಾದ ಕೆ. ನಾಗರಾಜ ಅಡಿಗ ಅವರು ಪ್ರವಾಸಿಗರಿಗೆ ಮನವಿ ಮಾಡಿದ್ದಾರೆ.

ಕಳೆದೊಂದು ವರ್ಷದಿಂದೀಚೆಗೆ ನಾನಾ ಜಾಗತಿಕ ಬಿಕ್ಕಟ್ಟು, ರೂಪಾಯಿ ಮೌಲ್ಯ ಕುಸಿತ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಇರಾನ್- ಅಮೆರಿಕ ಯುದ್ಧ ಸೇರಿದಂತೆ ಹಲವು ಕಾರಣಗಳಿಂದ ಅಂತಾರಾಷ್ಟ್ರೀಯ ಪ್ರವಾಸೋದ್ಯಮ ದುಬಾರಿಯಾಗಿದೆ. ಹೀಗಿದ್ದರೂ, ಪ್ರವಾಸಿಗರಿಗೆ ದೇಶ- ವಿದೇಶಗಳ ಸಂದರ್ಶನ, ಮೋಜು-ಮಸ್ತಿಯ ಸಮೃದ್ಧ ಅನುಭವಕ್ಕೆ ತೊಂದರೆ ನಯಾಗಬಾರದು ಎಂಬ ಕಾರಣಕ್ಕೆ ಅಡಿಗಾಸ್ ಯಾತ್ರಾ ಈ ವಿಶೇಷ ಡಿಸ್ಕೌಂಟ್ ನೀಡುತ್ತಿದೆ. ಸೀಮಿತ ಅವಧಿಗೆ ಲಭ್ಯವಿರುವ ಈ ಕೊಡುಗೆಯನ್ನು ಪ್ರವಾಸಿಗರು ಬಳಸಿಕೊಳ್ಳಬೇಕು ಎಂದು ಕೆ. ನಾಗರಾಜ ಅಡಿಗ ತಿಳಿಸಿದ್ದಾರೆ.

ಯಾವೆಲ್ಲ ದೇಶಗಳಿಗೆ ಆಫರ್ ಲಭ್ಯ: ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್, ಯುರೋಪ್, ಸಿಂಗಾಪೂರ,ಮಲೇಷ್ಯ, ಥಾಯ್ಲೆಂಡ್, ಸೌತ್ ಆಫ್ರಿಕಾ, ವಿಯೆಟ್ನಾಂ, ಕಾಂಬೋಡಿಯಾ, ಬಾಲಿ, ಶ್ರೀಲಂಕಾ, ನೇಪಾಳ-ಮುಕ್ತಿನಾಥ, ಕೈಲಾಸ ಮಾನಸ ಸರೋವರ ಯಾತ್ರಾಗೆ ರಿಯಾಯಿತಿಯ ಪ್ರಯೋಜನವನ್ನು ಪಡೆಯಬಹುದು.

ಅಡಿಗಾಸ್ ಯಾತ್ರಾ ಈ ಹಿಂದಿನಿಂದಲೂ ಪ್ರವಾಸಿ ಗರಿಗೆ ಒದಗಿಸುವ ಸೇವೆಗಳ ಗುಣಮಟ್ಟದಲ್ಲಿ ಯಾವುದೇ ರಾಜಿಯನ್ನು ಮಾಡುವುದಿಲ್ಲ, ಪ್ರವಾಸಿ ಗರೇ ಪ್ರಭುಗಳುಭಿ ಎನ್ನುತ್ತಾರೆ ನಾಗರಾಜ ಅಡಿಗರು. ವಿದೇಶಿ ಪ್ರವಾಸದಲ್ಲಿ ವೈಭವಯುತ ತಾರಾ ಹೋಟೆಲ್‌ಗಳಲ್ಲಿ ವಾಸ್ತವ್ಯ, ಶ್ರೇಷ್ಠ ಮತ್ತು ವೈವಿಧ್ಯ ಮಯ ಊಟೋಪಚಾರಗಳು, ವಿಶ್ವವಿಖ್ಯಾತ ತಾಣಗಳಲ್ಲಿ ಪ್ರವಾಸಿ ಟಿಕೆಟ್ ದುಬಾರಿಯಾಗಿದ್ದರೂ, ಬಿಡದೆ ಪ್ರವಾಸಿಗರಿಗೆ ಒದಗಿಸಿ ಅದ್ಭುತ ಪ್ರವಾಸದ ಅನುಭವ ಗಳನ್ನು ಕಟ್ಟಿಕೊಡುವುದರಲ್ಲಿ ಅಡಿಗಾಸ್ ಯಾತ್ರಾ ಮನೆಮಾತಾಗಿದೆ. ಹಾಗಿದ್ದರೆ ಈಗಲೇ ತ್ವರೆ ಮಾಡಿ, ಭಾರಿ ಡಿಸ್ಕೌಂಟ್ ಆಫರ್ ಅನ್ನೂ ನಿಮ್ಮದಾಗಿಸಿ!

ಆಸಕ್ತರು ಹೆಚ್ಚಿನ ಮಾಹಿತಿಗೆ ನೇರವಾಗಿ ನಮ್ಮ ಎಲ್ಲ ಕಚೇರಿಗಳನ್ನು ಅಥವಾ ದೂರವಾಣಿ 080–26616678 / 7022259008 / 9449478944 ಸಂಪರ್ಕಿಸಿ ಅಥವಾ ನಮ್ಮ ವೆಬ್ಸೈಟ್ www. adigasyatra.com ವನ್ನು ಸಂದರ್ಶಿಸಬೇಕೆಂದು ವ್ಯವಸ್ಥಾಪಕಿ ಆಶಾ ಎನ್ ಅಡಿಗ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 3ರಂದು ಇಎಸ್‌ಐ ಆಸ್ಪತ್ರೆ ಉದ್ಘಾಟನೆ



• **ದೊಡ್ಡಬಳ್ಳಾಪುರ:** ತಾಲೂಕಿನ ಬಾಶೆಟ್ಟಿಹಳ್ಳಿಯಲ್ಲಿ ನಿರ್ಮಾಣಗೊಂಡಿರುವ ಇಎಸ್‌ಐ ಆಸ್ಪತ್ರೆಯು ಮೇ 3ರಂದು ಉದ್ಘಾಟನೆಯಾಗಲಿದೆ ಎಂದು ಶಾಸಕ ಧೀರಜ್ ಮುನಿರಾಜ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ಎರಡು ವರ್ಷದಿಂದ ಆಸ್ಪತ್ರೆ ಉದ್ಘಾಟನೆ ಮಾಡಲಾಗುವುದು. ಈ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಗ್ಗಜಗ್ಗಾಟ ನಡೆಯುತ್ತಿತ್ತು. ಆದರೀಗ ಅಂತಿಮ ಹಂತಕ್ಕೆ ತಲುಪಿದೆ. ಮೇ3ರಂದು ಆಸ್ಪತ್ರೆ ಉದ್ಘಾಟನೆಯಾಗಲಿದೆ ಎಂದರು. ಮೇ 3ರಂದು ಕೇಂದ್ರ ಸಚಿವ ಡಾ.ಮನ್ಸುಖ್ ಮಾಂಡವೀಯ, ಕೇಂದ್ರ ಸಚಿವೆ ಶೋಭಾಕರಂದ್ಲಾಜೆ ಮತ್ತು ರಾಜ್ಯ ಸಚಿವರ ನೇತೃತ್ವದಲ್ಲಿ ಉದ್ಘಾಟನೆ ನಡೆಯಲಿದೆ.

ಕೇಂದ್ರ ಇಎಸ್‌ಐ ಕಾರ್ಪೋರೇಷನ್‌ನಿಂದ ವೈದ್ಯಾಧಿಕಾರಿಗಳು ಆಸ್ಪತ್ರೆ ಉಸ್ತುವಾರಿ ವಹಿಸಿಕೊಂಡು ಕಾರ್ಯೋನ್ಮುಖರಾಗಿದ್ದಾರೆ. ಇನ್ನು ಈ ಆಸ್ಪತ್ರೆಗೆ ವೈದ್ಯರನ್ನು ಮತ್ತು ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗುತ್ತದೆ.

ಮೇ 3ರ ನಂತರ ಮೊದಲಿಗೆ 40 ವರ್ಷ ಮೇಲ್ಪಟ್ಟ ಕಾರ್ಮಿಕರಿಗೆ ವಾರ್ಷಿಕ ಆರೋಗ್ಯ ತಪಾಸಣೆ ಕಾರ್ಯ ನಡೆಯಲಿದೆ. ಮುಂದಿನ ಒಂದು ತಿಂಗಳಲ್ಲಿ, ಸಂಪೂರ್ಣ ಓಪಿಡಿ ವಿಭಾಗದಲ್ಲಿ ಸರ್ಜನ್ ಗಳು ಕೆಲಸ ಮಾಡಲಿದ್ದಾರೆ. ಇದರೊಂದಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಸೇರಿದಂತೆ ಸುತ್ತ ಮುತ್ತ ಇರುವ ಜಿಲ್ಲೆಯ ಕಾರ್ಮಿಕರಿಗೆ ಅನುಕೂಲವಾಗಲಿದೆ ಎಂದರು.

ಈ ಕುರಿತು ತಾಲೂಕಿನ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣವಾಗಿ, ಉದ್ಘಾಟನೆಗೆ ಸಿದ್ಧಗೊಂಡಿರುವ ಇಎಸ್‌ಐ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು.

ರೈತರಿಗೆ ಮೇವು ಕತ್ತರಿಸುವ ಯಂತ್ರ ವಿತರಣೆ

ರಿಯಾಯಿತಿ ದರದಲ್ಲಿ ಕೃಷಿ ಉಪಕರಣ



• **ಆನೇಕಲ್:** ತಾಲೂಕಿನಲ್ಲಿ ರೈತ ಸ್ನೇಹಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ರೈತ ಸಮುದಾಯಕ್ಕೆ ಮೇವು ಕತ್ತರಿಸುವ ಯಂತ್ರ ವನ್ನು ವಿತರಿಸಲಾಗಿದೆ ಎಂದು ಶಾಸಕ ಬಿ.ಶಿವಣ್ಣ ತಿಳಿಸಿದರು.

ಪಟ್ಟಣದ ಪಶು ಆಸ್ಪತ್ರೆಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರೈತರಿಗೆ ಮೇವು ಕತ್ತರಿಸುವ ಯಂತ್ರವನ್ನು ವಿತರಿಸಿ ಮಾತನಾಡಿ, ಹಂತ ಹಂತವಾಗಿ ಎಲ್ಲ ರೈತರಿಗೂ ಮೇವು ಕತ್ತರಿಸುವ ಯಂತ್ರ ಸೇರಿದಂತೆ ಕೃಷಿಗೆ ಅಗತ್ಯವಿರುವ ಎಲ್ಲ ಸಲಕರಣೆಯನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುವುದು ಎಂದರು. ಪಟ್ಟಣದ ಪಶುವೈದ್ಯಕೀಯ ಆಸ್ಪತ್ರೆಯನ್ನು ಸಿಎಸ್‌ಆರ್ ಅನುದಾನದೊಂದಿಗೆ 1.5 ಕೋಟಿ ರೂ. ವೆಚ್ಚದಲ್ಲಿ ಮಾಡಲಾಗುತ್ತಿದೆ. 55ಲಕ್ಷ ಮೌಲ್ಯದ ಉಪಕರಣವನ್ನು ಸಂಸ್ಥೆಯು ನೀಡಿದೆ. ಹಾಗಾಗಿ ರೈತರು ರಾಸುಗಳಿಗೆ ಆರೋಗ್ಯ ಸಮಸ್ಯೆಯಾದಾಗ ಕೂಡಲೇ ಗುಣ ಪಡಿಸಬಹುದು ಎಂದು ತಿಳಿಸಿದರು. ಪಶು ವೈದ್ಯಾಧಿಕಾರಿ ಶಿವರಾಮ್ ಪಾಟೀಲ್ ಮಾತನಾಡಿ, ತಾಲೂಕಿನ ವ್ಯಾಪ್ತಿಯ 14 ಪಶುಪಾಲಕರಿಗೆ ಮೇವು ಕತ್ತರಿಸುವ ಯಂತ್ರ ಗಳನ್ನು ವಿತರಿಸಿರುವುದು ಸಂತಸಕರವಾದ ವಿಚಾರವಾಗಿದೆ. ಹಾಗೆಯೇ ಉತ್ತಿಷ್ಠ ಸಂಸ್ಥೆಯ ಸಹಯೋಗದಲ್ಲಿ ಪಶು ಇಲಾಖೆಯಲ್ಲಿ ಸುಸಜ್ಜಿತವಾದ ಲ್ಯಾಬ್ ಸಜ್ಜಾಗುತ್ತಿದೆ ಎಂದು ತಿಳಿಸಿದರು. ಆನೇ ಕಲ್ ಪುರಸಭೆ ಮಾಜಿ ಅಧ್ಯಕ್ಷ ಪದ್ಮನಾಭ್, ರಾಜೇಂದ್ರ ಪ್ರಸಾದ್, ಪ್ರವೀಣ್ ರೆಡ್ಡಿ, ಮಹಾಂತೇಶ್ ಹಾಜರಿದ್ದರು.

ಚಿತ್ರಗಳು: ಮೋಹನ್ ಕುಮಾರ್ ಬಿ.ಎನ್.



ಬೆಂಗಳೂರು ಪ್ರೆಸ್‌ಕ್ಲಬ್ ಆವರಣದಲ್ಲಿದ್ದ ಮರವೊಂದು ಮಳೆ, ಗಾಳಿಗೆ ಕುಸಿದು ಬಿದ್ದಿರುವುದು.



ಶಿವಾಜಿ ನಗರದ ರಸ್ತೆಯಲ್ಲಿ ಮಳೆ ನೀರು ನಿಂತು ವಾಹನ ಸವಾರರು ಸಂಚರಿಸಲು ಹರಸಾಹಸ ಪಡುತ್ತಿರುವುದು.



ವಿಧಾನಸೌಧದ ಕಾರಿಡಾರ್‌ನಲ್ಲಿ ಬುಧವಾರ ಸಂಜೆ ಸುರಿದ ಮಳೆನೀರು ನಿಂತಿರುವುದು.



ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು ಸಂಭವಿಸಿದ ದುರಂತ ಸ್ಥಳಕ್ಕೆ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿದ್ದರು.

ಕಿರುಸುದ್ದಿ

ಎಸ್.ಕಡಾಂಬಿ ಪ್ರೌಢ ಶಾಲೆಗೆ ಉತ್ತಮ ಫಲಿತಾಂಶ

• **ಬೆಂಗಳೂರು:** 2025-2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಬಸವೇಶ್ವರನಗರದಲ್ಲಿ ಎಸ್.ಕಡಾಂಬಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಒಟ್ಟಾರೆ ಶೇ.95 ರಷ್ಟು ಫಲಿತಾಂಶ ಬಂದಿದ್ದು, ನವಮಿ. ಎಸ್. 597/625 (ಶೇ. 95.52) ಅಂಕವನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಕ್ರಿತ್ವಿಕ್.ವಿ. ಚೌಡಣ್ಣನವರ್ 587/625 (ಶೇ.93.92) ಮತ್ತು ಇ.ಶ್ರೇಯಾ 572 (ಶೇ.91.52) ಅಂಕಗಳನ್ನು ಪಡೆದಿದ್ದಾರೆ. ಸುಮಾರು 15 ವಿದ್ಯಾರ್ಥಿಗಳು ಶೇ.80 ಗಿಂತಲೂ ಹೆಚ್ಚಿನ ಅಂಕಗಳನ್ನು ಪಡೆದು ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿರುವರು. ಉತ್ತಮ ಸಾಧನೆ ಮೂಲಕ ಶಾಲೆಗೆ ಕೀರ್ತಿ ತಂದಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಗೌರವಿಸಲಾಗುವುದು ಎಂದು ಕಲ್ಯಾಂಟೆ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ತಿಳಿಸಿದ್ದಾರೆ. ರಚಿಸುವೇಕೆಂದು ಒತ್ತಾಯಿಸಲಾಗಿದೆ.

ಬಾಕಿ ತೆರಿಗೆ ವಸೂಲಿಗೆ ಕಟ್ಟುನಿಟ್ಟಿನ ಕ್ರಮ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ಐದು ಪಾಲಿಕೆಗಳ ವ್ಯಾಪ್ತಿಯಲ್ಲಿನ ಸರ್ಕಾರಿ ಕಟ್ಟಡಗಳು ಪಾಲಿಕೆಗೆ ಪಾವತಿಸಬೇಕಿರುವ ನೂರಾರು ಕೋಟಿ ರೂಪಾಯಿಗಳ ಸೇವಾ ತೆರಿಗೆಯ ವಸೂಲಿಗೆ ಕ್ರಮವಹಿಸುವಂತೆ ಪಾಲಿಕೆ ಆಯುಕ್ತರಿಗೆ ಜಿಬಿಎ ಕಟ್ಟುನಿಟ್ಟಿನ ಸೂಚನೆ ನೀಡಿದೆ.



ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡ ಸೇರಿದಂತೆ ಜಿಬಿಎ ವ್ಯಾಪ್ತಿಯಲ್ಲಿನ ಸರ್ಕಾರಿ ಕಟ್ಟಡಗಳು 2025ರ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಸುಮಾರು 472.66 ಕೋಟಿ ರೂ.ಸೇವಾ ತೆರಿಗೆ ಬಾಕಿ ಇರಿಸಿಕೊಂಡಿದ್ದು ಬೆಳಕಿಗೆ ಬಂದಿತ್ತು. ಆ ಹಿನ್ನೆಲೆಯಲ್ಲಿ ಅಗತ್ಯ ಕ್ರಮಕ್ಕೆ ಮುಂದಾಗಿರುವ ಜಿಬಿಎ, ಐದು ನಗರ ಪಾಲಿಕೆಗಳ ಆಯುಕ್ತರಿಗೆ ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತರು ಸೂಚನೆ ನೀಡಿದ್ದಾರೆ. ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಸರ್ಕಾರಿ ಕಟ್ಟಡಗಳು ತೆರಿಗೆ ಪಾವತಿಸದೆ ವಂಚನೆ ಮಾಡುತ್ತಿವೆ ಎಂದು ಆರೋಪಿಸಿದ್ದರು. ಅಲ್ಲದೆ ಈ ಸಂಬಂಧ ದಾಖಲೆ ಬಿಡುಗಡೆ ಮಾಡಿ ಜಿಬಿಎ ಮುಖ್ಯ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದ್ದರು. ಎನ್.ಆರ್. ರಮೇಶ್ ಅವರ ಮನವಿಯನ್ನು ಉಲ್ಲೇಖಿಸಿ ವಿಶೇಷ ಆಯುಕ್ತರು ಕ್ರಮಕ್ಕೆ ಸೂಚನೆ ನೀಡಿದ್ದಾರೆ.

ಜಿಬಿಎ ನೀಡಿದ ಕಠಿಣ ಮಾರ್ಗಸೂಚಿಗಳು : ಪ್ರತಿಯೊಂದು ಸರ್ಕಾರಿ ಕಟ್ಟಡ, ಖಾಲಿ ನಿವೇಶನ ಹಾಗೂ ವಾಣಿಜ್ಯ ಹಗಳ ಅಳತೆ ಮತ್ತು ಬಳಕೆಯ ವಿವರಗಳನ್ನೊಳಗೊಂಡ ಪ್ರತ್ಯೇಕ ಕಡತ ಹಾಗೂ ಬೇಡಿಕೆ, ವಸೂಲಾತಿ, ಬಾಕಿ ವಹಿಯನ್ನು ಕಡ್ಡಾಯವಾಗಿ ಪ್ರತ್ಯೇಕ ಕಡತ ನಿರ್ವಹಿಸಬೇಕು. ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಸ್ವತ್ತುಗಳನ್ನು ಕೂಡಲೇ ಪತ್ತೆಹಚ್ಚಿ ತೆರಿಗೆ ನಿಗದಿಪಡಿಸಬೇಕು ಮತ್ತು ಬಾಕಿ ಪಾವತಿಗೆ ತಕ್ಷಣವೇ ನೋಟೀಸ್ ನೀಡಬೇಕು. ಒಂದು ವೇಳೆ ಕಡಿಮೆ ತೆರಿಗೆ ನಿಗದಿಪಡಿಸಿದ್ದರೆ, ಅದನ್ನು ಕೂಡಲೇ ಪರಿಷ್ಕರಿಸಿ ವ್ಯತ್ಯಾಸದ ಮೊತ್ತವನ್ನು ವಸೂಲಿ ಮಾಡಬೇಕೆಂದು ಕಠಿಣ ಸೂಚನೆ ನೀಡಲಾಗಿದೆ.

ಉನ್ನತ ಅಧಿಕಾರಿಗಳ ಭೇಟಿ , ಎಚ್ಚರಿಕೆ

ಅತೀ ಹೆಚ್ಚು ಬಾಕಿ ಇರುವ ಇಲಾಖೆಗಳ ಮುಖ್ಯಸ್ಥರಿಗೆ ಆಯುಕ್ತರು ಅರೆ ಸರ್ಕಾರಿ ಪತ್ರ ಬರೆಯುವುದಲ್ಲದೆ, ಖುದ್ದಾಗಿ ಭೇಟಿ ನೀಡಿ ಹಣ ವಸೂಲಿ ಮಾಡಬೇಕು. ತೆರಿಗೆ ವಸೂಲಾತಿಯಲ್ಲಿ ವಿಳಂಬ ಧೋರಣೆ ತೋರುವ ಅಥವಾ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದಾಗಿ ವಿಶೇಷ ಆಯುಕ್ತರು ಎಚ್ಚರಿಕೆ ನೀಡಿದ್ದಾರೆ. ಕೇಂದ್ರ ಕಚೇರಿಯಿಂದ ನೀಡಲಾದ ಸ್ಪೆಡ್ ಶೀಟ್‌ನಲ್ಲಿ ದೈನಂದಿನ ಪ್ರಗತಿಯನ್ನು ನಮೂದಿಸಬೇಕೆಂದು ತಿಳಿಸಲಾಗಿದೆ.

ಗುಡುಗು ಸಿಡಿಲಿನ ನಡುವೆ ಭಾರೀ ಮಳೆ | ವಿವಿಧ ಬಡಾವಣೆಗೆ ನುಗ್ಗಿದ ನೀರು, ಜನರ ಪರದಾಟ

ಭಾರೀ ಮಳೆ ಅವಾಂತರಕ್ಕೆ ಬೆಚ್ಚಿಬಿದ್ದ ನಗರ

• **ಬೆಂಗಳೂರು:** ಬಿಸಿಲಿನ ತಾಪಕ್ಕೆ ಹೈರಾಣಾಗಿದ್ದ ಬೆಂಗಳೂರಿಗೆ ಬುಧವಾರ ಸಂಜೆ ವರುಣ ರಾಯ ಶಾಕ್ ನೀಡಿದ್ದಾನೆ. ಒಂದೆಡೆ ನಗರದ ತಾಪಮಾನವನ್ನು ತಂಪಾಗಿಸಿದರೆ, ಇನ್ನೊಂದೆಡೆ ಅಷ್ಟೇ ಅವಾಂತರಗಳನ್ನು ಸೃಷ್ಟಿಸಿದೆ.

ಬುಧವಾರ ಸಂಜೆಯಾಗುತ್ತಿದ್ದಂತೆ ನಗರದಾದ್ಯಂತ ಬಿರುಗಾಳಿ, ಗುಡುಗು ಸಮೇತ ಧಾರಾಕಾರವಾಗಿ ಆಲಿಕಲ್ಲು ಮಳೆ ಸುರಿದಿದೆ. ದಿಢೀರ್ ಸುರಿದ ಮಳೆಗೆ ಜನರು ಸೇರಿದಂತೆ ವಾಹನ ಸವಾರರು ಪರದಾಡಿದರು.

ಮೆಜೆಸ್ಟಿಕ್, ಕೆ.ಆರ್.ಮಾರುಕಟ್ಟೆ, ಶಾಂತಿನಗರ, ರಿಚ್ಮಂಡ್ ಸರ್ಕಲ್, ಕೋರಮಂಗಲ, ಮಲ್ಲೇಶ್ವರಂ, ಶಿವಾನಂದ ಸರ್ಕಲ್, ಗುಟ್ಟಹಳ್ಳಿ, ವಸಂತನಗರ, ಶಾಂತಿನಗರ, ಆರ್.ಟಿ.ನಗರ, ಜಯ ನಗರ, ಜೆ.ಪಿ.ನಗರ, ಹೆಬ್ಬಾಳ, ಶಿವಾಜಿನಗರ, ಬನಶಂಕರಿ, ಸದಾಶಿವ ನಗರ, ವಿಲ್ಸನ್ ಗಾರ್ಡನ್, ಲಾಲ್ ಬಾಗ್, ಮಹದೇವಪುರ, ವೈಟ್‌ಫೀಲ್ಡ್ ಸೇರಿದಂತೆ ನಗರದಾದ್ಯಂತ ಮಳೆಯಾಗಿದೆ.

ಬಿರು ಬಿಸಿಲ ನಡುವೆ ಆಗಮಿಸಿದ ದಿಢೀರ್ ಮಳೆಗೆ ರಸ್ತೆ ಬದಿ ವ್ಯಾಪಾರಿಗಳು ಪರದಾಡಿದ್ದು, ಫ್ಲೈಓವರ್, ಸ್ಕೈವಾಕ್ ಕೆಳಗೆ ಬೈಕ್ ಸವಾರರು ಆಶ್ರಯ ಪಡೆದ ದೃಶ್ಯಗಳು ಕಂಡು ಬಂದವು. ತುಂಬಾದಿನಗಳ ನಂತರ ನಗರದಲ್ಲಿ ಮಳೆ ಸುರಿದು ನಗರವನ್ನು ತಂಪಾಗಿಸುವ ಜೊತೆಗೆ ಮಳೆ ಸೃಷ್ಟಿಸಿದ ಅವಾಂತರ ನಗರದ ಜನತೆಯನ್ನು ಬೆಚ್ಚಿಬೀಳಿಸಿದೆ. ಮಳೆಯಿಂದ ಪ್ರಮುಖ ಆಸ್ಪತ್ರೆ ಬೌರಿಂಗ್‌ನಲ್ಲಿ ಕೌಂಪೌಂಡ್ ಬಿದ್ದ ಪರಿಣಾಮ 7 ಜನರು ಮೃತಪಟ್ಟಿದ್ದು, 7 ಮಂದಿ ಗಾಯಾಳು ಗಳಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ನಡೆದಿದೆ. ಯಾರಾಬ್ ನಗರದಲ್ಲಿ ಮಳೆಬಿದ್ದ ಪರಿಣಾಮ ವಿದ್ಯುತ್ ಶಾಕ್‌ಗೆ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ. ವೇಗಾ ಸಿಟಿ ಮಾಲ್ ಸಮೀಪದ ಸಾರಕ್ಕಿ ಬಸ್ ನಿಲ್ದಾಣದ ಬಳಿ ಜೆಡಿ ಮಾರಾ ಸ್ಲಂ ನಿವಾಸಿ 35 ವರ್ಷದ ರಘು ಎಂಬವರು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಘಟನೆ ನಡೆದಿದೆ. ಮಳೆಯ ಮತ್ತು ಗಾಳಿಯ ತೀವ್ರತೆಗೆ ಐದು ನಗರ ಪಾಲಿಕೆಗಳಿಂದ 170 ಮರಗಳು ಧರೆಗುರುಳಿದ್ದು, 408 ಮರದ ಕೊಂಬೆಗಳು ಮುರಿದು ಬಿದ್ದಿವೆ. ಪರಿಣಾಮ ಕಾರು, ಬಸ್, ಲಾರಿ ಹಾಗೂ ಬೈಕ್ ಗಳು ಜಖಂಗೊಂಡಿವೆ. ಕೆಲವೆಡೆ ರಸ್ತೆಗಳು ಬಂದಾಗಿ ಸಾರ್ವಜನಿಕರು ಪರದಾಡಿದರು. ಹಲವೆಡೆ ರಸ್ತೆ ಮೇಲೆ ನೀರು ನಿಂತ ಹಿನ್ನೆ ವಾಹನ ಸಂಚಾರ ನಿಧಾನಗತಿಯಾಗಿ ಟ್ರಾಫಿಕ್ ಸಮಸ್ಯೆ ಎದುರಾಯಿತು. ಅಲ್ಲದೆ ತಗ್ಗು ಪ್ರದೇಶದ ರಸ್ತೆಗಳು ಜಲಾವೃತವಾಗಿ ದ್ವಿಚಕ್ರ ವಾಹನ ಸವಾರರ ಸಂಚಾರ ಅಸ್ತವ್ಯಸ್ತಗೊಂಡಿತು. ಬೆಂಗಳೂರಿನ ಕಮಿಷನರ್ ಕಚೇರಿ ಆವರಣದಲ್ಲಿ ಮರದ ಕೊಂಬೆಗಳು ಮುರಿದು ಬಿದ್ದಿದ್ದು, ಕೆಲವು ವಾಹನಗಳಿಗೆ ಹಾನಿಯಾಗಿದೆ. ಆವರಣದಲ್ಲಿ ನೀರು ತುಂಬಿ ಹೊಳೆಯಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಗೊರಗುಂಟೆಪಾಳ್ಯದಲ್ಲಿ ಮರ ಬಿದ್ದ ಹಿನ್ನೆಲೆ ರಸ್ತೆ ಬದಿ ನಿಲ್ಲಿಸಿದ್ದ ಕಾರು ಜಖಂಗೊಂಡಿದೆ. ಪ್ರಮುಖವಾಗಿ ಬ್ಯಾಗೋರ್ ವೃತ್ತ, ಬಸವನಗುಡಿ, ಪೆನ್ಸರ್ ರಸ್ತೆ, ಪುಲಿಕೇಶಿ ನಗರ, ಫ್ರೇಜರ್ ಟೌನ್, ಐಜಿ ಸರ್ಕಲ್, ಅರವಿಂದ್ ಜಂಕ್ಷನ್, ಸೌತ್ ಎಂಡ್ ಸರ್ಕಲ್, ಹಳ್ಳಿ ತಿಂಡಿ ಜಂಕ್ಷನ್, ಅರವಿಂದ್ ಜಂಕ್ಷನ್, ಜಯನಗರ, ನಾಗಾ ಜಂಕ್ಷನ್, ಜಯಮಹಲ್ ರಸ್ತೆ, ಮೋದಿ ಆಸ್ಪತ್ರೆ, ಪ್ಯಾಲೇಸ್ ಗುಟ್ಟಹಳ್ಳಿ ಸೇರಿದಂತೆ ಹಲವೆಡೆ ಮರಬಿದ್ದಿದೆ. ಜಯನಗರದ ಮಾಧವನ್ ಪಾರ್ಕ್ ಬಳಿ ಬಸ್ ಮೇಲೆ ದೊಡ್ಡ ಮರವೊಂದು ಉರುಳಿಬಿದ್ದಿದೆ. ಅದೃಷ್ಟವಶಾತ್ ಯಾವುದೇ ಸಾವುನೋವುಗಳು ಆಗಿಲ್ಲ.

ವಿಧಾನ ಸೌಧಕ್ಕೆ ನುಗ್ಗಿದ ನೀರು: ನಗರದಲ್ಲಿ ಅರ್ಭಟಿಸಿದ ಮಳೆ ನೀರು ಆಡಳಿತ ಕೇಂದ್ರಕ್ಕೂ ನುಗ್ಗಿದೆ. ವಿಧಾನಸೌಧದ ಮೂರು ಮಹಡಿಗಳ ಕಾರಿಡಾರ್‌ಗಳಲ್ಲಿ ನೀರು ನಿಂತ ಪರಿಣಾಮ ಸಾರ್ವಜನಿಕರು, ಅಧಿಕಾರಿಗಳು, ಸಿಬ್ಬಂದಿ ಹಾಗೂ ನೌಕರರು ನೀರಿನಲ್ಲೇ ನಡೆದುಕೊಂಡು ಹೋಗುವ ಸ್ಥಿತಿ ನಿರ್ಮಾಣವಾಯಿತು. ಅಲ್ಲದೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಕೊಠಡಿಯ ಒಳಭಾಗಕ್ಕೂ ನೀರು ನುಗ್ಗಿದೆ. ಇಡೀ ವಿಧಾನಸೌಧ ನೀರು ಮಯವಾಗಿತ್ತು.

ಕಾರ್ಯಪ್ರವೃತ್ತವಾದ ಜಿಬಿಎ: ಜಿಬಿಎ ತಕ್ಷಣ ಕಾರ್ಯಪ್ರವೃತ್ತವಾಗಿ, ತುರ್ತು ಕಾರ್ಯಪಡೆ, ಅರಣ್ಯ ವಿಭಾಗಗಳು ಮರ ತೆರವು ಸೇರಿದಂತೆ ಪರಿಹಾರ ಕ್ರಮಗಳನ್ನು ಕೈಗೊಂಡಿದೆ.



5 ಸಾವಿರ ಪುಸ್ತಕಗಳು ನೀರು ಪಾಲು

ಭಾರಿ ಮಳೆಯಿಂದಾಗಿ ಚರ್ಚ್ ಸ್ಟ್ರೀಟ್ ನಲ್ಲಿರುವ ದಿ ಬುಕ್‌ವರ್ಮ್ ಪುಸ್ತಕದ ಮಳಿಗೆಗೆ ನೀರು ನುಗ್ಗಿ ಸುಮಾರು 14 ಲಕ್ಷ ರೂಪಾಯಿಗೂ ಅಧಿಕ ಮೌಲ್ಯದ 5,000 ಪುಸ್ತಕಗಳು ನಾಶವಾಗಿವೆ. ಒಳಚರಂಡಿ ವ್ಯವಸ್ಥೆಯ ವೈಫಲ್ಯ ನೀರು ನುಗ್ಗಲು ಕಾರಣ ಎಂದು ಬುಕ್ ಮಾಲೀಕರು ತಿಳಿಸಿದ್ದಾರೆ.

ಸರಾಸರಿ 60 ಮಿ.ಮೀ. ಮಳೆ

ನಗರದಲ್ಲಿ ಬುಧವಾರ ಸಂಜೆ 6 ಗಂಟೆವರೆಗಿನ ಮಾಹಿತಿ ಪ್ರಕಾರ ಸರಾಸರಿ 60 ಮಿ.ಮೀಮಳೆ ಬಿದ್ದಿದ್ದು, ಗರಿಷ್ಠ 77.6 ಮಿ.ಮೀ ಹಾಗೂ ಕನಿಷ್ಠ 8 ಮಿ.ಮೀ ಮಳೆ ಯಾಗಿದೆ. ಸಂಪಂಗಿರಾಮನಗರದಲ್ಲಿ 39 ಮಿ.ಮೀ, ಪುಲಕೇಶಿ ನಗರದಲ್ಲಿ 36.50 ಮಿ.ಮೀ, ಬೊಮ್ಮನಹಳ್ಳಿಯಲ್ಲಿ 31, ಕಾಟನ್‌ಪೇಟೆಯಲ್ಲಿ 29, ಎಚ್‌ಎಲ್ ಏರ್‌ಪೋರ್ಟ್‌ನಲ್ಲಿ 25, ಬಿಟಿಎಂ ಲೇಔಟ್‌ನಲ್ಲಿ 22.50, ಮಾರತಹಳ್ಳಿಯಲ್ಲಿ 18.50 ಮಿ.ಮೀ ಮಳೆ ಬಿದ್ದಿದೆ.

ಬೌರಿಂಗ್ ಆಸ್ಪತ್ರೆಗೆ ಡಿಕೆಶಿ ಭೇಟಿ

ಬೌರಿಂಗ್ ಆಸ್ಪತ್ರೆಯಲ್ಲಿ ಕಂಪೌಂಡ್ ಕುಸಿದು ಸಾವು-ನೋವುಗಳು ಸಂಭವಿಸಿದ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸತ್ತವರ ಕುಟುಂಬದವರಿಗೆ ಸಾಂತ್ವನ ಹೇಳಿ, ಗಾಯಾಳುಗಳ ಸ್ಥಿತಿ ವಿಚಾರಿಸಿದರು. ಮಳೆಯ ಆರ್ಭಟಕ್ಕೆ ಒಟ್ಟು 8 ಮಂದಿ ಸಾವನ್ನಪ್ಪಿದ್ದಾರೆ. ಗೋಡೆ ಕುಸಿತದ ಘಟನೆಯಲ್ಲಿ 7 ಮಂದಿ ಹಾಗೂ ವೇಗಾಸಿಟಿ ಮಾಲ್ ಬಳಿ ವಿದ್ಯುತ್ ಅವಘಡದಿಂದ ಒಬ್ಬರು ಮೃತಪಟ್ಟಿದ್ದಾರೆ. ಕುಸಿದ ಗೋಡೆಯು ಸುಮಾರು 100 ವರ್ಷ ಹಳೆಯದಾಗಿದ್ದು, ಮಳೆಯ ತೀವ್ರತೆಗೆ ಕುಸಿದಿದೆ .ಎಂದು ಅವರು ವಿವರಿಸಿದ್ದಾರೆ. ಮೃತಪಟ್ಟವರಲ್ಲಿ ಹೆಚ್ಚಿನವರು ರಸ್ತೆ ಬದಿಯ ವ್ಯಾಪಾರಿಗಳಾಗಿದ್ದು, 6 ವರ್ಷದ ಮಗುವೂ ಇದೆ. ನಗರದಾದ್ಯಂತ ಅಪಾಯಕಾರಿ ಸ್ಥಿತಿಯಲ್ಲಿರುವ ಮರಗಳನ್ನು ಮತ್ತು ಮರದ ಕೊಂಬೆಗಳನ್ನು ಕತ್ತರಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಪಾಯಕಾರಿ ಗೋಡೆಗಳ ಬಳಿ ಜನರು ನಿಲ್ಲದಂತೆ ಅಥವಾ ವ್ಯಾಪಾರ ಮಾಡದಂತೆ ಕ್ರಮ ಕೈಗೊಳ್ಳಲು ಜಿಬಿಎ ಮತ್ತು ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಲಾಗಿದೆ. ಸರ್ಕಾರ ಸಂತ್ರಸ್ತರ ಪರವಾಗಿ ನಿಲ್ಲಲಿದೆ ಎಂದು ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದಾರೆ.

ಇಬ್ಬರು ವಿದ್ಯಾರ್ಥಿನಿಯರ ನಾಪತ್ತೆ ಪ್ರಕರಣ

ಅಪರಾಧ ಇಲಾಖೆಯಿಂದ ಸಿಐಡಿಗೆ



• **ಬೆಂಗಳೂರು:** ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಾಪತ್ತೆಯಾಗಿದ್ದ ಇಬ್ಬರು ಪಿಯುಸಿ ವಿದ್ಯಾರ್ಥಿನಿಯರ ಪ್ರಕರಣವನ್ನು ರಾಜ್ಯ ಅಪರಾಧ ತನಿಖಾ ಇಲಾಖೆ (ಸಿಐಡಿ) ಗೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ.

ತನಿಷ್ಕಾ ಮತ್ತು ತೇಜಸ್ವಿನಿ ನಿಗೂಢವಾಗಿ ನಾಪತ್ತೆಯಾದ ವಿದ್ಯಾರ್ಥಿನಿಯರು. ಅವರ ಕಳೆದ ಮೂರು ತಿಂಗಳಿನಿಂದ ಪೊಲೀಸರಿಗೆ ಸವಾಲಾಗಿದ್ದ ಈ ಮಿಸ್ಟರಿ ಕೇಸ್‌ಅನ್ನು ಸಿಐಡಿ ಎಗಲಿಗೆವಹಿಸಿದೆ. ಜ.31ರಂದು ದ್ವಿತೀಯ ಪಿಯುಸಿ ಪರೀಕ್ಷೆಯ ಭಯದಿಂದ ಆಧಾರ್ ಕಾರ್ಡ್ ಮತ್ತು 3 ಸಾವಿರ ಹಣದೊಂದಿಗೆ ಮನೆ ಬಿಟ್ಟಿದ್ದ ಈ ವಿದ್ಯಾರ್ಥಿನಿಯರು ಈವರೆಗೆ ಪತ್ತೆಯಾಗಿಲ್ಲ. ಮೊಬೈಲ್ ಫೋನ್ ಬಳಸುತ್ತಿಲ್ಲ ಹಾಗೂ ಎಟಿಎಂ ಕಾರ್ಡ್‌ಗಳನ್ನೂ ಮುಟ್ಟುತ್ತಿಲ್ಲ. ಇದು ಪೊಲೀಸರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ತಾಂತ್ರಿಕ ಸಾಕ್ಷ್ಯಗಳಿಲ್ಲದೆ ಅವರು ಯಾರಿಗೂ ಸಿಗದಂತೆ ಅಜ್ಞಾತವಾಗಿರುವುದು ಹಲವು ಅನುಮಾನಗಳಿಗೆ ದಾರಿ ಮಾಡಿ ಕೊಟ್ಟಿದೆ. ಮನೆ ಬಿಟ್ಟ ಈ ಗೆಳತಿಯರು ಶಕ್ತಿ ಯೋಜನೆಯಲ್ಲಿ ಉಚಿತ ಬಸ್ ಪ್ರಯಾಣ ಮಾಡುತ್ತಾ ರಾಜ್ಯದ ವಿವಿಧೆಡೆ ಸುತ್ತುತ್ತಿರುವುದು ಈ ಹಿಂದೆ ಸಿಸಿಟಿವಿ ದೃಶ್ಯದಿಂದ ಪತ್ತೆಯಾಗಿತ್ತು. ಒಮ್ಮೆ ಮಲೆಮಹದೇಶ್ವರ ಬೆಟ್ಟದ ಬಳಿ ಇವರು ಇರುವ ಸುಳಿವು ಸಿಕ್ಕಿ ಪೊಲೀಸರು ಅಲ್ಲಿಗೆ ತಲುಪುವಷ್ಟರಲ್ಲಿ, ಅವರು ಅಲ್ಲಿಂದ ಜಾರಿಕೊಂಡಿದ್ದರು. ಮೈಸೂರು, ಚಾಮರಾಜನಗರ ಮಾತ್ರವಲ್ಲದೆ ಹೊರ ರಾಜ್ಯದಲ್ಲಿಯೂ ಪೊಲೀಸರು ಗಾಳ ಹಾಕಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ತಮ್ಮ ಮಕ್ಕಳ ಪತ್ತೆಯಾಗದ ಹಿನ್ನೆಲೆಯಲ್ಲಿ ಕಂಗಾಲಾದ ಪೋಷಕರು ಪ್ರಕರಣವನ್ನು ಸಿಐಡಿಗೆ ವಹಿಸುವಂತೆ ಮನವಿ ಮಾಡಿದ್ದರು ಹಾಗೂ ಹೈಕೋರ್ಟ್‌ನಲ್ಲಿ ಹೆಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು. ಈ ಬೆಳವಣಿಗೆಯ ಬೆನ್ನಲ್ಲೇ ಪ್ರಕರಣದ ಫೈಲ್‌ಗಳು ಸಿಐಡಿ ಕೈಸೇರಿವೆ. ವಿದ್ಯಾರಣ್ಯಪುರ ಪೊಲೀಸರು ಇದುವರೆಗಿನ ಸಂಪೂರ್ಣ ತನಿಖಾ ವರದಿಯನ್ನು ಸಿಐಡಿಗೆ ಹಸ್ತಾಂತರಿಸಿದೆ. ವಿಶೇಷ ತಂಡವು ಈಗ ಈ ನಿಗೂಢ ನಾಪತ್ತೆ ಪ್ರಕರಣದ ಬೆನ್ನತ್ತಿದೆ. ಎಲ್ಲಿಯೂ ಅಪರಿಚಿತ ಮೃತದೇಹಗಳು (ಯುಡಿಆರ್) ಪತ್ತೆಯಾಗದ ಕಾರಣ, ವಿದ್ಯಾರ್ಥಿನಿಯರು ಸುರಕ್ಷಿತವಾಗಿದ್ದು ಉದ್ದೇಶಪೂರ್ವಕವಾಗಿಯೇ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆ-2ಗೆ ನೋಂದಣಿ

• **ಬೆಂಗಳೂರು:** ದ್ವಿತೀಯ ಪಿಯುಸಿ ಪರೀಕ್ಷೆ-2ಕ್ಕೆ ರಾಜ್ಯಾದ್ಯಂತ ಒಟ್ಟು 1,72,151 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಮಾಹಿತಿ ನೀಡಿದೆ.

ಇವುಗಳ ಪೈಕಿ 92,554 ವಿದ್ಯಾರ್ಥಿಗಳು, 79,597 ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 1,72,151 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಅನುತ್ತೀರ್ಣ ವಿದ್ಯಾರ್ಥಿಗಳು 82,746, ಖಾಸಗಿ ಅಭ್ಯರ್ಥಿಗಳು 794, ಪುನಾರಾವರ್ತಿತ ವಿದ್ಯಾರ್ಥಿಗಳು 39,099, ಅಂಕ ಸುಧಾರಣೆಗೆ 49,512 ಅರ್ಜಿ ಹಾಕಿದ್ದಾರೆ.

ಆರ್ಥಿಕ ಹೊರೆ ಇಲ್ಲದೆ ನೀರು ಸಂಪರ್ಕ | ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ

ಸರಳ ಕಾವೇರಿ ಯೋಜನೆ ವಿಸ್ತರಣೆ



• **ಬೆಂಗಳೂರು :** ಆರ್ಥಿಕ ಹೊರೆಯಿಲ್ಲದೆ ಸುಲಭವಾಗಿ ನೀರಿನ ಸಂಪರ್ಕ ಕಲ್ಪಿಸಲು ಜಾರಿಗೆ ತರಲಾಗಿರುವ ಸರಳ ಕಾವೇರಿ ಯೋಜನೆಯನ್ನು ಮುಂದಿನ ಆದೇಶದವರೆಗೆ ವಿಸ್ತರಿಸಲಾಗಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕಾವೇರಿ ನೀರಿನ ಹೊಸ ಸಂಪರ್ಕ ಪಡೆಯುವ ಸಂದರ್ಭದಲ್ಲಿ ಪಾವತಿಸಬೇಕಾದ ಪ್ರೊರೇಟಾ ಶುಲ್ಕವನ್ನು ಒಮ್ಮೆಲೇ ಪಾವತಿಸಲು ಸಾಧ್ಯವಾಗದ ಬಡವರು, ಮಧ್ಯಮ ವರ್ಗದವರು ಮತ್ತು ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳಿಗೆ ನೆರವಾಗಲು ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ಮೇ 2025 ರಲ್ಲಿ ಪ್ರಾರಂಭವಾದ ಈ ಯೋಜನೆಗೆ ಸಾರ್ವಜನಿಕರಿಂದ ಅಭೂತ ಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಸಣ್ಣ ನಿವೇಶನದಾರರಿಗೆ ಆದ್ಯತೆ: ಸರಳ ಕಾವೇರಿ ಯೋಜನೆಯಡಿ 600 ಅಡಿಗಳ ಬಿಲ್ಟ್-ಅಪ್ ಏರಿಯಾ ಹೊಂದಿರುವ ಸಣ್ಣ ನಿವೇಶನದಾರರು ಕೇವಲ 1,000 ರೂ. ಆರಂಭಿಕ ಹಣ ಪಾವತಿಸಿ ನೀರಿನ ಸಂಪರ್ಕ ಪಡೆಯಬಹುದು. ಬಾಕಿ ಉಳಿದ ಮೊತ್ತವನ್ನು ಸುಲಭ ಕಂತುಗಳಲ್ಲಿ (EMI) ಪಾವತಿಸಲು ಅವಕಾಶ ನೀಡಲಾಗಿದೆ.

ಇಎಂಐ ಸೌಲಭ್ಯ : ಒಮ್ಮೆಲೇ ದೊಡ್ಡ ಮೊತ್ತದ ಡಿಮ್ಯಾಂಡ್ ನೋಟಿಸ್ ಪಾವತಿಸಲು ಕಷ್ಟಪಡುವ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಇಎಂಐ ವ್ಯವಸ್ಥೆ ನೀಡಲಾಗಿದೆ. ಒಟ್ಟು ಶುಲ್ಕದ ಶೇ.20 ರಷ್ಟು ಮೊತ್ತವನ್ನು ಆರಂಭದಲ್ಲಿ ಪಾವತಿಸಿ ಸಂಪರ್ಕ ಪಡೆಯಬಹುದು. ಉಳಿದ ಶೇ.80 ರಷ್ಟು ಹಣವನ್ನು ಪಾವತಿಸಲು 12 ತಿಂಗಳ ಕಾಲಾವಕಾಶ ನೀಡಲಾಗಿದೆ. ಕೇವಲ ಮನೆಗಳಿಗೆ ಮಾತ್ರವಲ್ಲದೆ, ವಾಣಿಜ್ಯ ಕಟ್ಟಡಗಳಿಗೂ ಇಎಂಐ ಮೂಲಕ ಸರಳ ಕಾವೇರಿ ಸೌಲಭ್ಯವನ್ನು ವಿಸ್ತರಿಸಲಾಗಿದೆ. ನಾನ್-ಡೊಮೆಸ್ಟಿಕ್

ಯಶೋಧರ ದಾಸಪ್ಪ ಪ್ರಶಸ್ತಿಗೆ ಮಲ್ಲಿಕಾ ಘಂಟಿ ಆಯ್ಕೆ



• **ಬೆಂಗಳೂರು:** ಕನ್ನಡ ಜನಶಕ್ತಿ ಕೇಂದ್ರ ನೀಡುವ 2026ನೇ ಸಾಲಿನ ಯಶೋಧರ ದಾಸಪ್ಪ ಪ್ರಶಸ್ತಿಗೆ ಹಿರಿಯ ಸಾಹಿತಿಗಳು ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಮಲ್ಲಿಕಾ.ಎಸ್.ಘಂಟಿ ರವರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು 15 ಸಾವಿರ ರೂ. ನಗದು, ಕಂಚಿನ ಫಲಕ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಮೇ.20ರ ಸಂಜೆ 5.15 ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ರವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ಖ್ಯಾತ ವಿಮರ್ಶಕಿ ಡಾ. ಎಂ.ಎಸ್.ಆಶಾದೇವಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾರೆ. ಕ.ಸಾ.ಪ. ದ ನಿಕಟಪೂರ್ವ ಕೋಶಾಧ್ಯಕ್ಷ ಪಿ.ಮಲ್ಲಿಕಾರ್ಜುನಪ್ಪ ರವರು ಅಧ್ಯಕ್ಷತೆ ವಹಿಸುವರು.

ಡಾ. ಮಲ್ಲಿಕಾ.ಎಸ್.ಘಂಟಿ ಅವರು ಸಾಹಿತಿ ಗಳಾಗಿ, ಪ್ರಾಧ್ಯಾಪಕರಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೊದಲ ಮಹಿಳಾ ಕುಲಪತಿಗಳಾಗಿ ಮತ್ತು ಸ್ತ್ರೀಪರ ಹೋರಾಟಗಾರ್ತಿ ಯಾಗಿ ಹೆಸರಾಗಿದ್ದಾರೆ. ದಲಿತ-ಬಂಡಾಯ ಸಂಘಟನೆಯ ರಾಜ್ಯ ಸಂಚಾಲಕಿಯಾಗಿ ಗಮನಾರ್ಹ ಕೆಲಸ ಮಾಡಿದ್ದಾರೆ.

ಘಂಟಿ ರವರು, ಸದಾ ಅಸಮಾನತೆ ಮತ್ತು ಮೌಢ್ಯದ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಸೊಂಡೂರಿನ ಕುಮಾರಸ್ವಾಮಿ ದೇವಾಲಯಕ್ಕೆ ಮಹಿಳೆಯರ ಪ್ರವೇಶ, ಗಣಿ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಒತ್ತಾಸೆಯಾಗಿ ನಿಂತದ್ದು, ಕನ್ನಡ ವಿ.ವಿ.ಯಲ್ಲಿ ದಕ್ಷ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ.

ಪೊಲೀಸ್ ಕಾರ್ಯಾಚರಣೆ: 16 ಆರೋಪಿಗಳ ಬಂಧನ

36.67 ಕೋಟಿ ಮೌಲ್ಯದ ಮಾದಕವಸ್ತು ವಶ

• **ಬೆಂಗಳೂರು:** ನಗರದಲ್ಲಿ ಮಾದಕ ವಸ್ತುಗಳ ಸಾಗಾಣಿಕೆ ಮತ್ತು ಮಾರಾಟ ಜಾಲದ ವಿರುದ್ಧ ಪೊಲೀಸರು ಬೃಹತ್ ಕಾರ್ಯಾಚರಣೆ ನಡೆಸಲಾಗಿದೆ. ಒಟ್ಟು 36.67 ಕೋಟಿ ರೂ. ಮೌಲ್ಯದ ವಿವಿಧ ಮಾದಕ ದ್ರವ್ಯವನ್ನು ವಶಪಡಿಸಿಕೊಂಡಿದ್ದಾರೆ.

ಈ ಸಂಬಂಧ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ ಮತ್ತು ವಿವಿಧ ವಲಯದ ಪೊಲೀಸರು ಬಾಗಲೂರು, ಆಡುಗೋಡಿ, ಚಿಕ್ಕಜಾಲ, ಎಚ್‌ಎಸ್‌ಆರ್ ಲೇಔಟ್, ಯಶವಂತಪುರ ಠಾಣಾ ವ್ಯಾಪ್ತಿಗಳಲ್ಲಿ ಜಂಟಿಯಾಗಿ ದಾಳಿ ನಡೆಸಿ ಒಟ್ಟು 16 ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಲ್ಲಿ 4 ವಿದೇಶಿ ಪ್ರಜೆಗಳು, 8 ಹೊರ ರಾಜ್ಯದವರು ಹಾಗೂ 4 ಮಂದಿ ಸ್ಥಳೀಯರಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿಗಳೇ ಇವರ ಟಾರ್ಗೆಟ್: ಆರೋಪಿಗಳು ವಿದೇಶ ಹಾಗೂ ಹೊರರಾಜ್ಯಗಳಿಂದ ಕಡಿಮೆ ದರಕ್ಕೆ ಮಾದಕ ವಸ್ತುಗಳನ್ನು ತಂದು, ಬೆಂಗಳೂರಿನ ಕಾಲೇಜು ವಿದ್ಯಾರ್ಥಿಗಳನ್ನು ಮತ್ತು ಸಾರ್ವಜನಿಕರನ್ನು ಗುರಿಯಾಗಿಸಿಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂಬುದು ಪ್ರಾಥಮಿಕ ವಿಚಾರಣೆಯಿಂದ ತಿಳಿದುಬಂದಿದೆ. ಸದ್ಯ ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಈ ಜಾಲದ ಹಿಂದಿರುವ ದೊಡ್ಡ ತಲೆಗಳ ಪತ್ತೆಗೆ ತನಿಖೆ ಮುಂದುವರಿದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಜಪ್ತಿಯಾದ ವಸ್ತುಗಳು


9.64 ಕೆ.ಜಿ. ಎಂಡಿಎಂಎ, 5 ಕೆಜಿ ಹೈಡ್ರೋ ಗಾಂಜಾ, 19,755 ಎಲ್‌ಎಸ್‌ಡಿ ಸ್ಟ್ರಿಪ್ಸ್, 156 ಗ್ರಾಂ ಹೆರಾಯಿನ್, 618 ಗ್ರಾಂ ಚರಸ್, 332 ಗ್ರಾಂ ಕೊಕೇನ್, 315 ಗ್ರಾಂ ಡ್ರಗ್ ಮಿಶ್ರಿತ ಗಮ್ಮೀಸ್, ಹಾಗೂ 11.470 ಕೆ.ಜಿ. ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಇದರ ಅಂದಾಜು ಒಟ್ಟು ಮೌಲ್ಯ 36.67 ಕೋಟಿ ರೂ. ಅಂದಾಜಿಸಲಾಗಿದೆ.

ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಮೇಲ್ವಿಚಾರಣೆಯಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಜಂಟಿ ಪೊಲೀಸ್ ಆಯುಕ್ತರು ಹಾಗೂ ಡಿಸಿಪಿ, ಎಸಿಪಿಗಳು ಯಶಸ್ವಿಯಾಗಿದ್ದಾರೆ.

ತೆರಿಗೆ ಪಾವತಿ: ರಿಯಾಯಿತಿಗೆ ಮನವಿ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿದಾರರಿಗೆ ಶೇ.5ರಷ್ಟು ರಿಯಾಯಿತಿಯನ್ನು ವಿಸ್ತರಣೆ ಮಾಡಬೇಕೆಂದು ನೀಡಬೇಕೆಂದು ಆಗ್ರಹಿಸಿ ಮಾಜಿ ಕಾರ್ಪೋರೇಟರ್‌ಗಳಾದ ಎಮ್.ಶಿವರಾಜು, ಅಬ್ದುಲ್ ವಾಜಿದ್ ಜಿಬಿಎ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಆಸ್ತಿ ತೆರಿಗೆ ಪಾವತಿಸುತ್ತಿರುವ ತೆರಿಗೆದಾರರಿಗೆ ಶೇ.5 ರಷ್ಟು ರಿಯಾಯತಿಯನ್ನು ವಿಸ್ತರಿಸಬೇಕು. ಪ್ರತಿ ವರ್ಷ ಏಪ್ರಿಲ್,ಮೇ ತಿಂಗಳಿನಲ್ಲಿ ಆಸ್ತಿ ತೆರಿಗೆಯನ್ನು ಪಾವತಿ ಸುವ ತೆರಿಗೆದಾರರಿಗೆ ಶೇ.5 ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿತ್ತು.ಆದರೆ,2026-27ನೇ ಸಾಲಿನಲ್ಲಿ ಏಪ್ರಿಲ್ ತಿಂಗಳಿನಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಿದ ತೆರಿಗೆದಾರರಿಗೆ ಮಾತ್ರ ಶೇ.5ರಷ್ಟು ರಿಯಾಯಿತಿಯನ್ನು ನೀಡಲಾಗಿದೆ. ಏ. 16 ರಿಂದ ಮೇ 15 ರ ವರೆಗೆ ಜನಗಣತಿ-2027ರ ಕೆಲಸ ಗಳು ಚಾಲ್ತಿಯಲ್ಲಿರುವ ಕಾರಣ ಕಂದಾಯ ವಿಭಾಗದ ಎಲ್ಲಾ ಸಿಬ್ಬಂದಿಗಳು ಇದರ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು ಹಲವಾರು ತೆರಿಗೆದಾರರು ನಿಗಧಿತ ಸಮಯದಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ,ಆದ್ದರಿಂದ ಸಾರ್ವಜನಿಕರ ಆರ್ಥಿಕ ಹಿತದೃಷ್ಟಿಯಿಂದ ಪ್ರತಿ ವರ್ಷದಂತೆ ನಿಗಧಿತ ಸಮಯದಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸುವ ತೆರಿಗೆದಾರರಿಗೆ ಶೇ.5 ರಷ್ಟು ರಿಯಾಯಿತಿಯನ್ನು ಮೇ.31 ರ ವರೆಗೆ ವಿಸ್ತರಿಸಬೇಕೆಂದು ಮನವಿಯಲ್ಲಿ ಆಗ್ರಹಿಸಿದ್ದಾರೆ.



ಡಯಾಗ್ನೋಸ್ಟಿಕ್‌ನಲ್ಲಿ ತಪಾಸಣೆ ವೇಳೆ ಘಟನೆ

ಮಹಿಳೆ ಜತೆ ಅಸಭ್ಯವರ್ತನೆ: ತನಿಖೆ

• **ಬೆಂಗಳೂರು:** ಖಾಸಗಿ ಡಯಾಗ್ನೋಸ್ಟಿಕ್ ಲ್ಯಾಬ್‌ವೊಂದರಲ್ಲಿ ತಪಾಸಣೆಗೆ ಬಂದಿದ್ದ ಮಹಿಳೆಯ ಜತೆ ಅಸಭ್ಯವಾಗಿ ವರ್ತಿಸಿ, ಬಳಿಕ ಜೀವಬೆದರಿಕೆ ಹಾಕಿರುವ ಘಟನೆ ಬ್ಯಾಡರಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಘಟನೆಸಂಬಂಧ ಲ್ಯಾಬ್ ಮ್ಯಾನೇಜರ್ ಪ್ರಭಾಕರ್ ಹಾಗೂ ಸಿಬ್ಬಂದಿ ಪ್ರದೀಪ್ ಎಂಬವರ ವಿರುದ್ಧ ಪ್ರಕರಣ ದಾಖಲಾಗಿದೆ. ಇತ್ತೀಚೆಗೆ ಮಹಿಳೆಯೊಬ್ಬರು ಥೈರಾಯ್ಡ್ ತಪಾಸಣೆಗಾಗಿ ಬ್ಯಾಡರಹಳ್ಳಿಯ ಪ್ರಕಾಶ್ ಡಯಾಗ್ನೋಸ್ಟಿಕ್‌ಗೆ ತೆರಳಿದ್ದರು. ರಕ್ತದ ಮಾದರಿ ಸಂಗ್ರಹಿಸುವ ಸಂದರ್ಭದಲ್ಲಿ ಲ್ಯಾಬ್ ತಂತ್ರಜ್ಞ ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸಿದ್ದಾನೆ ಎಂದು ಆರೋಪಿಸಿದ್ದಾರೆ.

ರಕ್ತ ತೆಗೆಯುವಾಗ ನೋವಾಗುತ್ತಿದೆ ಎಂದು ಮಹಿಳೆ ಕಿರುಚಿಕೊಂಡರೂ ನಿರ್ಲಕ್ಷ್ಯ ವಹಿಸಿ ಬಲವಂತವಾಗಿ ರಕ್ತ ತೆಗೆಯಲಾಗಿದೆ. ಇದರ ಪರಿಣಾಮವಾಗಿ ಮಹಿಳೆಯ ಕೈನಲ್ಲಿ ರಕ್ತ ಹೆಪ್ಪುಗಟ್ಟಿ, ತೀವ್ರ ಸ್ವರೂಪದ ಊತ ಕಾಣಿಸಿಕೊಂಡಿದೆ. ಈ ಬಗ್ಗೆ ಪ್ರಶ್ನಿಸಿದಾಗ ಐಸ್ ಪ್ಯಾಕ್ ಇಟ್ಟುಕೊಳ್ಳಿ, ಇದು ಹೆಮಟೋಮಾ ಆಗಿರಬಹುದು ಎಂದು ನಿರ್ಲಕ್ಷ್ಯದ ಉತ್ತರ ನೀಡಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮನೆಗೆ ಬಂದು ಜೀವಬೆದರಿಕೆ

ಘಟನೆಯಾಗಿ 2-3 ದಿನದ ನಂತರ ಕೈ ನೋವು ಮತ್ತು ಊತ ಹೆಚ್ಚಾದ ಹಿನ್ನೆಲೆಯಲ್ಲಿ ಮಹಿಳೆ ಲ್ಯಾಬ್‌ಗೆ ದೂರು ನೀಡಿದ್ದರು. ಈ ವೇಳೆ ವಿಷಯವನ್ನು ಬಗೆಹರಿಸಿಕೊಳ್ಳುವ ನೆಪದಲ್ಲಿ ಆಕೆ ಮನೆಗೆ ಬಂದ ಸಿಬ್ಬಂದಿ, ಹೋಗುವ ಸಮಯದಲ್ಲಿ ಈ ವಿಷಯವನ್ನು ಹೊರಗೆ ತಿಳಿಸಿದರೆ ಸುಮ್ಮನೆ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿದ್ದಾರೆ ಎಂದು ಮಹಿಳೆ ದೂರಿದ್ದಾರೆ. ಮಹಿಳೆ ನೀಡಿದ ದೂರಿನನ್ವಯ ಪ್ರಾಥಮಿಕ ತನಿಖೆ ನಡೆಸಿರುವ ಬ್ಯಾಡರಹಳ್ಳಿ ಪೊಲೀಸರು, ಆರೋಪ ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಂಡಿದ್ದಾರೆ.



ಇಂದು ನಗರದಲ್ಲಿ...

- ಯುದ್ಧ ಬೇಡ ಶಾಂತಿ ಜಾಥಾ ಕಾರ್ಯಕ್ರಮ, ಸ್ಥಳ: ಗಾಂಧಿಭವನ, ಬೆಳಗ್ಗೆ 9.30
- ಸುಧಾ ಹಾಗೂ ಕ್ರಿಸ್ ಗೋಪಾಲಕೃಷ್ಣ ಶೈಕ್ಷಣಿಕ ಭವನ ಉದ್ಘಾಟನೆ, ಸ್ಥಳ: ಚಾಣಕ್ಯ ವಿಶ್ವವಿದ್ಯಾಲಯ, ಬೆಳಗ್ಗೆ 11
- ಕಾಜಾಣ ನಾಟಕೋತ್ಸವ, ಸ್ಥಳ: ಕಲಾಗ್ರಾಮ, ಮಲ್ಲತಹಳ್ಳಿ, ಸಂಜೆ 4.30
- ವಿದುಷಿ ಗಂಗಮ್ಮ ಕೇಶವಮೂರ್ತಿ ಅವರಿಂದ ಶಿವರಾತ್ರಿ ಸಂದರ್ಶನ ಕಾವ್ಯವಾಚನ ಕುರಿತ ಉಪನ್ಯಾಸ, ಸ್ಥಳ: ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಸಂಜೆ 6.30

ಆರೆಂಜ್ ಕ್ಯಾಪ್	ಪರ್ಪಲ್ ಕ್ಯಾಪ್
ವೈಭವ್ (ರಾಜಸ್ಥಾನ್)	ಮಾಲಿಂಗಾ (ಹೈದರಾಬಾದ್)
400 ರನ್	15 ವಿಕೆಟ್





ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	8	6	2	0	12	+1.919
ರಾಜಸ್ಥಾನ್	9	6	3	0	12	+0.617
ಹೈದರಾಬಾದ್	8	5	3	0	10	+0.815
ಗುಜರಾತ್	8	4	4	0	8	-0.475
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	7	2	5	0	4	-0.736
ಲಖನೌ	8	2	6	0	4	-1.106

ಇಂದು ಅಹಮದಾಬಾದ್‌ನಲ್ಲಿ ಜಿಟಿ-ಆರ್‌ಸಿಬಿ | ಗೆಲುವಿನ ಹಳಿಗೆ ಮರಳಲು ಜಿಟಿ ಯತ್ನ | ಆರ್‌ಸಿಬಿಗೆ ಆತ್ಮವಿಶ್ವಾಸ

ಟೈಟಾನ್ಸ್ ಸವಾಲಿಗೆ ಬೆಂಗಳೂರು ಸಿದ್ಧ

ಅಹಮದಾಬಾದ್: ಗೆಲುವಿನ ಹಾದಿಯಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಗೆಲುವಿನೋಟ ಮುಂದುವರಿಸುವುದಕ್ಕೆ ಸಜ್ಜಾಗಿದೆ. ದಿಲ್ಲಿ ತಂಡದ ಮೇಲೆ ಪ್ರಾಬಲ್ಯ ಸಾಧಿಸಿದ ನಂತರ ಇದೀಗ ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ. ತವರಿನ ಎಲ್ಲಾ ಲೀಗ್ ಪಂದ್ಯಗಳನ್ನು ಮುಗಿಸಿಕೊಂಡಿರುವ ಬೆಂಗಳೂರು ಅತಿಥಿಯಾಗಿ ಅಹಮದಾಬಾದ್‌ನಲ್ಲಿ ಆಡಲಿದೆ.

ಚೆನ್ನೈ ವಿರುದ್ಧ ಗೆಲುವು ಸಾಧಿಸಿರುವ ಗುಜರಾತ್‌ಗೆ ಗೆಲುವೇ ಉಳಿಗಾಲವಾಗಿದೆ. ಅರ್ಧದಷ್ಟು ಐಪಿಎಲ್‌ನಲ್ಲಿ ಗೆಲುವು ಮತ್ತು ಸೋಲುಗಳನ್ನು ಸಮಾನವಾಗಿ ಕಂಡಿರುವ ಗಿಲ್ ಪಡೆ ಪ್ಲೇಆಫ್ ಖಾತರಿ ಪಡೆದಿಲ್ಲ. ಮುಖ್ಯವಾಗಿ ರನ್‌ರೇಟ್ ವಿಚಾರದಲ್ಲಿ ಹಿನ್ನಡೆ ಅನುಭವಿಸಿದೆ. ಚೆನ್ನೈ ತಂಡವನ್ನು ಸೋಲಿಸಿದ್ದಾದರೂ, ಉಳಿದ ಪಂದ್ಯಗಳಲ್ಲಿ ಗೆಲ್ಲಬೇಕಿರುವುದು ಅನಿವಾರ್ಯ. ಈಗಿನ ಪಂದ್ಯಗಳಲ್ಲಿ ಕಮಾಲ್ ಮಾಡಬೇಕಿರುವುದು ಅತ್ಯವಶ್ಯಕ.

ಇತ್ತ ಬೆಂಗಳೂರು ಗೆಲುವಿನ ಹಾಸಿಗೆ ಮೇಲೆ ನಡೆಯುತ್ತಿದೆ. ಹಿಂದಿನ ತವರು ಪಂದ್ಯಗಳಲ್ಲಿ ದಿಲ್ಲಿ ವಿರುದ್ಧ ಹೊರತುಪಡಿಸಿ ಎಲ್ಲಾ ಪಂದ್ಯಗಳಲ್ಲಿ ಗೆದ್ದಿದೆ. ತವರಲ್ಲದ ಪಂದ್ಯಗಳಲ್ಲಿಯೂ ಪರಾಕ್ರಮ ಸಾಧಿಸಿರುವ ಬೆಂಗಳೂರು ಅಂಕಪಟ್ಟಿಯಲ್ಲಿ ಎರಡನೇ ಸ್ಥಾನ ಹೊಂದಿದೆ. ಇನ್ನೂ ಒಂದಿಷ್ಟು ಪಂದ್ಯಗಳಲ್ಲಿ ಗೆದ್ದರೆ ಸಾಕು ಪ್ಲೇಆಫ್‌ಗೆ ಲಗ್ಗೆ ಹಾಕಲಿದೆ. ಆದಾಗ್ಯೂ ಮೊದಲೆರಡು ಸ್ಥಾನದ ಗುರಿಗಾಗಿ ಬೆಂಗಳೂರು ಗೆಲುವಿನ ಹಾದಿಯಲ್ಲಿರುವುದೇ ಸೂಕ್ತ. ಎರಡೂ ತಂಡಗಳ ಹೊಡೆದಾಟದಲ್ಲಿ ಗೆದ್ದವರಿಗೆ ಲಾಭ ಸಿಗುವುದರಿಂದ ಪಂದ್ಯ ಕುತೂಹಲಕಾರಿಯಾಗಿರಲಿದೆ.

ಆರ್‌ಸಿಬಿ ಪ್ರಾಬಲ್ಯ: ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೇಲೆ ಪಾರುಪತ್ಯ ಬೆಂಗಳೂರು ವಿಶ್ವಾಸದಲ್ಲಿದೆ. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಅಬ್ಬರಿಸಿರುವುದೇ ವಿಶೇಷ. ಮುಖ್ಯವಾಗಿ ಸ್ವಿಂಗ್ ಕಿಂಗ್, ಭುವನೇಶ್ವರ್ ಕುಮಾರ್, ವೇಗಿ ಜೋಶ್ ಹ್ಯಾಜೆಲ್‌ವುಡ್ ಭರ್ಜರಿ ಬೌಲಿಂಗ್‌ನೊಂದಿಗೆ ಮಿಂಚಿರುವುದು ತಂಡಕ್ಕೆ ಬಲ, ಅನುಭವ ಮತ್ತು ವಿಶ್ವಾಸ ತಂದಿದೆ. ಒತ್ತಡದ ಪರಿಸ್ಥಿತಿಯಲ್ಲಿ ಆರ್‌ಸಿಬಿ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡುವಲ್ಲಿ ಈ ಬಾರಿ ಯಶಸ್ವಿಯಾಗಿದ್ದು ವಿಶೇಷ. ಟೈಟಾನ್ಸ್ 200+ ಸ್ಕೋರ್ ಮಾಡಿದ್ದರೂ, ಸುಯಶ್, ಭುವನೇಶ್ವರ್ ಕುಮಾರ್ ಮತ್ತು ಹ್ಯಾಜೆಲ್‌ವುಡ್ ಜತೆಗೂಡಿ ಡೆತ್ ಓವರ್‌ಗಳಲ್ಲಿ ಸಂಘಟಿತ ಪ್ರದರ್ಶನ ನೀಡುವ ಮೂಲಕ ಟೈಟಾನ್ಸ್ ಇನ್ನೂ ದೊಡ್ಡ ಸ್ಕೋರ್ ಮಾಡದಂತೆ ನೋಡಿಕೊಂಡರು. ದಿಲ್ಲಿ ವಿರುದ್ಧದ ಪಂದ್ಯದಲ್ಲಿ ಬ್ಯಾಟರ್‌ಗಳನ್ನು ಮೊದಲಿನಿಂದಲೂ ಕಟ್ಟಿಹಾಕಿದರು. ಈ ಆವೃತ್ತಿಯಲ್ಲಿ ಆರ್‌ಸಿಬಿ ಬ್ಯಾಟಿಂಗ್ ಶೈಲಿಯನ್ನೇ ಬದಲಾಯಿಸಿಕೊಂಡಿದೆ. ಕೊಹ್ಲಿ(351), ಪಡಿಕ್ಕಲ್(242), ಪಾಟಿದಾರ್(238) ರನ್‌ಗಳನ್ನು ಈಗಾಗಲೇ ಹೊಡೆದಿದ್ದಾರೆ. ಮುಖ್ಯವಾಗಿ ಚೇಸಿಂಗ್‌ನಲ್ಲಿ ಆರ್‌ಸಿಬಿ ಬಲಾಢ್ಯ.

ಗುಜರಾತ್‌ಗೆ ಗೆಲುವಿನ ಹಂಬಲ: ಇತ್ತ ಚೆನ್ನೈ ತಂಡವನ್ನು ಸೋಲಿಸಿರುವ ಗುಜರಾತ್ ಗೆಲುವಿನ ಆಕಾಂಕ್ಷೆ ಹೊಂದಿದೆ. ಹಿಂದಿನ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದರೂ ಮುಂಬೈ ವಿರುದ್ಧದ ಸೋಲಿನಿಂದ ಹೊರಬರಲಾಗಿಲ್ಲ. ರನ್‌ರೇಟ್ ವಿಚಾರದಲ್ಲಿ ಕುಗ್ಗಿರುವ ಗುಜರಾತ್‌ಗೆ ಗೆಲುವಿನ ಹಾದಿಗೆ ಮರಳುವುದೊಂದೇ ಹಾದಿಯಾಗಿದೆ. ಶುಭಮನ್ ಗಿಲ್ (330), ಸಾಯಿ ಸುದರ್ಶನ್(322), ಜಾಸ್ ಬಟ್ಲರ್(270) ರನ್ ಗಳಿಸಿದ್ದಾರೆ. ಬ್ಯಾಟಿಂಗ್‌ನಲ್ಲಿ ಪ್ರಬಲ ಪಡೆಯನ್ನು ಹೊಂದಿರುವ ಗುಜರಾತ್, ರಬಾಡ, ಕೃಷ್ಣ, ರಶೀದ್ ಬೌಲಿಂಗ್‌ನಲ್ಲಿ ಮಿಂಚಿದ್ದಾರೆ. ಸ್ಪಿನ್ ವಿಭಾಗವನ್ನು ಮಾನವ್ ಸುತಾರ್ ಇನ್ನಷ್ಟು ಗಟ್ಟಿಗೊಳಿಸಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಅವರು ಪ್ರಮುಖ ಬ್ಯಾಟರ್‌ಗಳ ವಿಕೆಟ್ ಪಡೆದಿದ್ದಾರೆ.

ಪಿಚ್ ರಿಪೋರ್ಟ್F: ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣವು ಸಮತೋಲಿತ ವಿಕೆಟ್‌ಗಳನ್ನು ಹೊಂದಿದೆ ಮತ್ತು ಸ್ಪರ್ಧೆಯ ಎರಡೂ ಅಂಶಗಳಿಗೆ ಸಮಾನವಾಗಿ ಸಹಾಯ ಮಾಡಿದೆ. ಈ ಸ್ಥಳವು ಈ ಋತುವಿನಲ್ಲಿ ಇಲ್ಲಿಯವರೆಗೆ ಮೂರು ಮುಖಾಮುಖಿಗಳನ್ನು ಆಯೋಜಿಸಿದೆ, ಮತ್ತು ಅವುಗಳಲ್ಲಿ ಎರಡು ತಂಡಗಳು ಒಟ್ಟು ಮೊತ್ತವನ್ನು ಉಳಿಸಿಕೊಳ್ಳಲು ಅನುಕೂಲಕರವಾಗಿವೆ. ಜಿಟಿ-ಆರ್‌ಸಿಬಿ ಘರ್ಷಣೆಯ ಸಮಯದಲ್ಲಿಯೂ ಈ ಪ್ರವೃತ್ತಿ ಮುಂದುವರಿಯುವ ಸಾಧ್ಯತೆಯಿದೆ ಮತ್ತು ಈ ಋತುವಿನ ಹಿಂದಿನ ಪಂದ್ಯಗಳ ಫಲಿತಾಂಶಗಳನ್ನು ನೋಡಿದರೆ 220-230 ಕ್ಕಿಂತ ಹೆಚ್ಚಿನ ಮೊತ್ತವನ್ನು ಗೆಲುವಿನ ಮೊತ್ತವೆಂದು ಪರಿಗಣಿಸಬಹುದು.





ಮುಖಾಮುಖಿ
- ಪಂದ್ಯಗಳು:7
- ಆರ್‌ಸಿಬಿ: 4
- ಗುಜರಾತ್: 3

ಸಂಭಾವ್ಯ ತಂಡಗಳು

ಆರ್‌ಸಿಬಿ: ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್, ಜಿತೇಶ್ ಶರ್ಮ, ಕೃನಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ಜೇಕಬ್ ಬೆಥೆಲ್, ಜೋಶ್ ಹ್ಯಾಜೆಲ್‌ವುಡ್, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ರಾಸಿಖ್ ಸಲಾಂ, ವೆಂಕಟೇಶ್ ಅಯ್ಯರ್, ಅಭಿನಂದನ್ ಸಿಂಗ್, ಸುಯಶ್ ಶರ್ಮ, ಜೇಕಬ್ ಡಫಿ, ಸಾತ್ವಿಕ್ ದೇಸ್ವಾಲ್, ಮಂಗೇಶ್ ಯಾದವ್, ಜೋರ್ಡನ್ ಕಾಕ್ಸ್, ವಿಕಿ ಓಸ್ವಾಲ್, ವಿಹಾನ್ ಮಲ್ಹೋತ್ರಾ, ಕಾನಿಷ್ಕ್ ಚೌಹಾಣ್.

ಗುಜರಾತ್ ಟೈಟಾನ್ಸ್: ಶುಭಮನ್ ಗಿಲ್, ಸಾಯಿ ಸುದರ್ಶನ್, ಜೋಸ್ ಬಟ್ಲರ್, ವಾಷಿಂಗ್ಟನ್ ಸುಂದರ್, ಶಾರುಖ್ ಖಾನ್, ರಶೀದ್ ಖಾನ್, ರಾಹುಲ್ ತೆವಾಟಿಯಾ, ಕಗಿಸೊ ರಬಾಡ, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ, ಅರ್ಷದ್ ಖಾನ್, ಜೇಸನ್ ಹೋಲ್ಡರ್, ಅಶೋಕ್ ಶರ್ಮ, ಮಾನವ್ ಸುಥರ್, ದಾಸುನ್ ಶನಕ, ಅನುಜ್ ರಾವತ್, ಸಾಯಿ ಕಿಶೋರ್, ಜಯಂತ್ ಯಾದವ್, ಲುಕ್ ವುಡ್.

ಕಿರುಸುದ್ದಿ

ವೇಟ್‌ಲಿಫ್ಟಿಂಗ್: ಭಾರತಕ್ಕೆ ಮತ್ತಷ್ಟು ಪದಕ

ಹೊಸದಿಲ್ಲಿ: ಜೂನಿಯರ್ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಮತ್ತು ಯುನಿವರ್ಸಲ್ ಕಪ್ ಕೂಟಗಳಲ್ಲಿ ಭಾರತ ಉತ್ತಮ ಪ್ರದರ್ಶನ ನೀಡುತ್ತಿದ್ದು, ವಿವಿಧ ವೇಟ್‌ಲಿಫ್ಟರ್‌ಗಳು ಪೋಡಿಯಂ ಫಿನಿಶ್ ಮಾಡಿದ್ದಾರೆ. ಮಂಗಳವಾರವೇ ಪದಕ ಬೇಟೆ ಶುರು ಮಾಡಿದ್ದ ಭಾರತೀಯರು, ಬುಧವಾರದಂದು ಮತ್ತಷ್ಟು ಪ್ರಮುಖ ಪದಕ ಗೆದ್ದಿದ್ದಾರೆ. ಬೆಲ್ಲಾನಾ ಹರಿಕಾ 69 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದು ದಿನದಾಟದ ಪ್ರಾಬಲ್ಯ ಶುರು ಮಾಡಿದರು. ಮುಂದೆ ಕಾರುಂಗಿ ತರಂಗಿನಿ 63 ಕೆಜಿ ವಿಭಾಗದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು. ಮುಂದುವರಿಸಿದ ಭೂಮಿಕಾ 63ಕೆಜಿ ವಿಭಾಗದಲ್ಲೇ ಬೆಳ್ಳಿ ಪದಕ ಗೆದ್ದರು. ಯುನಿವರ್ಸಲ್ ಕಪ್ ಕೂಟದಲ್ಲಿ ಅಭಿಷೇಕ್ ನಿಪನ್ 88 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದು ಮಿಂಚಿದ್ದಾರೆ.

ಶ್ರೀಲಂಕಾ ಕ್ರಿಕೆಟ್‌ಗೆ ಸರ್ಕಾರಿ ಆಡಳಿತ

ಕೊಲಂಬೋ: ಅಧ್ಯಕ್ಷ ಶಮ್ಮಿ ಸಿಲ್ವಾ ಮತ್ತು ಆಡಳಿತ ಮಂಡಳಿ ರಾಜೀನಾಮೆ ಸಲ್ಲಿಸಿದ ನಂತರ ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯನ್ನು ಅಲ್ಲಿನ ಸರ್ಕಾರ ಕೈಗೆತ್ತಿಕೊಂಡಿದೆ. ಅಂದರೆ ಇನ್ನು ಮುಂದೆ ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯನ್ನು ಅಲ್ಲಿನ ಸರ್ಕಾರ ಮುನ್ನಡೆಸಲಿದೆ. ಹಣಕಾಸು ವಿಚಾರದಲ್ಲಿ ವಿವಾದಗಳಾದ ನಂತರ ಈ ಹಿಂದೆ ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರಾ ನೈತಿಕ ಹೊಣೆ ತೆಗೆದುಕೊಂಡು ರಾಜೀನಾಮೆ ಸಲ್ಲಿಸುವಂತೆ ಸೇಲ್ವಾ ಹಾಗೂ ತಂಡಕ್ಕೆ ಎಚ್ಚರಿಸಿದರು. ಅದರಂತೆ ಮಂಗಳವಾರದಂದು ಎಲ್ಲಾ ಪದಾಧಿಕಾರಿಗಳು ರಾಜೀನಾಮೆ ಸಲ್ಲಿಸಿದ್ದರು. ಬುಧವಾರದಂದು ಶ್ರೀಲಂಕಾ ಸರ್ಕಾರ ಕ್ರಿಕೆಟ್ ಸಂಸ್ಥೆ ಮೇಲೆ ಎಲ್ಲಾ ರೀತಿಯ ಅಧಿಕಾರ ಪಡೆಯಿತು. ಅದಕ್ಕೆ ಅನುಗುಣವಾಗಿ 1973ರ ಕ್ರೀಡಾ ಕಾನೂನು ಸಂಖ್ಯೆ 25 ರ ಸೆಕ್ಷನ್ 31 ಮತ್ತು 34 ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರಗಳ ಅಡಿಯಲ್ಲಿ, ಶ್ರೀಲಂಕಾ ಕ್ರಿಕೆಟ್‌ನ ಎಲ್ಲಾ ಆಡಳಿತಾತ್ಮಕ ಕಾರ್ಯಗಳನ್ನು ತಾತ್ಕಾಲಿಕವಾಗಿ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ಅಡಿಯಲ್ಲಿ ತರಲಾಗುತ್ತದೆ ಎಂದು ಕ್ರೀಡಾ ಸಚಿವ ಸುನಿಲ್ ಕುಮಾರ ಗಮಗೆ ಅವರ ಪ್ರಕಟಣೆ ತಿಳಿಸಿದೆ. ಅಸ್ತಿತ್ವದಲ್ಲಿರುವ ಪದಾಧಿಕಾರಿಗಳ ರಾಜೀನಾಮೆಗಳನ್ನು ಅಂಗೀಕರಿಸಲಾಗಿದೆ ಎಂದು ಗಮಗೆ ತಿಳಿಸಿದ್ದಾರೆ.

ಗಾಲ್ಫರ್ ವಿಜಯ್ ನಿಧನ

ಲಖನೌ: ಭಾರತದ ಗಾಲ್ಫರ್ ವಿಜಯ್ ಕುಮಾರ್ ಹೃದಯಾಘಾತದಿಂದ ನಿಧನರಾದರು. ಅವರಿಗೆ 57 ವಯಸ್ಸಾಗಿತ್ತು. ಲಖನೌ ಮೂಲದ ಅವರು, ಬುಧವಾರದಂದು ಕೊನೆ ಉಸಿರೆಳೆದರು. 2022ರ ಚಳಿಗಾಲದ ಇಂಡಿಯನ್ ಓಪನ್ ಗೆದ್ದಿದ್ದ ಅವರು, ನಾಲ್ಕು ಬಾರಿ ಆರ್ಡರ್ ಆಫ್ ಮೆರಿಟ್ ಚಾಂಪಿಯನ್‌ಶಿಪ್ ಅನ್ನೂ ಗೆದ್ದಿದ್ದಾರೆ. 1988ರಲ್ಲಿ ವೃತ್ತಿಪರ ಗಾಲ್ಫ್‌ಗೆ ಪದಾರ್ಪಣೆ ಮಾಡಿದ ವಿಜಯ್ ದೇಶಿ ಸ್ಪರ್ಧೆಗಳಲ್ಲಿ ಮಿಂಚಿದರು. 90ರ ದಶಕ ಅನ್ನುವಷ್ಟರಲ್ಲಿ ಅವರು ಅತ್ಯುತ್ತಮ ಆಟಗಾರರಲ್ಲಿ ಒಬ್ಬರಾದರು. 2002ರಲ್ಲಿ ವಿಜಯ್ ಇಂಡಿಯನ್ ಓಪನ್ ಗೆದ್ದರು. ಮುಂದೊಂದು ದಿನ ಅಲ್ಫ್ರೆಡ್ ದುನ್ಹಿಲ್ ಕಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ವ್ಯಾಪಿಂಗ್: ಪರಾಗ್‌ಗೆ ದಂಡ?

ಚಂಡೀಗಢ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಡ್ರೆಸ್ಸಿಂಗ್ ರೂಮ್‌ನಲ್ಲಿ ವ್ಯಾಪಿಂಗ್ ಮಾಡಿದ್ದು, ಭಾರತ ಕ್ರಿಕೆಟ್ ಮಂಡಳಿಯಿಂದ ಶಿಸ್ತು ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ. ಮಂಗಳವಾರ ನಡೆದ ಪಂಜಾಬ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ ಭರ್ಜರಿ ಗೆಲುವು ದಾಖಲಿಸಿತು. ಈ ಗೆಲುವಿನ ನಂತರ ರಿಯಾನ್ ಪರಾಗ್ ಡ್ರೆಸ್ಸಿಂಗ್ ರೂಮ್‌ನಲ್ಲಿ ವ್ಯಾಪಿಂಗ್(ಇ-ಸಿಗರೇಟ್) ಸೇವಿಸಿರುವ ವಿಡಿಯೋ ಸೆರೆಯಾಗಿದೆ. ಪರಿಣಾಮ ಬಿಸಿಸಿಐನಿಂದ ದಂಡ ಬೀಳುವ ಸಾಧ್ಯತೆ ಇದೆ. ಐಪಿಎಲ್ ಹಾಗೂ ಕ್ರಿಕೆಟ್ ಮಾನದಂಡ ಪ್ರಕಾರ ವ್ಯಾಪಿಂಗ್ ಅಪರಾಧವಾಗಿದ್ದು, 5 ಲಕ್ಷ ರೂ.ದಿಂದ ನಿಷೇಧದ ವರೆಗೂ ಶಿಕ್ಷೆ ಇರುತ್ತವೆ. ಐಪಿಎಲ್ ಪಂದ್ಯದ ವೇಳೆ ಡ್ರೆಸ್ಸಿಂಗ್ ರೂಮ್ ಅಥವಾ ಮೈದಾನದಲ್ಲಿ ಮಾಡುವುದು ಕೂಡ ಅಪರಾಧವಾಗಿದೆ.

ರಿಕೆಲ್ಟನ್ ಶತಕ: ಮುಂಬೈ 243/5

ಮುಂಬೈ: ಮುಂಬೈ ಮೈದಾನದಲ್ಲಿ ಮೆರೆದಾಡಿದ ರಯಾನ್ ರಿಕೆಲ್ಟನ್ ಹೈದರಾಬಾದ್ ಪಡೆಯನ್ನು ದಂಡಿಸಿದ್ದು, ಹಾರ್ದಿಕ್ ಪಡೆ ದೊಡ್ಡ ಮೊತ್ತ ನಿರ್ಮಿಸಿತು. ಬದಲಾದ ಬ್ಯಾಟಿಂಗ್ ಪಡೆಯೊಂದಿಗೆ ಮೈದಾನಕ್ಕಿಳಿದ ಮುಂಬೈ ಇಂಡಿಯನ್ಸ್, ರಯಾನ್ ರಿಕೆಲ್ಟನ್ ಶತಕದ ನೆರವಿನಿಂದ 20 ಓವರ್‌ಗಳಲ್ಲಿ 243/5 ಬಾರಿಸಿದೆ.

ರಿಕೆಲ್ಟನ್ ಐಪಿಎಲ್‌ನಲ್ಲಿ ತಮ್ಮ ಮೊದಲನೇ ಶತಕ ಬಾರಿಸಿದರು. ಕೇವಲ 55 ಬಾಲ್ ಎದುರಿಸಿರುವ ಅವರು, 123★ ರನ್ ಬಾರಿಸಿದರು. ಇದರಲ್ಲಿ 10 ಬೌಂಡರಿ 8 ಸಿಕ್ಸರ್ ಸೇರಿವೆ. ಇವರ ಬ್ಯಾಟಿಂಗ್‌ಗೆ ಜ್ಯಾಕ್ಸ್, ಹಾರ್ದಿಕ್ ಸಾಥ್ ಸಿಕ್ಕ ನಂತರ ಮುಂಬೈ ಅಬ್ಬರಿಸಿತು.

ಅಬ್ಬರದ ಆರಂಭ: ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಆತಿಥ್ಯದ ನಡೆಯಲ್ಲಿ ಬ್ಯಾಟಿಂಗ್ ಆಯ್ದುಕೊಂಡಿತು. ಅದರಂತೆ ವಿಲ್ ಜ್ಯಾಕ್ಸ್ ಹಾಗೂ ರಯಾನ್ ರಿಕೆಲ್ಟನ್ ಅವರ ಆಟದೊಂದಿಗೆ ಭರ್ಜರಿ ಆರಂಭ ಪಡೆಯಿತು. ರಯಾನ್ ರಿಕೆಲ್ಟನ್ ಅಬ್ಬರಕ್ಕೆ ಹೈದರಾಬಾದಿನ ಬೌಲರ್‌ಗಳು ತತ್ತರಿಸಿದರು. ಶುರುವಿನಲ್ಲಿ ಅವರ ಅಬ್ಬರಕ್ಕೆ ವಿಲ್ ಜ್ಯಾಕ್ಸ್ ಅವರ ಸಾಥ್ ಸಿಕ್ಕಿತು. ಇಬ್ಬರೂ ಹೈದರಾಬಾದ್‌ನ ಎಲ್ಲಾ ಯೋಜನೆಗಳನ್ನು ವಿಫಲಗೊಳಿಸಿದರು. ರಿಕೆಲ್ಟನ್ ಅರ್ಧಶತಕದತ್ತ ಸಾಗಿದರು. ವಿಲ್ ಜ್ಯಾಕ್ಸ್ ಕೂಡ ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿ ಸೆಟ್ ಆದರು. ಪವರ್‌ಪ್ಲೇ ಮುಕ್ತಾಯಕ್ಕೆ ಮುಂಬೈ 78 ರನ್ ಗಳಿಸಿತು.

ವೇಗದ ಶತಕ ದಾಖಲೆ

ಮುಂಬೈನಲ್ಲಿ 44 ಬಾಲ್‌ಗಳಲ್ಲಿ ಶತಕ ಬಾರಿಸಿರುವ ರಯಾನ್ ದಾಖಲೆಯೊಂದನ್ನು ಮಾಡಿದರು. ವೇಗದ ಶತಕ ಬಾರಿಸುವ ವಿಚಾರದಲ್ಲಿ ಮಿಂಚಿದ ಅವರು, ಮುಂಬೈ ಪರ ಅತಿ ವೇಗದ ಶತಕ ಬಾರಿಸಿದ ಆಟಗಾರ ಅನಿಸಿಕೊಂಡರು. ಇವರಿಗೂ ಮುನ್ನ ಈ ಸಾಧನೆ ಸನತ್ ಜಯಸೂರ್ಯ ಅವರ ಹೆಸರಲ್ಲಿತ್ತು. ಅವರು 45 ಬಾಲ್‌ಗಳಲ್ಲಿ ಶತಕ ಬಾರಿಸಿದ್ದರು.

ರಿಕೆಲ್ಟನ್ ಅಬ್ಬರ

23 ಬಾಲ್‌ಗಳಲ್ಲಿ ರಿಕೆಲ್ಟನ್ ಅರ್ಧಶತಕ ಬಾರಿಸಿದರು. ಇದು ಅವರ ಐಪಿಎಲ್‌ನ ಅತಿ ವೇಗದ ಅರ್ಧಶತಕವಾಗಿದೆ. ಪವರ್‌ಪ್ಲೇ ಮುಗಿದ ನಂತರವೂ ಇವರಿಬ್ಬರ ಅಬ್ಬರ ಮುಂದುವರಿದಿತ್ತು. ತಂಡದ ಮೊತ್ತ 93 ರನ್‌ಗಿದ್ದಾಗ 46(22ಎ, 5 ಬೌ, 3ಸಿ) ಗಳಿಸಿದ್ದ ವಿಲ್ ಜ್ಯಾಕ್ಸ್ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಸೂರ್ಯ ಕೂಡ 5 ರನ್ ಮಾತ್ರಕ್ಕೆ ವಿಕೆಟ್ ಒಪ್ಪಿಸಿದರು.
ನಮನ್ ಧೀರ್ ಸಿಂಗಲ್‌ಗಳ ಮೂಲಕ ಸೆಟ್ ಆದರೆ ಇತ್ತ ರಿಕೆಲ್ಟನ್ ಅಬ್ಬರ ಬ್ಯಾಟಿಂಗ್ ಮುಂದುವರಿಸಿದರು. ಬಾನೆತ್ತರದ ಸಿಕ್ಸರ್, ಅಬ್ಬರದ ಬೌಂಡರಿಗಳನ್ನು ಬಾರಿಸಿದ ಅವರು, 44 ಬಾಲ್ ಮಾತ್ರದಲ್ಲಿ ಶತಕ ಬಾರಿಸಿದರು. ನಮನ್ 22 ರನ್‌ಗೆ ವಿಕೆಟ್ ಒಪ್ಪಿಸಿದರು. ಅಲ್ಲಿಗೆ ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು. ಮುಂಬೈ ಈ ಓವರ್‌ಗಳಲ್ಲಿ 124 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ಪಾಂಡ್ಯ ಆರ್ಭಟ ಶುರುವಾಯಿತು.
ಇಷ್ಟು ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿದ್ದ ಹಾರ್ದಿಕ್ ಪಾಂಡ್ಯ ಆವೃತ್ತಿಯಲ್ಲಿ ಇದೇ ಮೊದಲ ಬಾರಿಗೆ ಅಬ್ಬರದ ಬ್ಯಾಟಿಂಗ್ ಮಾಡಿದರು. 2 ಬೌಂಡರಿ, 2 ಸಿಕ್ಸರ್‌ಗಳೊಂದಿಗೆ 31 ರನ್ ಮಾಡಿ ವಿಕೆಟ್ ಒಪ್ಪಿಸಿದರು. ಇತ್ತ ರಯಾನ್ ಮಾತ್ರ ಶತಕದ ನಂತರವೂ ಅಬ್ಬರದ ಬ್ಯಾಟಿಂಗ್ ಮಾಡಿದರು. ತಿಲಕ್ ವರ್ಮಾ ವಿಕೆಟ್ ಒಪ್ಪಿಸಿದರು. ಕೊನೆಯ ಓವರ್‌ನಲ್ಲಿ ಮತ್ತೆ ಮಿಂಚಿದ ರಿಕೆಲ್ಟನ್ ಪಂದ್ಯದ ಸ್ಕೋರ್ 240 ಅನ್ನು ದಾಟಿಸಿದರು. ಮುಂಬೈ ಡೆತ್ ಓವರ್‌ನಲ್ಲಿ 44 ರನ್ ಗಳಿಸಿತು.

ಟಿಟಿ: ಭಾರತಕ್ಕೆ ಭರ್ಜರಿ ಗೆಲುವು

ಹೊಸದಿಲ್ಲಿ: ಭಾರತೀಯ ಪುರುಷರ ತಂಡವು ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್‌ನಲ್ಲಿ ತನ್ನ ಅಭಿಯಾನವನ್ನು ಗೆಲುವಿನೊಂದಿಗೆ ಆರಂಭಿಸಿ ಟ್ಯುನೀಷಿಯ ವಿರುದ್ಧ 3-0 ಅಂತರದ ಸುಲಭ ಜಯ ಸಾಧಿಸಿದೆ. ಮಹಿಳಾ ತಂಡಕ್ಕೆ ಉಗಾಂಡಾ ತಂಡ ಹಾಜರಾಗದ ಕಾರಣ ವಾಕ್‌ಓವರ್ ಲಭಿಸಿದೆ.

ಮನುಷ್ ಶಾ, ಮನವ್ ಠಕ್ಕರ್ ಹಾಗೂ ಹರ್ಮೀತ್ ದೇಸಾಯಿ ಭಾರತದ ಪರ ಉತ್ತಮ ಪ್ರದರ್ಶನ ನೀಡಿದರು. ಮನುಷ್ ಶಾ ಆರಂಭಿಕ ಪಂದ್ಯದಲ್ಲಿ ವಾಸ್ಸಿಂ ಎಸ್ಸಿದ್ ವಿರುದ್ಧ 3-1 ಅಂತರದ ಜಯ ಸಾಧಿಸಿ ತಂಡಕ್ಕೆ ಮುನ್ನಡೆ ತಂದರು. ನಂತರ ಮನವ್ ಠಕ್ಕರ್ ಮತ್ತು ಹರ್ಮೀತ್ ದೇಸಾಯಿ ಇಬ್ಬರೂ 3-0 ಅಂತರದ ಸುಲಭ ಜಯ ದಾಖಲಿಸಿದರು.

ಠಕ್ಕರ್ ಅಬ್ಬರ: ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂವತ್ತೆಂಟನೇ ಸ್ಥಾನದಲ್ಲಿರುವ ಠಕ್ಕರ್, ಯೂಸೆಫ್ ಐಚ್ಚಿ ವಿರುದ್ಧ 11-3, 11-3, 11-3 ಅಂಕಗಳ ಅಂತರದಲ್ಲಿ ಏಕಪಕ್ಷೀಯ ಗೆಲುವು ಸಾಧಿಸಿದರು. ಕೊನೆಯ ಪಂದ್ಯದಲ್ಲಿ ದೇಸಾಯಿ, ಅಬೂಬಕರ್ ಬೋರಾಸ್ ವಿರುದ್ಧ 11-5, 11-4, 11-8 ಅಂತರದಲ್ಲಿ ಗೆದ್ದು ಭಾರತಕ್ಕೆ ಸಂಪೂರ್ಣ ಜಯ ತಂದುಕೊಟ್ಟರು. ಮೊದಲ ಹಂತದ ಎಳನೇ ಗುಂಪಿನಲ್ಲಿ ಭಾರತ ತಂಡ ಅಗ್ರಸ್ಥಾನಕ್ಕೇರಿದೆ. ಈ ಗುಂಪಿನಲ್ಲಿ, ಸ್ಲೋವಾಕಿಯಾ ಹಾಗೂ ಗ್ವಾಟೆಮಾಲಾ ತಂಡಗಳೂ ಸೇರಿವೆ. ಇದಕ್ಕೂ ಮೊದಲು ಮಹಿಳಾ ತಂಡಕ್ಕೆ ಉಗಾಂಡಾ ವಿರುದ್ಧದ ಪಂದ್ಯದಲ್ಲಿ 3-0 ಅಂತರದ ವಾಕ್‌ಓವರ್ ಲಭಿಸಿತು. ಪುರುಷರಂತೆ ಮಹಿಳಾ ತಂಡವೂ ಇದೇ ಹಂತದಲ್ಲಿ ಸ್ಪರ್ಧಿಸುತ್ತಿದೆ. ಅಗ್ರ ತಂಡಗಳು ಹಾಗೂ ಆತಿಥೇಯ ಇಂಗ್ಲೆಂಡ್ ಮೊದಲ ಹಂತದ ಎ ವಿಭಾಗದಲ್ಲಿ ಆಡುತ್ತಿದ್ದರೆ, ಉಳಿದ ತಂಡಗಳು ಬಿ ವಿಭಾಗದಲ್ಲಿ ಸ್ಪರ್ಧಿಸುತ್ತಿವೆ.



ಕ್ರೀಡಾ ಪ್ರಾಧಿಕಾರದಿಂದ ಸಹಾಯ

ಇದರ ಮಧ್ಯೆ ಕ್ರೀಡಾ ಪ್ರಾಧಿಕಾರವು ಚಾಂಪಿಯನ್‌ಶಿಪ್‌ಗಾಗಿ ಮಹತ್ವದ ಸಹಾಯ ಒದಗಿಸಿದೆ. ಸಿದ್ಧತೆ ಮತ್ತು ಭಾಗವಹಿಸುವಿಕೆಗಾಗಿ ತೊಂಬತ್ತಕ್ಕೂ ಹೆಚ್ಚು ಲಕ್ಷ ರೂಪಾಯಿ ಮಂಜೂರು ಮಾಡಲಾಗಿದೆ. ಬೆಂಗಳೂರಿನಲ್ಲಿ ರಾಷ್ಟ್ರೀಯ ತರಬೇತಿ ಶಿಬಿರದ ಬಳಿಕ ಶೆಫೀಲ್ಡ್‌ನಲ್ಲಿ ವಿದೇಶಿ ತರಬೇತಿ ಶಿಬಿರವೂ ಆಯೋಜಿಸಲಾಯಿತು. ಅದೇ ರೀತಿ, ತಂಡಗಳ ಭಾಗವಹಿಸುವಿಕೆಗೆ ಸಹಾಯವಾಗಲು ಟೇಬಲ್ ಟೆನಿಸ್ ಫೆಡರೇಷನ್‌ಗೆ ಸುಮಾರು ಅರವತ್ತು ಲಕ್ಷ ರೂಪಾಯಿಗೂ ಹೆಚ್ಚು ಹಣ ಬಿಡುಗಡೆ ಮಾಡಲಾಗಿದೆ.

ತಂಡ ಮಾದರಿಯ ಪಂದ್ಯದಲ್ಲಿ ಹೋಪ್ ಉಳಿಸಿದ ಕನ್ನಡಿಗ

ಥಾಮಸ್ ಕಪ್: ಆಯುಷ್‌ಗೆ ಜಯ

ಹೊಸದಿಲ್ಲಿ: ಭಾರತದ ಥಾಮಸ್ ಕಪ್ ಗುಂಪು ಹಂತದ ಅಂತಿಮ ಪಂದ್ಯದಲ್ಲಿ ಚೀನಾ ವಿರುದ್ಧ ಆಯುಷ್ ಶೆಟ್ಟಿ ಬುಧವಾರ ಮಹತ್ವದ ಜಯ ಸಾಧಿಸಿ ತಂಡದ ಆಸೆ ಜೀವಂತವಾಗಿರಿಸಿದ್ದಾರೆ. ಆಯುಷ್ ಶೆಟ್ಟಿ ಚೀನಾದ ವಿಶ್ವಕ್ರಮಾಂಕ 15 ಆಟಗಾರ ವೆಂಗ್ ಹಾಂಗ್ ಯಾಂಗ್ ವಿರುದ್ಧ 17-21, 21-13, 21-15 ಅಂಕಗಳಿಂದ 70 ನಿಮಿಷಗಳ ಹೋರಾಟದ ಪಂದ್ಯದಲ್ಲಿ ಗೆಲುವು ಸಾಧಿಸಿದರು. ಈ ಫಲಿತಾಂಶದ ಬಳಿಕ ಐದು ಪಂದ್ಯಗಳ ಸರಣಿಯಲ್ಲಿ ಚೀನಾ 2-1 ಮುನ್ನಡೆ ಕಾಯ್ದುಕೊಂಡಿದೆ.ಇದಕ್ಕೂ ಮೊದಲು ನಡೆದ ಡಬಲ್ಸ್ ಪಂದ್ಯದಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಲಿಯಾಂಗ್ ವೇಯ್ ಕಾಂಗ್ ಮತ್ತು ವಾಂಗ್ ಚಾಂಗ್ ವಿರುದ್ಧ 13-21, 21-13, 24-26 ಅಂತರದಲ್ಲಿ ಹೋರಾಟದ ಸೋಲು ಅನುಭವಿಸಿತು. ಆರಂಭಿಕ ಸಿಂಗಲ್ಸ್ ಪಂದ್ಯದಲ್ಲಿ ಲಕ್ಷ್ಯ ಸೇನ್ ವಿರುದ್ಧ ಲಿ ಶಿ ಫೆಂಗ್ 21-19, 8-21, 21-12 ಅಂಕಗಳಿಂದ ಗೆದ್ದು ಚೀನಾಕ್ಕೆ ಮುನ್ನಡೆ ತಂದಿದ್ದರು. ಭಾರತ ಈಗಾಗಲೇ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದಿದ್ದರೂ, ಚೀನಾ ವಿರುದ್ಧದ ಉತ್ತಮ ಪ್ರದರ್ಶನ ಮುಂದಿನ ಹಂತಕ್ಕೆ ಆತ್ಮವಿಶ್ವಾಸ ಹೆಚ್ಚಿಸಲಿದೆ. ಇದೀಗ ಉಳಿದಿರುವ ಪಂದ್ಯಗಳಲ್ಲಿ ಎಚ್‌ಎಸ್ ಪ್ರಣಯ್ ಹಾಗೂ ಎಂ. ಅರ್ಜುನ್ ಹರಿಹರನ್ ಅಮ್ಸಕರುಣನ್ ಡಬಲ್ಸ್ ಜೋಡಿ ಭಾರತದ ಪರ ಹೋರಾಟ ತಿರುಗಿಸುವ ಹೊಣೆ ಹೊತ್ತಿದ್ದಾರೆ.



ಶೆಟ್ಟಿ ಪರಾಕ್ರಮ

ಆಯುಷ್ ಶೆಟ್ಟಿ ಮೊದಲಿನಿಂದಲೂ ಉತ್ತಮ ಪ್ರದರ್ಶನ ನೀಡಿದರು. ಆರಂಭಿಕ ಸೆಟ್‌ನಲ್ಲಿ ಎದುರಾಳಿ ಹಾಂಗ್ ಯಾಂಗ್ ಭಾರೀ ಮುನ್ನಡೆ ಸಾಧಿಸಿದರು. ಶೆಟ್ಟಿ ಎದುರುತ್ತರ ಕೊಟ್ಟರೂ ಮೊದಲ ಸೆಟ್ ಎದುರಾಳಿ ಪಾಲಾಯಿತು. ಎರಡನೇ ಸೆಟ್‌ನಲ್ಲಿ ಕಂಬ್ಯಾಕ್ ಮಾಡಿದ ಆಯುಷ್ ಹಿಡಿತದೊಂದಿಗೆ ಗೆಲುವು ಸಾಧಿಸಿದರು. ಅಲ್ಲಿಗೆ ಸ್ಕೋರ್ 17-21, 21-13 ಇತ್ತು. ಅಂತಿಮ ಸೆಟ್‌ನಲ್ಲೂ ಶೆಟ್ಟಿ ಉತ್ತಮ ಪ್ರದರ್ಶನ ನೀಡಿದರು. ಅಲ್ಲೂ 21-15 ರಿಂದ ಗೆದ್ದು ಮುನ್ನಡೆ ತಂದರು.

ಹೊಸ ಸವಾಲುಗಳ ಮೇಲೆ ಗಮನ: ಆ್ಯಂಡಿ

ಅಹಮದಾಬಾದ್: ಹಿಂದಿನ ವರ್ಷವನ್ನು ಹಿಂದೆ ಬಿಟ್ಟು ಈ ಸೀಸನ್‌ನ ಹೊಸ ಸವಾಲುಗಳ ಮೇಲೆ ಗಮನ ಹರಿಸಿದ್ದೇವೆ. ಆಟಗಾರರು ಈ ಪ್ರಯಾಣವನ್ನು ಆನಂದಿಸುತ್ತಿದ್ದಾರೆ. ಗುರುವಾರದ ಪಂದ್ಯ ಮತ್ತೊಂದು ಉತ್ತಮ ಸವಾಲಾಗಿರಲಿದೆ, ಎಂದು ಆರ್‌ಸಿಬಿ ತಂಡದ ಪ್ರಧಾನ ಕೋಚ್ ಆ್ಯಂಡಿ ಫ್ಲವರ್ ಹೇಳಿದರು.

ಗೆಲುವು-ಸೋಲಿನ ಸಮತೋಲನದ ಬಗ್ಗೆ ಮಾತನಾಡಿದ ಅವರು, ಗೆಲುವು ಅಥವಾ ಸೋಲು ಯಾವುದನ್ನೂ ಹೆಚ್ಚು ಹೆಚ್ಚಾಗಿ ತೆಗೆದುಕೊಳ್ಳಬಾರದು. ಪ್ರತಿಯೊಂದು ಪಂದ್ಯವೂ ಹೊಸ ಸವಾಲು ನಾವು ಅದನ್ನೇ ಗಮನದಲ್ಲಿಟ್ಟುಕೊಂಡಿದ್ದೇವೆ, ಎಂದರು. ತಂಡದ ಬಲಗಳ ಕುರಿತು ಫ್ಲವರ್, ಪವರ್‌ಪ್ಲೇ ಅವಧಿಯಲ್ಲಿ ವಿಕೆಟ್ ಪಡೆಯುವಲ್ಲಿ ನಾವು ಉತ್ತಮವಾಗಿದ್ದೇವೆ. ಜೊತೆಗೆ ಬ್ಯಾಟಿಂಗ್‌ನಲ್ಲಿ ಆಳವಿದ್ದು ತಂಡಕ್ಕೆ ಆತ್ಮವಿಶ್ವಾಸ ನೀಡುತ್ತಿದೆ, ಎಂದರು.


ನರೇಂದ್ರ ಮೋದಿ ಕ್ರೀಡಾಂಗಣದ ಪರಿಸ್ಥಿತಿಗಳ ಬಗ್ಗೆ, ಯಾವುದೇ ಪರಿಸ್ಥಿತಿಗೂ ನಾವು ಸಿದ್ಧ. ವಿಭಿನ್ನ ಮೈದಾನಗಳಲ್ಲಿ ಪರಿಣಾಮಕಾರಿಯಾಗಿ ಆಡಬಲ್ಲ ದಾಳಿ ನಮ್ಮಲ್ಲಿದೆ. ಬ್ಯಾಟಿಂಗ್ ಘಟಕವೂ ಯಾವುದೇ ಪರಿಸ್ಥಿತಿಯಲ್ಲಿ ಉತ್ತಮ ಪ್ರದರ್ಶನ ನೀಡಬಲ್ಲದು, ಎಂದು ತಿಳಿಸಿದರು. ನಮ್ಮ ಸ್ಥಾನವನ್ನು ಕಾಯ್ದುಕೊಳ್ಳುವುದಕ್ಕಿಂತ ಪ್ರತಿಯೊಂದು ಪಂದ್ಯವನ್ನೂ ಧೈರ್ಯದಿಂದ ಎದುರಿಸುವುದು ಮುಖ್ಯ. ಅನಿಶ್ಚಿತತೆಯನ್ನು ಸ್ವೀಕರಿಸಿ ಆಕ್ರಮಣಕಾರಿ ಮನೋಭಾವದಿಂದ ಆಡಬೇಕು, ಎಂದರು.

ಅನುಭವ ಸಂಪನ್ನ ಸ್ವಿಂಗ್ ಬೌಲರ್‌ಗಳು, ವಿಶ್ವದರ್ಜೆಯ ವೇಗದ ಬೌಲರ್ ಹ್ಯಾಜೆಲ್‌ವುಡ್ ಹಾಗೂ ವಿಭಿನ್ನ ಕೌಶಲ್ಯಗಳ ಸ್ಪಿನ್ನರ್‌ಗಳು ನಮ್ಮಲ್ಲಿದ್ದಾರೆ. ಈ ವೈವಿಧ್ಯತೆ ವಿಭಿನ್ನ ಹಂತಗಳಲ್ಲಿ ನಮಗೆ ಸಹಕಾರಿಯಾಗುತ್ತದೆ, ಎಂದು ಹೇಳಿದರು. ತಂಡದ ನಾಯಕ ರಜತ್ ಪಾಟೀದಾರ್ ಬಗ್ಗೆ ಪ್ರಶಂಸಿಸಿದ ಫ್ಲವರ್, ಅವರು ತಂಡವನ್ನು ಅತ್ಯುತ್ತಮವಾಗಿ ಮುನ್ನಡೆಸುತ್ತಿದ್ದಾರೆ. ಸುತ್ತಲಿನ ಬೆಂಬಲದೊಂದಿಗೆ ಒಳ್ಳೆಯ ವಾತಾವರಣ ನಿರ್ಮಿಸಿದ್ದಾರೆ ಎಂದರು. ಈಗಾಗಲೇ ಉತ್ತಮ ಫಾರ್ಮ್ ಮತ್ತು ಸ್ಪಷ್ಟ ಮನೋಭಾವದೊಂದಿಗೆ ಸಾಗುತ್ತಿರುವ ಆರ್‌ಸಿಬಿ, ಗುಜರಾತ್ ಟೈಟನ್ಸ್ ವಿರುದ್ಧ ಮತ್ತೊಮ್ಮೆ ಗೆದ್ದು ತನ್ನ ಗೆಲುವಿನ ಸರಣಿಯನ್ನು ಮುಂದುವರಿಸಲು ಎದುರುನೋಡುತ್ತಿದೆ.



ಪದಬಂಧ

ರಾಜಾ ಸಂಗಮೇಶ ಹಿರೇಮಠ



5969

ಎಡದಿಂದ ಬಲಕ್ಕೆ
1.ಮಧ್ಯಾಹ್ನವನ್ನು ಹೀಗೂ ಹೇಳಬಹುದು (5)
3.ಪೂಜೆಗಾಗಿ ನೀರು ತುಂಬಿಡುವ ಬಿಂದಿಗೆ (3)
5.ಅಪಹಾಸ್ಯಕ್ಕೊಳಗಾದವನು (4)
8.ಅತಿ ಹೆಚ್ಚು ಕಾಲುವೆ, ನೀರಾವರಿ ಹೊಂದಿದ ರಾಜ್ಯ (6)
10.ಮನುಷ್ಯ-ರಾಕ್ಷಸ ಕೂಡಿ ಕಾಣುತ್ತಿದ್ದಾರೆ (6)
13.ಉಣ್ಣೆಯುಳ್ಳ ಪ್ರಾಣಿಗಳ ಪಾಲಕ ತಿರುಗಿದ್ದಾನೆ (4)
16.ಲಕ್ಷಣ-ಚಿಹ್ನೆಯಿದು (3)
17.ಗೌರವಿಸು-ಸನ್ಮಾನಿಸು (5)

ಮೇಲಿನಿಂದ ಕೆಳಕ್ಕೆ
1.ಮೃದುತನ ಮೊದಲಿರುವ ಕಣ್ಣು (3)
2.ಚರಣವಿಲ್ಲಿ ತಲೆಕೆಳಗಾಗಿದೆ (2)
3.ಪ್ರವಾಸಿಗನಿಲ್ಲಿ ತಲೆಕೆಳಗಾಗಿದ್ದಾನೆ (4)
4.ದೊಡ್ಡ ಸಭೆ-ಸಮ್ಮೇಳನವಿದು (4)
6.ಸ್ನೇಹದ ಸಮಾನಪದ (4)
7.ಮಡಿಲು ಇಲ್ಲಿ ಉಲ್ಟಾ ಕಾಣುತ್ತಿದೆ (2)
9.ಪ್ರದೇಶಕ್ಕೆ ತಕ್ಕ ಜೀವನ ಪದ್ಧತಿ (4)
10.ಕಾಣದಂತೆ ಅದೃಶ್ಯನಾಗು (4)
11.ವಿದೇಶಿಯರು ನೆಲೆಸಿರುವ ಪ್ರದೇಶ (4)
12.ಜಮಾ-ಖರ್ಚು ಬರೆದಿಡುವ ಪುಸ್ತಕ (2)
14.ನರ್ತಿಸುವಂತೆ ಮಾಡುವಿಕೆ (3)
15.ತಂಪು ಕೊಡುವ ಈ ಮರಸಮೂಹ (2)

5968 ಉತ್ತರ

ಎಡದಿಂದ ಬಲಕ್ಕೆ:
1.ದಾತೃತ್ವ
3.ಅಂಗಸಾಧನೆ 5.ಲಲಿತ
6.ಒನಪು 8.ಸವಿಗಂಪು
10.ರಾಹುಕೇತು
12.ಕಂಪನ 15.ಪಲ್ಲಟ
16.ಕಲಾಕೋವಿದ
17.ಕಾದಾಡು

ಮೇಲಿನಿಂದ ಕೆಳಕ್ಕೆ :
1.ದಾಸಾನುದಾಸ 2.ಹಲಗೆ
3.ಅಂತೆಕಂತೆ 4.ನೆನಪು
7.ಕೇತನ 9.ವಿರೂಪ
11.ತುಡುಗುಮಾಡು
12.ಜನಪದ 13.ಕಂಟಕ
14.ಜಟಕಾ

» ಮೈಸೂರಿನಲ್ಲಿ ನಡೆದ ನೈಜ ಘಟನೆ ಆಧಾರಿತ ಹಾಗೂ ಸುದೀಪ್ ಸೋದರ ಸಂಬಂಧಿ ಸಂಚಿತ್ ಸಂಜೀವ್ ನಾಯಕನಾಗಿ ನಟಿಸಿರುವ ಮ್ಯಾಂಗೋ ಪಚ್ಚ ಚಿತ್ರದ ಬಿಡುಗಡೆ ಆಗಾಗ ಮುಂದೆ ಹೋಗುತ್ತಲೇ ಇದೆ, ಇದೀಗ ಚಿತ್ರತಂಡ ಫೈನಲ್ಲಾಗಿ ಬಿಡುಗಡೆ ದಿನಾಂಕವನ್ನು ಪ್ರಕಟಿಸಿದ್ದು ಜೂನ್ 5ರಂದು ಚಿತ್ರ ರಾಜ್ಯಾದ್ಯಂತ ತೆರೆಕಾಣಲಿದೆ, ಮೈಸೂರು ಮೂಲದ ಕ್ರೈಮ್ ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರ ಇದಾಗಿದ್ದು, ಚಿತ್ರದ ಬಹುತೇಕ ಚಿತ್ರೀಕರಣವನ್ನು ಮೈಸೂರು ಸುತ್ತಮುತ್ತಲ ಭಾಗದಲ್ಲೇ ನಡೆಸಲಾಗಿದೆ. ನಾಯಕ ಸಂಚಿತ್ ಸಂಜೀವ್ ಅವರು ತಮ್ಮ ಪ್ರಥಮ ಚಿತ್ರದಲ್ಲೇ ರಗಡ್ ಆದಂಥ ರಾ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ, ಪಕ್ಕಾ ಮಾಸ್ ಎಂಟರ್‌ಟೈನ್ಮೆಂಟ್ ಕಾನ್ಸೆಪ್ಟ್ ಒಳಗೊಂಡ ಚಿತ್ರ ಇದಾಗಿದ್ದು, ಸಂಚಿತ್ ಸಂಜೀವ್ ಅವರ ಅಭಿನಯ ಚಿತ್ರದ ಬಗ್ಗೆ ಇರುವ ನಿರೀಕ್ಷೆಯನ್ನು ಹೆಚ್ಚಿಸಿದೆ.



ಜೂನ್ 5ಕ್ಕೆ ಮ್ಯಾಂಗೋ ಪಚ್ಚ

ಟೀಸರ್ ಹಾಗೂ ಲಿರಿಕಲ್ ಸಾಂಗ್ ಮೂಲಕ ದೊಡ್ಡ ಮಟ್ಟದಲ್ಲಿ ಕುತೂಹಲ ಹುಟ್ಟು ಹಾಕಿರುವ ಚಿತ್ರ, ಮ್ಯಾಂಗೋ ಪಚ್ಚ,'ಲ್ಲಿ ಕಿಚ್ಚ ಸುದೀಪ್ ಅವರ ಅಕ್ಕನ ಮಗ ಸಂಚಿತ್ ಸಂಜೀವ್ ಮೊದಲಬಾರಿಗೆ ನಾಯಕನಾಗಿ ಅಭಿನಯಿಸಿರುವ ಚಿತ್ರ ಎಂಬ ಕಾರಣಕ್ಕೆ ಕುತೂಹಲ ಮತ್ತಷ್ಟು ಹೆಚ್ಚಿದೆ. ಹೀಗೆ ಹಲವಾರು ಕಾರಣಗಳಿಂದ ಸುದ್ದಿಯಲ್ಲಿರುವ ಬಹುನಿರೀಕ್ಷಿತ ಮ್ಯಾಂಗೋ ಪಚ್ಚ ಚಿತ್ರವು ಜೂನ್ 5ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತದೆ ಎಂದು ಚಿತ್ರತಂಡ ತಿಳಿಸಿದೆ.

ಯುವಪ್ರತಿಭೆ ವಿವೇಕ್ ಅವರು ಮೊದಲಬಾರಿಗೆ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಮೈಸೂರಿನಲ್ಲಿ ನಡೆದ ಕ್ರೈಮ್, ಥ್ರಿಲ್ಲರ್ ಘಟನೆಯನ್ನು ಸ್ಫೂರ್ತಿಯಾಗಿಟ್ಟುಕೊಂಡು ಹೆಣೆದಿರುವ ರಾಸ್ಟಿಕ್ ಕಥೆ ಈ ಚಿತ್ರದಲ್ಲಿದೆ. 2001ರಿಂದ 2011ರ ಅವಧಿಯಲ್ಲಿ ಮೈಸೂರಿನಲ್ಲಿ ನಡೆದ ಪ್ರಮುಖ ಘಟನೆಗಳೇ ಮ್ಯಾಂಗೋ ಪಚ್ಚ ಚಿತ್ರದ ಪ್ರಮುಖ ಕಥಾವಸ್ತುವಾಗಿದೆ. ಹಾಗಾಗಿ ಮ್ಯಾಂಗೋ ಪಚ್ಚ ಚಿತ್ರದ ಬಹುತೇಕ ಚಿತ್ರೀಕರಣವನ್ನು ಮೈಸೂರು ನಗರದಲ್ಲೇ ನಡೆಸಲಾಗಿದೆ.

ಈಗಾಗಲೇ ಮ್ಯಾಂಗೋಪಚ್ಚ ಚಿತ್ರದ ಹಸರವ್ವ ಮತ್ತು ಅರಗಿಣಿಯೇ ಹಾಡುಗಳು ಬಿಡುಗಡೆಯಾಗಿದ್ದು ಕೇಳುಗರ ಮನಸನ್ನು ಸೂರೆಗೊಂಡಿವೆ, ಸೋಷಿಯಲ್ ಮೀಡಿಯಾದಲ್ಲಿ ಎರಡೂ ಹಾಡುಗಳು ಅತಿಹೆಚ್ಚು ವೀಕ್ಷಣೆಯಾಗುವ ಮೂಲಕ ವೈರಲ್ ಆಗಿರುವುದಲ್ಲದೆ ಪರಭಾಷಿಗರನ್ನು ಸಹ ಆಕರ್ಷಿಸಿವೆ. ಅರಗಿಣಿಯೇ ಹಾಡಿಗೆ ಕಿಚ್ಚ ಸುದೀಪ್ ಅವರ ಪುತ್ರಿ ಸಾನ್ವಿ ಸುದೀಪ್ ಹಾಗೂ ಸಪ್ತಸಾಗರದಾಚೆ ಎಲ್ಲೋ ಚಿತ್ರದ ಟೈಟಲ್ ಹಾಡಿಗೆ ದನಿಯಾಗಿದ್ದ ಕಪಿಲ್ ಕಪಿಲನ್ ದನಿಯಾಗಿದ್ದಾರೆ.

ಮ್ಯಾಗೋ ಪಚ್ಚ ಚಿತ್ರವನ್ನು ಕೆ.ಆರ್.ಜಿ. ಫಿಲಂಸ್ ಮತ್ತು ಕಿಚ್ಚ ಸುದೀಪ್ ಅವರ ಸುಪ್ರಿಯಾನ್ವಿ ಪ್ರೊಡಕ್ಷನ್ಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಇದು ಮೈಸೂರು ಭಾಗದ ಕಥೆಯಾಗಿದ್ದು, ಸಂಚಿತ್ ಸಂಜೀವ್ ರೆಟ್ರೋ ಶೈಲಿಯ ಯುವಕನಾಗಿ ಕಾಣಿಸಿಕೊಂಡಿದ್ದಾರೆ. ಸದ್ಯದಲ್ಲೇ ಮ್ಯಾಂಗೋ ಪಚ್ಚ ಚಿತ್ರದ ಟ್ರೈಲರನ್ನು ಬಿಡುಗಡೆ ಮಾಡಲು ಚಿತ್ರತಂಡ ಸಜ್ಜಾಗಿದೆ, ಈಗಾಗಲೇ ಚಿತ್ರದ ಪ್ರೊಮೋಷನ್ ಕಾರ್ಯಗಳು ಸಹ ನಡೆಯುತ್ತಿದ್ದು, ಸದ್ಯದಲ್ಲೇ ರಿಲೀಸಾಗಲಿರುವ ಟ್ರೈಲರ್‌ನಲ್ಲಿ ಚಿತ್ರದ ಬಗ್ಗೆ ಮತ್ತಷ್ಟು ಮಾಹಿತಿಗಳು ಲಭ್ಯವಾಗಲಿವೆ,

ಪಕ್ಕಾ ಮಾಸ್ ಎಂಟರ್‌ಟೈನ್ಮೆಂಟ್ ಸಿನಿಮಾ ಇದಾಗಿದ್ದು, ಸಂಚಿತ್ ಅವರ ಅಭಿನಯ ಚಿತ್ರದ ಟೀಸರ್‌ನಲ್ಲೇ ನಿರೀಕ್ಷೆಯನ್ನು ಇಮ್ಮಡಿಗೊಳಿಸಿದೆ, ಮಾವನ ಹಾಗೆ ಸಂಚಿತ್ ಕೂಡ ಚಿತ್ರರಂಗದಲ್ಲಿ ಅರಳಿ ಕಟೌಟ್ ಆಗಿ ಹೊರಹೊಮ್ಮುವ ಎಲ್ಲಾ ಲಕ್ಷಣಗಳೂ ಕಂಡುಬಂದಿವೆ,

ಸಂಚಿತ್ ಜತೆ ನಾಯಕಿಯಾಗಿ ಕಾಜಲ್ ಕುಂದರ್ ಅವರು ಕಾಣಿಸಿಕೊಂಡಿದ್ದಾರೆ. ಇನ್ನುಳಿದಂತೆ ಮಯೂರ್ ಪಟೇಲ್, ಉಗ್ರಂ ಮಂಜು, ವಿಜಯ ರಾಘವೇಂದ್ರ, ಅವರ ಅಕ್ಕನ ಮಗ ಅಜೇಯ್, ಬಿಗ್‌ಬಾಸ್ ಖ್ಯಾತಿಯ ನಟಿ ಹಂಸ, ಮಾಲಾಶ್ರೀ ಸೇರಿದಂತೆ ಬಹುದೊಡ್ಡ ತಾರಾಬಳಗವೇ ಮ್ಯಾಂಗೋ ಪಚ್ಚ ಚಿತ್ರದಲ್ಲಿದೆ. ಈ ಚಿತ್ರಕ್ಕೆ ಚರಣ್ ರಾಜ್ ಅವರ ಸಂಗೀತ ಸಂಯೋಜನೆ ಹಾಗೂ ಶೇಖರ್‌ಚಂದ್ರ ಅವರ ಛಾಯಾಗ್ರಹಣ, ವಿಶ್ವಾಸ್ ಅವರ ಕಲಾನಿರ್ದೇಶನವಿದೆ.

ಟಾಕ್ಸಿಕ್ ಬಿಡುಗಡೆ ಮತ್ತೆ ಮುಂದಕ್ಕೆ

ಈ ವರ್ಷದ ಬಹುನಿರೀಕ್ಷಿತ ಚಿತ್ರ, ಟಾಕ್ಸಿಕ್ ಬಿಡುಗಡೆ ಮತ್ತೆ ಮುಂದೆ ಹೋಗಿದೆ. ಕಳೆದ ಯುಗಾದಿ ಹಬ್ಬದಲ್ಲೇ ಈ ಸಿನಿಮಾ ರಿಲೀಸ್ ಆಗಬೇಕಿತ್ತು. ಆದರೆ, ಗ್ಲೋಬಲ್ ರಿಲೀಸ್ ಮಾಡುವುದಕ್ಕೆ ತಯಾರಿ ನಡೆಸುತ್ತಿದ್ದ ಯಶ್ ಅಂಡ್ ಟೀಮ್‌ಗೆ ಇಸ್ರೇಲ್-ಅಮೆರಿಕ ಹಾಗೂ ಇರಾನ್ ಯುದ್ಧ ಎದುರಾಗಿತ್ತು. ವಿದೇಶಿ ಆಡಿಯನ್ಸ್‌ನ್ನೂ ಗಮನದಲ್ಲಿಟ್ಟುಕೊಂಡು ಮಾಡಿದ ಚಿತ್ರ ಇದಾಗಿದ್ದರಿಂದ ಅನಿವಾರ್ಯವಾಗಿ ಬಿಡುಗಡೆಯನ್ನು ಮುಂದೂಡಬೇಕಾಯ್ತು. ಅನಂತರ ಜೂನ್ 4 ಎಂದು ಹೊಸ ರಿಲೀಸ್ ಡೇಟನ್ನು ಘೋಷಣೆ ಮಾಡಲಾಗಿತ್ತು.

ಕೆವಿಎನ್ ಪ್ರೊಡಕ್ಷನ್ಸ್ ಹಾಗೂ ಮಾನ್ಸ್‌ಟರ್ ಮೈಂಡ್ ಕ್ರಿಯೇಷನ್ಸ್ ಜಂಟಿಯಾಗಿ ನಿರ್ಮಿಸಿರುವ ಈ ಚಿತ್ರದ ಬಿಡುಗಡೆ ಮತ್ತೆ ಮುಂದೆ ಹೋಗಿದೆ. ಖುದ್ದಾಗಿ ಯಶ್ ಅವರೇ ಜೂನ್ 4ಕ್ಕೂ ಸಿನಿಮಾ ರಿಲೀಸಾಗೋದಿಲ್ಲ ಎಂದು ತಿಳಿಸಿದ್ದಾರೆ. ಅಂತರಾಷ್ಟ್ರೀಯ ಮಟ್ಟದಲ್ಲಿ ರಿಲೀಸ್ ಮಾಡುವ ಪ್ಲಾನ್ ಮಾಡಿರೋದ್ರಿಂದ ರಿಲೀಸ್ ಡೇಟ್‌ನ್ನು ಮುಂದಕ್ಕೆ ಹಾಕಿರೋದಾಗಿ ನಿರ್ಮಾಣ ಸಂಸ್ಥೆಗಳು ಅಧಿಕೃತವಾಗಿ ಹೇಳಿವೆ.

ಟಾಕ್ಸಿಕ್ ಚಿತ್ರದ 9 ನಿಮಿಷಗಳ ತುಣುಕನ್ನು ಸಿನಿಮಾಕಾನ್ ನಲ್ಲಿ ಪ್ರದರ್ಶನ ಮಾಡಲಾಗಿತ್ತು. ಆಬಳಿಕ ಚಿತ್ರದ ಬಗ್ಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ದೊಡ್ಡಮಟ್ಟದ ಬೆಳವಣಿಗೆಯಾಗಿದೆ ಎಂದು ಚಿತ್ರತಂಡ ಹೇಳಿದೆ. ಕೆಲ ಮೂಲಗಳ ಪ್ರಕಾರ, ಈ ಚಿತ್ರವನ್ನು ಇಂಗ್ಲಿಷ್‌ನಲ್ಲಿ ರಿಲೀಸ್ ಮಾಡಲು ಹಾಲಿವುಡ್‌ನ ಬಿಗ್ ನಿರ್ಮಾಣ ಸಂಸ್ಥೆ ವಾರ್ನರ್ ಬ್ರದರ್ಸ್ ಜೊತೆಗೂ ಮಾತುಕತೆ ನಡೆಸಲಾಗುತ್ತಿದೆ. ಹೀಗಾಗಿ ಇಂಟರ್‌ನ್ಯಾಷನಲ್ ಚಿತ್ರವಿತರಣಾ ಸಂಸ್ಥೆಗಳ ಜೊತೆಗೆ ಸಹಭಾಗಿತ್ವಕ್ಕೆ ಹೆಚ್ಚು ಸಮಯ ಹಿಡಿಯುತ್ತಿದ್ದು, ಈ ಕಾರಣಕ್ಕೆ ಚಿತ್ರದ ಬಿಡುಗಡೆಯನ್ನು ಮುಂದೂಡಲಾಗಿದೆ.

ಪ್ರೇಕ್ಷಕರಿಗೆ ಯಶ್ ನೀಡಿದ ಸಂದೇಶ

ಕೆಲವು ಚಿತ್ರಗಳನ್ನು ನಾವು ಮಾಡುತ್ತೇವೆ. ಆದರೆ, ಅವುಗಳಲ್ಲಿ ಕೆಲವು ಸಿನಿಮಾಗಳು ನಾವು ಚಿತ್ರರಂಗವನ್ನು ಇಷ್ಟಪಟ್ಟಿದ್ದೇಕೆ ಅನ್ನೋದನ್ನು ನೆನಪಿಸುತ್ತವೆ. ಟಾಕ್ಸಿಕ್ ಅಂತಹ ಒಂದು ಪಯಣ. ಸಿನೆಮಾಕಾನ್‌ನಲ್ಲಿ ನಮ್ಮ ಚಿತ್ರವನ್ನು ಪ್ರದರ್ಶಿಸಿದಾಗ ಸಿಕ್ಕ ಅಭೂತಪೂರ್ವ ಜಾಗತಿಕ ಪ್ರತಿಕ್ರಿಯೆಯಿಂದ ವಿಶ್ವದಾದ್ಯಂತ ಪೂರ್ಣ ಸಾಮರ್ಥ್ಯದೊಂದಿಗೆ ತಲುಪಬೇಕು ಎಂಬ ನಮ್ಮ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ. ಟಾಕ್ಸಿಕ್ ಸಿನಿಮಾ ಸಿದ್ಧವಾಗಿದೆ. ಸದ್ಯ ನಾವು ಗ್ಲೋಬಲ್ ಡಿಸ್ಟ್ರಿಬ್ಯೂಷನ್ ಹಾಗೂ ಸಹಭಾಗಿತ್ವದ ಕಡೆಗೆ ಹೆಚ್ಚು ಗಮನ ಹರಿಸಿದ್ದೇವೆ. ಈ ಹಿನ್ನೆಲೆಯಲ್ಲಿ, ನಾವು ಚಿತ್ರದ ಬಿಡುಗಡೆಯ ಸಮಯವನ್ನು ಮುಂದಕ್ಕೆ ಹಾಕಲು ನಿರ್ಧರಿಸಿದ್ದೇವೆ. ಈ ಮೊದಲು ಅನೌನ್ಸ್ ಮಾಡಿದ್ದಂತೆ ಜೂನ್ 4 ರಂದು ಸಿನಿಮಾ ಬಿಡುಗಡೆಯಾಗುವುದಿಲ್ಲ, ಬದಲಾಗಿ ಜಾಗತಿಕ ಮಾರುಕಟ್ಟೆಗೆ ಪೂರಕವಾದ ದಿನದಂದು ವಿಶ್ವದಾದ್ಯಂತ ತೆರೆಕಾಣಲಿದೆ. ಟಾಕ್ಸಿಕ್ ಶೀಘ್ರದಲ್ಲೇ ನಿಮ್ಮ ಹತ್ತಿರದ ಚಿತ್ರಮಂದಿರಗಳಿಗೆ ಬರಲಿದೆ. ಜಾಗತಿಕ ವೇದಿಕೆಯಲ್ಲಿ ಭಾರತೀಯ ಚಿತ್ರರಂಗದ ಧ್ವನಿ ಬಲವಾಗಿ ಕೇಳಿಸುತ್ತಿದೆ. ಈ ಸಮಯದಲ್ಲಿ, ಗುಣಮಟ್ಟವನ್ನು ಹೆಚ್ಚಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಒಬ್ಬ ನಟ ಮತ್ತು ನಿರ್ಮಾಪಕನಾಗಿ, ನಮ್ಮ ಸಿನಿಮಾ ಜಾಗತಿಕ ಮಟ್ಟದಲ್ಲಿ ಅಂದುಕೊಂಡ ಪ್ರಭಾವವನ್ನು ಬೀರುವಂತೆ ಮಾಡಲು ಈ ಸಮಯವನ್ನು ತೆಗೆದುಕೊಳ್ಳುತ್ತಿದ್ದೇನೆ. ಇದು ಭಾರತೀಯ ಚಿತ್ರರಂಗಕ್ಕೆ ನಾನು ನೀಡುವ ಸಣ್ಣ ಕೊಡುಗೆ ಎಂದು ಭಾವಿಸುತ್ತೇನೆ. ಪ್ರತಿಯೊಂದು ಹಂತದಲ್ಲೂ ನಿಮ್ಮ ಬೆಂಬಲ ನನ್ನೊಂದಿಗಿದೆ, ಅದಕ್ಕಾಗಿ ನಾನು ಚಿರಋಣಿ. ಕೆಲವು ಕಥೆಗಳು ತಾಳ್ಮೆಯನ್ನು ಬಯಸುತ್ತವೆ. ಕೆಲವು ಪಯಣಗಳು ಅದನ್ನು ಕೇಳುತ್ತವೆ. ನಿಮ್ಮ ಸಂಭ್ರಮಕ್ಕೆ ಸೂಕ್ತ ಸಿನಿಮಾ ನೀಡುವುದಾಗಿ ನಾವು ಭರವಸೆ ನೀಡುತ್ತೇವೆ – ಇದು ಭಾರತೀಯ ಚಿತ್ರರಂಗ ಹೆಮ್ಮೆ ಪಡುವಂತಹ ಕ್ಷಣವಾಗಲಿದೆ ಎಂದು ಯಶ್ ಸಂದೇಶ ನೀಡಿದ್ದಾರೆ.



ಡಾ.ರಾಜಕುಮಾರ್ ಎಂದರೆ ಆರು ಕೋಟಿ ಕನ್ನಡಿಗರ ಭಾವನೆ: ನಿಖಿಲ್



ಡಾ.ರಾಜಕುಮಾರ್ ಎಂದರೆ ಆರು ಕೋಟಿ ಕನ್ನಡಿಗರ ಭಾವನೆ. ಅಂಥಾ ಅಣ್ಣಾವ್ರ ಬಗ್ಗೆ ಹಗುರವಾಗಿ ಮಾತನಾಡುವುದು ಅಹಂಕಾರದ ಪರಮಾವಧಿ. ಹೆಸರಿನಲ್ಲಿ ಅಹಿಂಸೆ ಇರಬಹುದು. ಆದರೆ, ನಿಮ್ಮ ಪ್ರತಿಯೊಂದು ಮಾತೂ ಕನ್ನಡಿಗರ ಭಾವನೆಗಳಿಗೆ ಮಾಡುವ ಹಿಂಸೆ ಎಂದು ನಟ ನಿಖಿಲ್ ಕುಮಾರಸ್ವಾಮಿ ಅವರು ನಟ ಚೇತನ್ ಅಹಿಂಸಾ ಅವರ ವಾದದ ಬಗ್ಗೆ ತಿರುಗೇಟು ನೀಡಿದ್ದಾರೆ.

ಕನ್ನಡದ ವರನಟ ಡಾ.ರಾಜಕುಮಾರ್ ಅವರ ಸಮಾಧಿಗೆ ಸರ್ಕಾರ ನೀಡಿದ ಜಾಗದ ಕುರಿತು ನಟ ಚೇತನ್ ಮಂಡಿಸಿದ ವಾದದ ಕುರಿತು ಪ್ರತಿಕ್ರಿಯೆ ನೀಡಿದ ನಿಖಿಲ್ ಅವರು, ಗೋಕಾಕ್ ಚಳವಳಿಯ ಮೂಲಕ ಕನ್ನಡಕ್ಕೆ ಅಸ್ಮಿತೆ ತಂದುಕೊಟ್ಟ ಧೀಮಂತ ವ್ಯಕ್ತಿತ್ವದ ಬಗ್ಗೆ ಟೀಕಿಸುವ ಮೊದಲು ಅವರ ಇತಿಹಾಸವನ್ನೊಮ್ಮೆ ತಿಳಿದುಕೊಳ್ಳಿ ಎಂದು ಸಲಹೆ ನೀಡಿದರು. ಸಾರ್ವಜನಿಕ ಜೀವನದಲ್ಲಿ ಟೀಕೆಗಳು ಸಹಜವಾದರೂ ಅವುಗಳಿಗೆ ಒಂದು ಘನತೆ ಇರಬೇಕು. ನಮ್ಮ ಕುಟುಂಬದ ಮೇಲಿನ ವೈಯಕ್ತಿಕ ದಾಳಿ ಅಥವಾ ಸೋಲು-ಗೆಲುವಿನ ಮಾತುಗಳನ್ನು ನಾವು ಸದಾ ವಿನಮ್ರತೆಯಿಂದಲೇ ಸ್ವೀಕರಿಸುತ್ತೇವೆ. ಪ್ರಜಾಪ್ರಭುತ್ವದಲ್ಲಿ ಅಂತಿಮ ತೀರ್ಪುಗಾರರು ಜನರೇ ಹೊರತು, ಸಮಾಜದಲ್ಲಿ ದ್ವೇಷ ಬಿತ್ತುವ ವ್ಯಕ್ತಿಗಳಲ್ಲ, ಸಂಸ್ಕಾರ ಮನೆಯಿಂದಲೇ ಬರಬೇಕು. ಟೀಕೆಗಳು ಜನರ ಪ್ರೀತಿಯ ಅಭಿಪ್ರಾಯದ ಮೇಲಿರಬೇಕು. ಕೇವಲ ಪ್ರಚಾರದ ಹಪಾಹಪಿಯಿಂದಲ್ಲ ಎಂದು ನಿಖಿಲ್ ಕುಮಾರಸ್ವಾಮಿ ಅವರು ನಟ ಚೇತನ್‌ಗೆ ತಿರುಗೇಟು ನೀಡಿದ್ದಾರೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26